






ಜಾನಪದ ಪುಸ್ತಕ ಮಾಲೆ - ೫೪

ಕರ್ನಾಟಕ ಜಾನಪದ ಪರಿಷತ್ತು: ನಡೆದು ಬಂದ ಹಾದಿ

ಡಾ. ಚಕ್ಕೆರೆ ಶಿವಶಂಕರ್



ಜಾನಪದ ಪುಸ್ತಕ ಮಾಲೆ – ೫೪

ಕರ್ನಾಟಕ ಜಾನಪದ ಪರಿಷತ್ತು : ನಡೆದು ಬಂದ ಹಾದಿ

ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು
ನಂ. 1, ಜಲದರ್ಶಿನಿ ಬಡಾವಣೆ
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು –560 054

KARNATAKA JANAPADA PARISHAT : NADEDU BANDA HAADI - by Dr. Chakkre Shivashankar, Published by Karnataka Janapada Parishath, No.1, Jaladarshini Layout, Near M.S. Ramaiah Hospital Gate, New BEL Road, Bangalore-560 054. Phone: 080-23605033. Janapada Loka : 7201143/727155

ಹಕ್ಕುಗಳು : ಲೇಖಕರಿಗೆ ಸೇರಿವೆ
ಪ್ರಥಮ ಮುದ್ರಣ : 2010
ಪುಟಗಳು : iv + 60
ಬೆಲೆ : ರೂ. **20/-**

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜಾನಪದ ಜನಪ್ರಿಯ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ-ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕಡಿಮೆ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕಮಾಲೆಗೆ ಡಾ. ಚಕ್ಕೆರೆ ಶಿವಶಂಕರ್ ಅವರು 'ಕರ್ನಾಟಕ ಜಾನಪದ ಪರಿಷತ್ತು: ನಡೆದು ಬಂದ ಹಾದಿ' ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

■ ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಪೀಠಿಕೆ

ಮುಂಗೋಳಿ ಕೂಗ್ಯಾವೆ; ಮೂಡು ಕೆಂಪೇರ್ಯಾವೆ

ಬ್ರಿಟಿಷರು ಭಾರತಕ್ಕೆ ಬರುವವರೆಗೂ ಭಾರತೀಯರಿಗೆ ಜಾನಪದದ ಬಗೆಗಿನ ತಿಳಿವಳಿಕೆ ಇರಲಿಲ್ಲ. ಕನ್ನಡದ ಸಂದರ್ಭದಲ್ಲಿಯೂ ಅಂತಹುದೊಂದು ಜಾನಪದ ಪ್ರಜ್ಞೆಯನ್ನು ಹುಟ್ಟುಹಾಕಿದುದಲ್ಲದೆ, ಆ ಮೂಲಕ ಕನ್ನಡ ಜಾನಪದ ಅಧ್ಯಯನಕ್ಕೆ ನಾಂದಿ ಹಾಡಿದವರು ಬ್ರಿಟಿಷರು. ವ್ಯಾಪಾರಕ್ಕೆಂದು ಭಾರತಕ್ಕೆ ಕಾಲಿರಿಸಿದ ಈಸ್ಟ್ ಇಂಡಿಯಾ ಕಂಪನಿಯು ರಾಜಕೀಯ ಮತ್ತು ಧಾರ್ಮಿಕ ಕಾರಣಗಳಿಗಾಗಿ ಸ್ಥಳೀಯ ಸಂಸ್ಕೃತಿ – ಭಾಷೆಯತ್ತ ಗಮನ ಹರಿಸಬೇಕಾಗಿ ಬಂತು. ಆಡಳಿತದ ಸರಾಗ ನಿರ್ವಹಣೆಗಾಗಿ ಮತ್ತು ಕ್ರೈಸ್ತ ಧರ್ಮದ ಪ್ರಚಾರಕ್ಕಾಗಿ ಜನರ ಬದುಕನ್ನು ಅರಿಯ ಬೇಕಾಯಿತು. ಕನ್ನಡ ನಾಡಿನ ಜನಸಮುದಾಯದ ಬದುಕು ಜಾನಪದದ ವೈವಿಧ್ಯಮಯ ಪ್ರಕಾರಗಳಿಂದ ಪ್ರಭಾವಿಸಲ್ಪಟ್ಟಿದ್ದುದನ್ನು ಬ್ರಿಟಿಷ್ ಅಧಿಕಾರಿಗಳು ಮತ್ತು ಕ್ರೈಸ್ತ ಮಿಷನರಿಗಳು ಗ್ರಹಿಸಿದರು. ಇದನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ದಿಕ್ಕಿನಲ್ಲಿ ಚಿಂತಿಸಿದ ಅವರು ಜನಪದ ಗೀತೆ, ಕಥೆ, ಗಾದೆ, ಲಾವಣಿ, ಒಗಟು ಸಂಸ್ಕೃತಿಯಂತಹ ವಿಷಯಗಳತ್ತ ಸಹಜವಾಗಿ ಆಕರ್ಷಿತರಾದರು. ಜನರ ಭಾಷೆಯನ್ನು ಕಲಿಯುವುದರ ಮೂಲಕ, ಜನರ ನಡವಳಿಕೆಗಳನ್ನು ತಿಳಿದುಕೊಂಡರು. ಪ್ರಾದೇಶಿಕ ಸಂಸ್ಕೃತಿಯ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆರಂಭಕ್ಕೆ ತಮ್ಮನ್ನು ಆಕರ್ಷಿಸಿದ ಜನಪದ ಗೀತೆ, ಕಥೆ, ಗಾದೆ, ಸಾಹಿತ್ಯ–ಸಂಗೀತದ ದನಿಗಳನ್ನು ಸಂಗ್ರಹಿಸಿ, ದಾಖಲಿಸುವ ಆಸಕ್ತಿಯೆಡೆಗೆ ಹೊರಳಿಕೊಂಡರು. ಹೀಗೆ ಕರ್ನಾಟಕ ಜಾನಪದ ಅಧ್ಯಯನಕ್ಕೆ ಸಹಜ ಕುತೂಹಲದಿಂದ ಕೈಯಿಕ್ಕಿದ ಅಬೆ ಮಬಾಯ್ಸ್, ಜಾನ್ ಲೇಡನ್,

ಮೋಗ್ಲಿಂಗ್, ಚಾರ್ಲ್ಸ್ ಗೋವರ್, ಕಿಟ್ಟೆಲ್, ಫ್ಲೀಟ್, ಮೆಕೆಂಜಿ–ಮುಂತಾದ ವಿದೇಶಿ ಅಧಿಕಾರಿಗಳು ಮತ್ತು ಮಿಷನರಿಗಳ ಪ್ರಯತ್ನಗಳಿಂದಾಗಿ ಕನ್ನಡ ಜಾನಪದ ಕ್ಷೇತ್ರಕ್ಕೆ ಅಮೂಲ್ಯವಾದ ಆಕರಗಳು ದೊರೆತವು. ಬ್ರಿಟಿಷರು ಜಾನಪದದ ಮೇಲಿನ ಪ್ರೀತಿಯಿಂದ ಕೆಲಸ ಮಾಡಿದರೊ ಇಲ್ಲಾ ಸ್ವಲಾಭಕ್ಕಾಗಿ ಈ ಕಾರ್ಯದಲ್ಲಿ ತೊಡಗಿಸಿಕೊಂಡರೊ ಎಂಬುದು ಆನುಷಂಗಿಕ ವಿಚಾರ. ಆದರೆ ಈ ಕಾಲಘಟ್ಟದಲ್ಲಿ ಕನ್ನಡ ಜಾನಪದ ಕ್ಷೇತ್ರಕ್ಕೆ ದೊರೆತಿದ್ದು ಮಾತ್ರ ಅತ್ಯಂತ ಪ್ರಾಮಾಣಿಕವಾದ ದಾಖಲೆಗಳೆಂಬುದು ನಿರ್ವಿವಾದ. ಜನ ಬದುಕಿನೊಂದಿಗೆ ನೇರ ಸಂಬಂಧವನ್ನಿರಿಸಿಕೊಂಡು, ಕ್ಷೇತ್ರಕಾರ್ಯ ನಡೆಸಿ, ಊರೂರು ಸುತ್ತಿ ಜಾನಪದ ಸಾಮಗ್ರಿಯನ್ನು ಸಂಗ್ರಹಿಸಿದ್ದರ ಫಲವಾಗಿ, ಕಾಲಗರ್ಭದಲ್ಲಿ ಕಣ್ಮರೆಯಾಗಿ ಹೋಗುತ್ತಿದ್ದ ಬಹುಪಾಲು ಜನಪದ ಸಾಹಿತ್ಯ ಮತ್ತು ಚಾರಿತ್ರಿಕ ದಾಖಲೆಗಳು ಲಭಿಸಿದವು. ಈ ದೃಷ್ಟಿಯಿಂದ ಆಂಗ್ಲರ ಆಸಕ್ತಿ ಮತ್ತು ಜಾನಪದದ ಬಗೆಗಿನ ಕಳಕಳಿಗಳನ್ನು ಮೆಚ್ಚಬೇಕಾದದ್ದೇ ಸರಿ.

ಬ್ರಿಟಿಷರ ಅನಂತರ, ಸ್ವಾತಂತ್ರ್ಯಪೂರ್ವದಲ್ಲಿ ಕೆಲಸಮಾಡಿದ ದೇಶೀ ಅಭಿವೃದ್ಧಿ ಚಿಂತಕರು, ಜಾನಪದದ ಹಿರಿಮೆ–ಗರಿಮೆ, ಸಾರ–ಸತ್ವ, ಸೊಗಸು–ಸಂರಕ್ಷಣೆಗಳ ಅಗತ್ಯವನ್ನು ನಾಡಿನಾದ್ಯಂತ ಪತ್ರಿಕೆಗಳ ಮೂಲಕ ಸಾರಲಾರಂಭಿಸಿದರು. ಹಲಸಂಗಿ ಸೋದರರು ಕ್ರಿ.ಶ. 1931ರಲ್ಲಿ ಪ್ರಕಟಿಸಿದ 'ಗರತಿಯ ಹಾಡುಗಳು' ಎಂಬ ಜನಪದ ಗೀತೆಗಳ ಸಂಕಲನವು ಕನ್ನಡ ಜಾನಪದ ಕ್ಷೇತ್ರದಲ್ಲಿ ನೂತನ ಮನ್ವಂತರವನ್ನು ಆರಂಭಿಸಿದುದಲ್ಲದೆ ಜಾನಪದದ ಬಗ್ಗೆ ಹೊಸ ಸಂಚಲನವನ್ನುಂಟುಮಾಡಿತು. ಈ ಸಂಗ್ರಹಕ್ಕೆ ಮುನ್ನುಡಿ ಬರೆದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯ ಅವರು ಪ್ರಸ್ತಾಪಿಸಿದ 'ಜನವಾಣಿ ಬೇರು; ಕವಿವಾಣಿ ಹೂವು' ಎಂಬ ಹೇಳಿಕೆಯು ಅದುವರೆಗಿನ ಹಳೆಗನ್ನಡ ಸಾಹಿತ್ಯದ ಪರಿಕಲ್ಪನೆಯನ್ನು ಒಮ್ಮೆಗೇ ಮಗುಚಿಹಾಕಿಬಿಟ್ಟಿತು. ಬೇಂದ್ರೆ, ಕುವೆಂಪು, ಮಾಸ್ತಿ, ಬೆಟಗೇರಿ ಕೃಷ್ಣಶರ್ಮರಂತಹ ಸಶಕ್ತ ಬರಹಗಾರರು ಹೊಸಗನ್ನಡವನ್ನು ಕಟ್ಟುತ್ತಿದ್ದ ಕಾಲವದು. ಮಾಸ್ತಿ, ದೇವುಡು, ಗೊರೂರು, ಸಿಂಪಿ ಲಿಂಗಣ್ಣ, ಅರ್ಚಕ ಬಿ. ರಂಗಸ್ವಾಮಿ, ತೀ. ನಂ. ಶ್ರೀಕಂಠಯ್ಯ, ಶಿವರಾಮ ಕಾರಂತರಂತಹ ಲೇಖಕರ ದೊಡ್ಡ ದಂಡು ಒಮ್ಮೆಗೇ ಜನಪದ ಸಾಹಿತ್ಯ ಚಿಂತನೆಗೆ ಪ್ರಾರಂಭಿಸಿದ್ದಲ್ಲದೆ, ಲೇಖನಗಳನ್ನು, ಸಂಗ್ರಹಗಳನ್ನು, ಕೃತಿಗಳನ್ನು ಪ್ರಕಟಿಸಿ ಜಾನಪದ ಆಂದೋಲನವನ್ನೇ ಆರಂಭಿಸಿತು. ಕುವೆಂಪು ಅವರಂತೂ ತಮ್ಮ ಕಥೆ, ಕಾದಂಬರಿಗಳಲ್ಲಿ ಜನಪದರ ಬದುಕು

ಮತ್ತು ಸಂಸ್ಕೃತಿಯ ಅಗಾಧವಾದ ವೈವಿಧ್ಯತೆ ಹಾಗೂ ಸೂಕ್ಷ್ಮತೆಗಳನ್ನು ಅಸದೃಶವಾಗಿ ಅನಾವರಣಗೊಳಿಸಿದರು. ಕನ್ನಡ ವಿದ್ವತ್ ಲೋಕದಲ್ಲಿ ಅದುವರೆವಿಗೂ ಅಸ್ಪೃಶ್ಯವಾಗಿಯೇ ಉಳಿದಿದ್ದ ಜಾನಪದವು, ಒಮ್ಮೆಗೆ ಎದೆತೆರೆದು, ಮನಬಿಚ್ಚಿ ಮಾತನಾಡಲಾರಂಭಿಸಿತು.

ಸ್ವಾತಂತ್ರ್ಯಾನಂತರದ ಅವಧಿಯಲ್ಲಿ, ಎದ್ದುಬಂದ ಜಾನಪದ ಮಹಾನ್ ಪ್ರವರ್ಧಕ ದೇ. ಜವರೇಗೌಡರು ಕನ್ನಡ ಜಾನಪದಕ್ಕೆ ಹಾಕಿದ ಸಾಂಸ್ಥಿಕ ಬುನಾದಿ ಅವಿಸ್ಮರಣೀಯವಾದುದು. ಜೀ.ಶಂ.ಪರಮಶಿವಯ್ಯನವರ 'ಜನಪದ ಸಾಹಿತ್ಯ ಸಮೀಕ್ಷೆ' ಕೃತಿಗೆ ದೇಜಗೌ ಬರೆದ ಮುನ್ನುಡಿಯು, ಮುಂದಿನ ಜಾನಪದ ಅಧ್ಯಯನಕಾರರಿಗೆ ಮತ್ತು ಜಾನಪದ ಸಂಸ್ಥೆಗಳನ್ನು ಹುಟ್ಟುಹಾಕಬೇಕೆನ್ನುವವರಿಗೆ ಮಾರ್ಗದರ್ಶಿಯಾಯಿತು. 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ. ಸಾಮಾಜಿಕ ಜೀವನದ ಸಂಕೇತ. ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು. ಅದು ಜನಸಾಮಾನ್ಯರ ಶ್ರುತಿಯೂ ಅಹುದು; ಸ್ಮೃತಿಯೂ ಅಹುದು' ಎಂದು ಬಲವಾಗಿ ಪ್ರತಿಪಾದಿಸಿದ ದೇಜಗೌ ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರಕಾರ್ಯ ನಡೆಯಬೇಕಾಗಿದೆ' ಎಂದು ಸಾರಿದರು. ಬಹುಜನರ ವಿರೋಧದ ನಡುವೆಯೂ ಜಗ್ಗದೆ, ಕ್ರಿ.ಶ. 1966ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ಜಾನಪದವನ್ನು ಶೈಕ್ಷಣಿಕ ವಿಷಯವನ್ನಾಗಿ ಜಾರಿಗೆ ತಂದರು. ಆ ಮೂಲಕ, ನಾಡಿನ ಎಲ್ಲಾ ಜಾನಪದ ವಿಶ್ವವಿದ್ಯಾಲಯಗಳಲ್ಲೂ ಜಾನಪದವನ್ನು ಬೋಧಿಸಲು ಚಾಲನೆನೀಡಿದರು. ಅಲ್ಲದೆ, ಮೈಸೂರು ವಿಶ್ವವಿದ್ಯಾಲಯದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿ ಬೆಳೆಸಿದರು. ದೇಜಗೌ ಅವರ ಅಪಾರವಾದ ಜಾನಪದ ನಿಷ್ಠೆ, ಬದ್ಧತೆ, ಪರಿಶ್ರಮ, ಕಾರ್ಯತತ್ಪರತೆಗಳಿಂದಾಗಿ ಕನ್ನಡನಾಡಿನಲ್ಲಿ ಮೊತ್ತ ಮೊದಲ ಬಾರಿಗೆ ಜಾನಪದಕ್ಕೆ ವ್ಯವಸ್ಥಿತವಾದ ಸಾಂಸ್ಥಿಕ ಸ್ವರೂಪ ಸಿದ್ಧಿಸಿತು.

ಜಾನಪದಕ್ಕೆ ಸಾಂಸ್ಥಿಕ ಸ್ವರೂಪವನ್ನು ತಂದುಕೊಡುವಲ್ಲಿ, ಜಾನಪದ ಸಂರಕ್ಷಣೆ, ಸಂವರ್ಧನೆ, ಪ್ರಸಾರ ಮತ್ತು ಪ್ರಚಾರಗಳು ಸಾಧ್ಯ ಎಂಬ ಭವಿಷ್ಯದ ಯೋಜನೆಗೆ ಬುನಾದಿ ಹಾಕಿದವರು ದೇಜಗೌ. ಅದುವರೆಪಿಗೂ ವೈಯಕ್ತಿಕ ನೆಲೆಯಲ್ಲಿ ನಡೆಯುತ್ತಿದ್ದ ಜಾನಪದ ಅಧ್ಯಯನ, ಸಂರಕ್ಷಣೆ, ಸಂಗ್ರಹ ಕಾರ್ಯಗಳು

ಬಹುಮುಖ ಸಾಧ್ಯತೆಗಳನ್ನು ಪಡೆದುಕೊಳ್ಳಲು ಸಂಸ್ಥೆಯೊಂದರ ಅಗತ್ಯವಿದ್ದಿತು. (ತರೀಕೆರೆ ಸಮ್ಮೇಳನದ ಸಂದರ್ಭದಲ್ಲಿ ಹುಟ್ಟಿಕೊಂಡ ಕರ್ನಾಟಕ ಜಾನಪದ ಪರಿಷತ್ತು ಕೆಲವೇ ದಿನಗಳಲ್ಲಿ ಬಾಲಾರಿಷ್ಟಕ್ಕೆ ಒಳಗಾಗಿ ಕಣ್ಮುಚ್ಚಿತು. 'ಜಾನಪದ' ಪತ್ರಿಕೆ ಮತ್ತೆ ಕಾಡಿನತ್ತ ಹೊರಟಿತು) ವಿಶ್ವವಿದ್ಯಾಲಯಗಳು ಜಾನಪದ ಅಧ್ಯಯನ, ಸಂಶೋಧನೆ, ಬೋಧನೆ, ಪ್ರಕಟಣೆಗಳ ಕೆಲಸವನ್ನು ಸುಲಲಿತವಾಗಿ ನಿರ್ವಹಿಸಬಹುದು. ಆದರೆ ಜನಪದ ಕಲೆಗಳು, ಉತ್ಸವಗಳು, ಮೇಳಗಳಂತಹ ಆಚರಣೆಗಳ ಕ್ಷೇತ್ರದಲ್ಲಿ ಕಾರ್ಯೋನ್ಮುಖವಾಗುವುದು ವಿಶ್ವವಿದ್ಯಾಲಯಗಳಿಗೆ ಕಷ್ಟಸಾಧ್ಯವಾಗಿತ್ತು. ಅಲ್ಲದೆ, ಜಾನಪದವು ವ್ಯಷ್ಟೀಕೃತವಾದರೂ ಸಮಷ್ಟಿಯ ಸ್ವತ್ತು-ಸಮಷ್ಟಿ ಸ್ವರೂಪದಲ್ಲಿ ಬೆರೆತುಹೋಗಿರುವ ಅಸಂಖ್ಯಾತ ಅಜ್ಞಾತ ಜನಪದ ಕಲಾವಿದರುಗಳನ್ನು ಗುರುತಿಸಿ ಗೌರವಿಸಬೇಕಾಗಿತ್ತು. ಮೂಲೆಗುಂಪಾಗಿದ್ದ, ನಶಿಸಿಹೋಗಿದ್ದ ಜನಪದ ಕಲೆಗಳಿಗೆ ಮತ್ತೆ ಚೈತನ್ಯ ತುಂಬಿ ಮುಂಚೂಣಿಗೆ ತರಬೇಕಾಗಿತ್ತು. ಒಟ್ಟಿನಲ್ಲಿ ಜಾನಪದದ ಸರ್ವಾಂಗೀಣ ಬೆಳವಣಿಗೆಗಾಗಿ, ಜಾನಪದಕ್ಕೆ ಮೀಸಲಾದ ಸಂಸ್ಥೆಯೊಂದರ ಅವಶ್ಯಕತೆ ಇದ್ದಿತು. ಇಂತಹ ಸಂದಿಗ್ಧ ಸಂದರ್ಭದಲ್ಲಿ, ಜಾನಪದ ಪೂರ್ವಸೂರಿಗಳಾದ ದೇಶೀ ಅಭಿವೃದ್ಧಿ ಚಿಂತಕರು ಆರಂಭಿಸಿದ ಜಾನಪದ ಆಂದೋಲನವನ್ನು ಮತ್ತೆ ಕೈಗೆತ್ತಿಕೊಂಡು, ಕರ್ನಾಟಕ ಜಾನಪದ ಪರಿಷತ್ತು ಎಂಬ ಸಂಸ್ಥೆಯನ್ನು ಹುಟ್ಟು ಹಾಕುವುದರ ಮೂಲಕ, ಜಾನಪದ ತೇರನ್ನು ಮುನ್ನಡೆಸಿದವರು ಶ್ರೀ ಎಚ್.ಎಲ್.ನಾಗೇಗೌಡರು. ಈ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಚರಿತ್ರೆ ಎಂದರೆ ಕೇವಲ ಸಂಸ್ಥೆಗೆ 25 ವರ್ಷಗಳು ತುಂಬಿದ ನೆಪಕ್ಕೆ ನಡೆಸಿದ ಜಾನಪದ ಚಟುವಟಿಕೆಗಳ ವರದಿಯಲ್ಲ. ಅದು ನಾಡಿನ ಸಂಸ್ಕೃತಿ ಮತ್ತು ಜಾನಪದಗಳ ಚರಿತ್ರೆಯಾಗಿದೆ.

ಕರ್ನಾಟಕ ಜಾನಪದ ಪರಿಷತ್ತಿನ ಸ್ಥಾಪನೆ :
ಜ್ಯೋತಿ ಹಚ್ಚೇವು ನೀತೀಲಿ ಕಯ್ಯ ಮುಗುದೇವು

ಆಧುನಿಕ ಕನ್ನಡ ಸಾಹಿತ್ಯ, ಅನುವಾದ ಸಾಹಿತ್ಯ ಮತ್ತು ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ನವೋದಯ ಕನ್ನಡ ಸಾರಸ್ವತ ಲೋಕದ ಹಿರಿಯರಲ್ಲಿ ಎಚ್.ಎಲ್.ನಾಗೇಗೌಡರದು ಗಮನಾರ್ಹವಾದ ಹೆಸರು. ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಅಚ್ಚಳಿಯದ ಸೇವೆ ಸಲ್ಲಿಸಿರುವ ಗೌಡರದು ಬಹುಮುಖ ಪ್ರತಿಭೆ. ಐ.ಎ.ಎಸ್. ಅಧಿಕಾರಿಯಾಗಿ, ಕವಿಯಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ,

ಅನುವಾದಕರಾಗಿ, ಜಾನಪದ ಸಂಗ್ರಾಹಕ–ಸಂಶೋಧಕ–ನಿರ್ಮಾತೃವಾಗಿ ಗೌಡರು ನಾಡಿಗೆ ಅನನ್ಯವಾದ ಕೊಡುಗೆ ನೀಡಿರುತ್ತಾರೆ.

ಒಂದು ಕಾಲಕ್ಕೆ ರಾಗಿ, ತೆಂಗಿನಕಾಯಿ ವ್ಯಾಪಾರಕ್ಕೆ ಹೆಸರಾಗಿದ್ದ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಹೆರಗನಹಳ್ಳಿ ನಾಗೇಗೌಡರ ಹುಟ್ಟೂರು. ಬಸ್ಸು, ಬೈಸಿಕಲ್‌ಗಳನ್ನೇ ಕಂಡರಿಯದ ಊರಿನಲ್ಲಿ 1915ರ ಫೆಬ್ರವರಿ 11ರಂದು ದೊಡ್ಡಮನೆ ಕುಟುಂಬದಲ್ಲಿ ಹುಟ್ಟಿದರು. ಹುಟ್ಟಿದ ಮೂರೇ ವರ್ಷಗಳಿಗೆ, ಹೆತ್ತ ತಾಯಿ ಇನ್‌ಫ್ಲೂಯೆಂಜಾ ರೋಗದಿಂದ ಸಾವನ್ನಪ್ಪಿದರು. ಅಜ್ಜಿಯ ಅಂದರೆ ತಂದೆಯ ತಾಯಿಯ ಆರೈಕೆಯಲ್ಲಿ ಬೆಳೆದ ನಾಗೇಗೌಡರ ಬಾಲ್ಯ ಅಸಾಧಾರಣವಾದುದು. ಗ್ರಾಮೀಣ ಪರಿಸರದಲ್ಲಿ ದನಕರು ಕುರಿಗಳೊಂದಿಗೆ, ಸೋಬಾನೆ ಪದಗಳೊಂದಿಗೆ, ಕುಣಿತ ಮೆರೆತಗಳೊಂದಿಗೆ ಹಬ್ಬಹರಿದಿನ, ತೇರುಜಾತ್ರೆ, ಆಟೋಟಗಳೊಂದಿಗೆ ಬಾಲ್ಯ ಕಳೆದರು. ಮಗ ಅಮಲ್ದಾರನಾಗಬೇಕೆಂಬ ತಂದೆಯ ಆಸೆಗೆ ನೀರೆರೆದು, ದೊಡ್ಡಮನೆಯ ವಿಶಾಲವಾದ ಜಗಲಿಯ ಮೇಲಣ ಕೂಲಿಮಠದಿಂದ ಆರಂಭಗೊಂಡು, ಅಳೀಸಂದ್ರ, ನಾಗತಿಹಳ್ಳಿ, ಚನ್ನರಾಯಪಟ್ಟಣ, ಚನ್ನಪಟ್ಟಣ, ಮೈಸೂರನ್ನು ದಾಟಿ ಪೂನಾದಲ್ಲಿ ಎಲ್‌ಎಲ್‌ಬಿ ಪದವಿ ಗಳಿಸುವುದರೊಂದಿಗೆ ಬಿ.ಎಸ್‌ಸಿ., ಎಲ್‌ಎಲ್.ಬಿ ಡಬ್ಬಲ್ ಗ್ರಾಜುಯೇಟ್ ಎನಿಸಿಕೊಂಡರು. ಮೈಸೂರು ಸಿವಿಲ್ ಸರ್ವೀಸ್ ಸ್ಪರ್ಧಾಪರೀಕ್ಷೆಯಲ್ಲಿ ತೇರ್ಗಡೆಯಾಗಿ ರೆವಿನ್ಯೂ ಪ್ರೊಬೇಷನರಿ ಅಧಿಕಾರಿಯಾಗಿ ಸರ್ಕಾರಿ ಸೇವೆಯನ್ನಾರಂಭಿಸಿದ ಗೌಡರು ತಮ್ಮ ಕರ್ತವ್ಯನಿಷ್ಠೆ, ದಕ್ಷತೆ, ಪ್ರಾಮಾಣಿಕತೆಗಳಿಂದ ಅಧಿಕಾರದ ಒಂದೊಂದೇ ಮೆಟ್ಟಿಲು ಏರುತ್ತಾ ಐ.ಎ.ಎಸ್. ಶ್ರೇಣಿಗೆ ಆಯ್ಕೆಯಾದರು. ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳ ಜಿಲ್ಲಾಧಿಕಾರಿಗಳಾಗಿ ಬಹುಮುಖ ಸೇವೆ ಸಲ್ಲಿಸಿ ಜನಪ್ರಿಯ ಜನಪರ ಜಿಲ್ಲಾಧಿಕಾರಿ ಎಂಬ ಪ್ರಶಂಸೆಗೆ ಪಾತ್ರರಾದರು. 1969ರಲ್ಲಿ ರಾಜ್ಯದ ಲೇಬರ್ ಕಮೀಷನರ್ ಆಗಿ ಬೆಂಗಳೂರಿನಲ್ಲಿ ಖಾಯಂ ಆಗಿ ನೆಲೆಸಿದರು. ಮೂರೂವರೆ ದಶಕಗಳಷ್ಟು ದೀರ್ಘಕಾಲ ಸರ್ಕಾರದ ವಿವಿಧ ಉನ್ನತ ಹುದ್ದೆಗಳಲ್ಲಿ ಜನಸೇವೆಯೇ ಜನಾರ್ಧನ ಸೇವೆ ಎಂದು ದುಡಿದ ಗೌಡರನ್ನು ಸರ್ಕಾರವು 1973ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರನ್ನಾಗಿ ನೇಮಿಸಿತು. ಗೌಡರು ಆಯೋಗದ ಸದಸ್ಯರಾಗಿದ್ದುಕೊಂಡು, 1979ರಲ್ಲಿ ನಿವೃತ್ತಿಯಾಗುವ ವರೆವಿಗೂ ಗ್ರಾಮೀಣ ಪ್ರದೇಶಗಳಿಂದ ಬಂದ ಸಾವಿರಾರು ವಿದ್ಯಾವಂತ ಯುವಕರಿಗೆ ವಿವಿಧ ಇಲಾಖೆಗಳಲ್ಲಿ ಉದ್ಯೋಗಗಳನ್ನು ಒದಗಿಸಿಕೊಟ್ಟರು. ಗೌಡರ

ಸೇವೆಯನ್ನು ಗುರುತಿಸಿ ಕನಾಟಕ ಸರ್ಕಾರವು 1995ರಲ್ಲಿ ವಿಧಾನಪರಿಷತ್ತಿನ ಸದಸ್ಯರನ್ನಾಗಿ ನಾಮಕರಣ ಮಾಡಿತು.

ನಾಗೇಗೌಡರು ಸರ್ಕಾರದ ಅಧಿಕಾರಿಯಾಗಿ ತಮಗೆ ಒದಗಿ ಬಂದ ಸಂದರ್ಭ, ಸನ್ನಿವೇಶ, ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡರು. ಗ್ರಾಮೀಣ ಪರಿಸರದಲ್ಲಿ ಹುಟ್ಟಿ, ಗ್ರಾಮೀಣ ಪ್ರದೇಶದಲ್ಲಿ ಅಧಿಕಾರ ನಿರ್ವಹಿಸಿ, ಗ್ರಾಮೀಣರ ಪ್ರೀತಿ ವಿಶ್ವಾಸಗಳನ್ನು ಗಳಿಸಿದರು. ಇದು ಎಲ್ಲಾ ಸರ್ಕಾರಿ ಅಧಿಕಾರಿಗಳಿಗೂ ಸಾಧ್ಯವಾಗುವುದಿಲ್ಲ. ಇಂತಹ ಕೈಂಕರ್ಯಕ್ಕೆ ಸಹೃದಯತೆ ಇರಬೇಕು, ಪ್ರತಿಭೆ ಇರಬೇಕು, ಮೇಲಾಗಿ ಸಾಹಿತ್ಯ ಶ್ರೀಮಂತಿಕೆ ಇರಬೇಕು. ಗೌಡರು ಹಳ್ಳಿಯ ಬಾಳುಬದುಕನ್ನು ಬಹುಹತ್ತಿರದಿಂದ ಗಾಢವಾಗಿ ಅನುಭವಿಸಿದವರು; ಅನುಭವಿಸಿದ್ದನ್ನು ಹೇಳುವ ಶಕ್ತಿ ಉಳ್ಳವರಾಗಿದ್ದರು. ಫಲವಾಗಿ ಇವರ ಬರವಣಿಗೆಯಲ್ಲಿ ಒಡಮೂಡಿದ 'ದೊಡ್ಡಮನೆ', 'ನನ್ನೂರು', 'ಭೂಮಿಗೆ ಬಂದ ಗಂಧರ್ವ', 'ಸೊನ್ನೆಯಿಂದ ಸೊನ್ನೆ'ಗೆ ಮೊದಲಾದ ಸೃಜನಶೀಲ ಕೃತಿಗಳು ಹಳ್ಳಿಯ ಬಾಳಿನ ಚಿತ್ರಣಗಳಾಗಿ ಕಂಗೊಳಿಸಿದವು. ಹಾಡು, ಕುಣಿತ, ಮೆರೆತಗಳಿಲ್ಲದ ಬದುಕು ಬದುಕೇ ಅಲ್ಲ ಎನ್ನುವ ಖಚಿತ ನಿರ್ಧಾರ ಗೌಡರದಾಗಿತ್ತು. ಗ್ರಾಮೀಣ ಸಾಹಿತ್ಯ ಸಂಪತ್ತನ್ನು ಒಳಗೊಂಡಿರುವ ಅಮೂಲ್ಯ ಜಾನಪದವನ್ನು ಉಳಿಸಿಕೊಳ್ಳುವುದಷ್ಟೇ ಅಲ್ಲ; ಬೆಳೆಸಿಕೊಳ್ಳಬೇಕೆಂಬ ತುಡಿತ ಗೌಡರಲ್ಲಿತ್ತು. ಗೌಡರ ಅಂತರಾಳದಲ್ಲಿದ್ದ ಜಾನಪದ ಪ್ರೀತಿಗೆ ದೀಕ್ಷೆ ಕೊಟ್ಟವಳು ಹೆರಗನಹಳ್ಳಿ ಹೆಚ್ಚಿನ ಗರತಿ ಸೋಬಾನೆ ಚಿಕ್ಕಮ್ಮ. ಸೋಬಾನೆ ಚಿಕ್ಕಮ್ಮನ ಹಾಡುಗಳಿಗೆ ಮನಸೋತ ಗೌಡರು ಜನಪದ ಗೀತ ಸಾಹಿತ್ಯದ ಧ್ವನಿಮುದ್ರಣಕ್ಕೆ ತಮ್ಮನ್ನು ಒಪ್ಪಿಸಿಕೊಂಡರು. ಗೌಡರು ಬೆಂಗಳೂರಿಗೆ ಬರುವುದಕ್ಕಿಂತ ಮೊದಲು ಮೈಸೂರಿನಲ್ಲಿ ಫುಡ್ ಅಸಿಸ್ಟೆಂಟ್ ಆಗಿದ್ದಾಗ ದೇಜಗೌ ಅವರ ಗರಡಿಯಲ್ಲಿ ಕೆಲಕಾಲ ಪಳಗಿದ್ದರು. ಜಾನಪದದ ಬಗ್ಗೆ ವೈಯಕ್ತಿಕ ನೆಲೆಯಲ್ಲಿ ನಡೆಯುತ್ತಿದ್ದ ಅಷ್ಟಿಷ್ಟು ಕೆಲಸಕಾರ್ಯಗಳನ್ನು ಗಮನಿಸಿದ್ದರು. ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳಾಗಿದ್ದಾಗ ಎರಡನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ಮತ್ತು ಬೆಂಗಳೂರಿನಲ್ಲಿ ಲೇಬರ್ ಕಮಿಷನರ್ ಆಗಿದ್ದಾಗ ನಾಗಮಂಗಲದಲ್ಲಿ ಮೂರನೆಯ ಜಾನಪದ ಸಮ್ಮೇಳನವನ್ನು ನಡೆಸಿದ್ದರು. ಇಂತಹ ಸಂದರ್ಭದಲ್ಲಿ ನಾಗೇಗೌಡರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣ ಅವರ ಪರಿಚಯವಾಯಿತು. ಈ ಸಂದರ್ಭವನ್ನು ಶ್ರೀ ನಾಗೇಗೌಡರ ಮಾತಿನಲ್ಲೇ ಕೇಳಬಹುದು.

"ಬೆಂಗಳೂರಿಗೆ ಬರುವುದಕ್ಕಿಂತ ಮುಂಚೆ ನಾರಾಯಣರ ಪರಿಚಯ ನನಗಿರಲಿಲ್ಲ. ಅದಕ್ಕೆ ಸಂದರ್ಭವೇ ಒದಗಿರಲಿಲ್ಲ. ನಾನು ಲೇಬರ್ ಕಮಿಷನರ್ ಆಗಿ ಬೆಂಗಳೂರಿಗೆ ಬಂದಾಗ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಬೆಂಗಳೂರಿಗೆ ಬಂದ ನನ್ನ ಅವರ ಪರಿಚಯ ಯಾವುದೋ ಸಂದರ್ಭದಲ್ಲಿ ಆಯಿತು. ಅಂದಿನಿಂದ ಅವರಿಗೂ ನನಗೂ ಬಿಡಲಾರದ ಬಾಂಧವ್ಯ ಬೆಳೆದು ಬಂದಿದೆ. ಶ್ರೀ ರಾಮಕೃಷ್ಣ ಪರಮಹಂಸರು ಕಾಳಿಕಾದೇವಿಯನ್ನು ಪೂಜಿಸುತ್ತಿದ್ದ ಭಕ್ತಿಗಿಂತ ಮಿಗಿಲಾಗಿ ಸಾಹಿತ್ಯ ಪರಿಷತ್ತಿನ ಪೂಜಾರಿಯಾಗಿ ಅವರು ಅತ್ಯಂತ ಶ್ರದ್ಧಾಭಕ್ತಿಗಳಿಂದ ಕನ್ನಡಮ್ಮನನ್ನು ಆರಾಧಿಸುತ್ತಿದ್ದಾರೆ. ಕನ್ನಡದ ಸರ್ವತೋಮುಖ ಏಳಿಗೆಗೆ ಅವರು ಹಾಕಿಕೊಂಡ ಯೋಜನೆಗಳು ಒಂದಲ್ಲಾ ಎರಡಲ್ಲಾ. ಆ ಯೋಜನೆಗಳು ಕಾರ್ಯಗತವಾಗುವುದಕ್ಕೆ ಬೇಕಾದ ಹಣವನ್ನು ಸರ್ಕಾರದಿಂದ ಪಡೆಯುವುದು, ಪಡೆದ ಹಣವನ್ನು ವ್ಯರ್ಥವಾಗದಂತೆ ಖರ್ಚುಮಾಡುವುದು, ಏನು ಮಾಡಿದರೂ ಅಚ್ಚುಕಟ್ಟಾಗಿ ಮಾಡುವುದು. ಅನೇಕ ಕಾರ್ಯಕರ್ತರನ್ನು ತಮ್ಮ ಸುತ್ತಮುತ್ತ ಇಟ್ಟುಕೊಂಡು ಅವರಿಂದ ಸಂತೋಷವಾಗಿ ಕೆಲಸ ಮಾಡಿಸುವುದು. ಯಾರಲ್ಲಿಯೂ ದ್ವೇಷಾಸೂಯೆಗಳನ್ನು ಇಟ್ಟುಕೊಳ್ಳದೆ ಶುದ್ಧಹಸ್ತರಾಗಿ ಕೆಲಸಮಾಡುವುದು ಅವರ ಗುಣಗಳು. ಕನ್ನಡದ ಕೀರ್ತಿಪತಾಕೆಯನ್ನು ಇಡೀ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಹೊರನಾಡುಗಳಲ್ಲಿ ಮತ್ತು ದೇಶದ ರಾಜಧಾನಿ ದೆಹಲಿಯಲ್ಲೂ ಮೆರೆಸಿದರು. ಅವರ ಕಾರ್ಯವೈಖರಿಯೇ ಬೇರೆ. ಇಂಥವರು ನನ್ನನ್ನು ಸಾಹಿತ್ಯ ಪರಿಷತ್ತಿನ ಪ್ರಕಟಣಾ ಸಮಿತಿಯಲ್ಲಿ ಸೇರಿಸಿಕೊಂಡರು. ನನ್ನ ಸೋಬಾನೆ ಚಿಕ್ಕಮ್ಮನ ಪದಗಳನ್ನು ನಾನೇ ಮಣಿಪಾಲ್ ಪವರ್ ಪ್ರೆಸ್ಸಿನಲ್ಲಿ ಮುದ್ರಣ ಮಾಡಿಸುತ್ತಿದ್ದೆ. ಇದನ್ನು ತಿಳಿದ ಅವರು ಜನಪದ ಸಾಹಿತ್ಯ ಕನ್ನಡ ಸಾಹಿತ್ಯದ ಒಂದು ಅಂಗ. ಅದರ ಪ್ರಕಟಣೆಯೂ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕವೇ ಆಗಬೇಕೆಂದು ಹೇಳಿ ಹಾಗೆ ಮಾಡಿದರು" (ನಾಗಸಿರಿ ಆತ್ಮಕಥೆಯಿಂದ).

ಜಾನಪದ ಬೆಳವಣಿಗೆಗೆ ಯಾವ ಸಂಘ ಸಂಸ್ಥೆಯ ಮುದ್ರೆಯು ಬೀಳದಿದ್ದ ಕಾಲದಲ್ಲಿ ಮತ್ತು ಜಾನಪದದ ಬಗ್ಗೆ ಹೆಚ್ಚಾಗಿ ಯಾರೂ ತಲೆಕೆಡಿಸಿಕೊಂಡಿರದಿದ್ದ ಕಾಲದಲ್ಲಿ ನಾಗೇಗೌಡರು ಶ್ರೀ ಜಿ.ನಾರಾಯಣ ಅವರೊಂದಿಗೆ ಸೇರಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಜಾನಪದ ಕೆಲಸವನ್ನು ಆರಂಭಿಸಿದರು. ಜಾನಪದದ ಉಳಿವು ಬೆಳವಣಿಗೆಗಾಗಿ ನಾಗೇಗೌಡರು ವಿಸ್ತೃತವಾದ ಯೋಜನೆಯೊಂದನ್ನು

ರೂಪಿಸಿದರು. ಜಾನಪದಕ್ಕೆ ಪ್ರತ್ಯೇಕವಾದ ಸಂಸ್ಥೆಯ ಅಗತ್ಯವನ್ನು ಪ್ರತಿಪಾದಿಸಲು ಮುಂದಾದರು.

ಬೇರೆಲ್ಲಾ ವಿಷಯಗಳಿಗೆ ಅಕಾಡೆಮಿ ಇದ್ದು, ಜಾನಪದಕ್ಕೆ ಅಕಾಡೆಮಿ ಇಲ್ಲ ಎನ್ನುವುದಾದರೆ ಜಾನಪದಕ್ಕೆ ಅನನ್ಯತೆ ಇಲ್ಲ. ತನ್ನದೇ ಆದ ಅಸ್ತಿತ್ವ ಇಲ್ಲ. ಜಾನಪದವು ಅಕಾಡೆಮಿಯ ವಿಷಯವಾಗಿ ರೂಪುಗೊಳ್ಳುವುದಕ್ಕೆ ಅನರ್ಹವಾದುದು ಎಂಬ ಭಾವನೆ ಸಮುದಾಯದಲ್ಲಿ ಮೂಡುತ್ತದೆ. ಇದರಿಂದ ಜಾನಪದದ ಬಗ್ಗೆ ತಪ್ಪು ಸಂದೇಶ ಒಂದನ್ನು ಸಾರ್ವಜನಿಕರಿಗೆ ನೀಡಿದಂತಾಗುತ್ತದೆ. ಜನಪದ ಕಲೆಗಳು, ಕಲಾವಿದರು ಮತ್ತಷ್ಟು ಕೀಳರಿಮೆಯಿಂದ ಕುಗ್ಗಿ ಹೋಗುತ್ತಾರೆ ಎಂಬ ಕಳಕಳಿ ಗೌಡರದಾಗಿತ್ತು. ಈ ದಿಸೆಯಲ್ಲಿ ಜಾನಪದದ ಅನನ್ಯತೆಯನ್ನು ಕಾಯ್ದುಕೊಳ್ಳುವ, ಜಾನಪದದ ಘನತೆಯನ್ನು ಸರ್ವರೂ ಗೌರವಿಸುವಂತೆ ಮಾಡುವ ಸಲುವಾಗಿ ನಾಗೇಗೌಡರು ಜಾನಪದ ಅಕಾಡೆಮಿಯ ಸ್ಥಾಪನೆಗಾಗಿ ನಾಡಿನ ಹಲವಾರು ವೇದಿಕೆಗಳಲ್ಲಿ ದನಿ ಎತ್ತಿದರು. ಸರ್ಕಾರವನ್ನು ಮೇಲಿಂದ ಮೇಲೆ ಒತ್ತಾಯಪಡಿಸಿದರು.

ನಿರ್ಲಕ್ಷಕ್ಕೆ ಒಳಗಾದ, ತಿರಸ್ಕಾರಕ್ಕೆ ಗುರಿಯಾದ ಜನಪದ ಕಲಾವಿದರಿಗೆ ಜನಪದ ಕಲೆ–ಸಾಹಿತ್ಯ–ಸಂಸ್ಕೃತಿಗೆ ನ್ಯಾಯ ದೊರಕಿಸಿಕೊಡುವ ಸಲುವಾಗಿ ಹೋರಾಡುತ್ತಿದ್ದ ನಾಗೇಗೌಡರ ಗ್ರಾಮೀಣ ಅಂತಃಕರಣದ ಕೂಗು ಸರ್ಕಾರವನ್ನು ಮುಟ್ಟದಿದ್ದರೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಜಿ.ನಾರಾಯಣರ ಹೃದಯಕ್ಕೆ ತಟ್ಟಿತು. ಕಳೆದ ಹಲವಾರು ವರ್ಷಗಳಿಂದ ತಮ್ಮೊಂದಿಗಿದ್ದುಕೊಂಡು ಜಾನಪದದ ಬೆಳವಣಿಗೆಗಾಗಿ ಶ್ರಮಿಸುತ್ತಿದ್ದ, ತಪಿಸುತ್ತಿದ್ದ ನಾಗೇಗೌಡರ ಆಂತರ್ಯವನ್ನು ಜಿ.ನಾರಾಯಣ ಅವರು ಚನ್ನಾಗಿ ಬಲ್ಲವರಾಗಿದ್ದರು. ಇದಕ್ಕಾಗಿ, ಯೋಜನಾ ಪಟುಗಳಾದ ಶ್ರೀ ನಾರಾಯಣ ಅವರು ಗುಪ್ತ ವಿಷಯಸೂಚಿಯೊಂದನ್ನು ರೂಪಿಸಿಕೊಂಡು ಅವಕಾಶಕ್ಕಾಗಿ ಕಾಯುತ್ತಿದ್ದರು. ಈ ಮಧ್ಯೆ ನಾಗೇಗೌಡರು ಲೋಕಸೇವಾ ಆಯೋಗದ ಸದಸ್ಯತ್ವದಿಂದ ನಿವೃತ್ತಿ ಹೊಂದಿದರು. ನಾಗೇಗೌಡರ ನಿವೃತ್ತಿಯನ್ನು ಅವಕಾಶವನ್ನಾಗಿಸಿಕೊಂಡ ಜಿ.ನಾರಾಯಣ ಅವರು, ಗೌಡರು ನಿವೃತ್ತರಾದ ಸಂದರ್ಭದಲ್ಲಿ ಅವರಿಗೊಂದು ಸಾರ್ವಜನಿಕ ಸನ್ಮಾನ ಸಮಾರಂಭವನ್ನು ಏರ್ಪಡಿಸಿ ನಿಧಿ ಸಮರ್ಪಿಸುವ ಯೋಜನೆಯನ್ನು ಹಮ್ಮಿಕೊಂಡರು. ನಾರಾಯಣ ಅವರ ಕಾರ್ಯವೈಖರಿಯೇ ಅಂತಹುದು.

ಅವರ ಅಧ್ಯಕ್ಷತೆಯಲ್ಲೇ ಸಮಿತಿಯೊಂದು ರಚನೆಯಾಯಿತು. ಗೌಡರ ಆಸಕ್ತಿಯ ಕ್ಷೇತ್ರವಾದ ಜಾನಪದ ಚಟುವಟಿಕೆಗಳಿಗೆ ಮೀಸಲಾದ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬ ಸದಾಶಯ ಸಮಿತಿಯದಾಯಿತು. 11.02.1979ರಂದು ಬೆಂಗಳೂರಿನ ಪುರಭವನದಲ್ಲಿ ನಡೆದ ಅದ್ಧೂರಿ ಸನ್ಮಾನ ಸಮಾರಂಭದಲ್ಲಿ ನಾಗೇಗೌಡರಿಗೆ 1,15,000 ರೂ.ಗಳ ನಿಧಿ ಅರ್ಪಿಸಲಾಯಿತು. ನಾಗೇಗೌಡರು ಸನ್ಮಾನ ಸಮಿತಿಯ ಆಶಯದಂತೆಯೇ ಈ ನಿಧಿಯನ್ನು ಮೂಲಧನವನ್ನಾಗಿರಿಸಿ ಜಾನಪದಕ್ಕೆ ಮೀಸಲಾದ ಸಂಸ್ಥೆಯೊಂದನ್ನು ಪ್ರಾರಂಭ ಮಾಡಲಾಯಿತು. ಈ ಪ್ರಕಾರವಾಗಿ ತಾ: 21.03.1979ರಂದು ಜನ್ಮ ತಾಳಿದ್ದೇ **'ಶ್ರೀ ಎಚ್.ಎಲ್.ನಾಗೇಗೌಡ ಜಾನಪದ ಟ್ರಸ್ಟ್'** ಟ್ರಸ್ಟಿನ ರೂಪುರೇಷೆಗಳನ್ನು ಸಿದ್ಧಪಡಿಸಿಕೊಟ್ಟವರು ಚಾರ್ಟರ್ಡ್ ಅಕೌಂಟೆಂಟ್ ಡಿ. ದೇವರಾಜ್ ಅವರು. ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ಸರ್ಕಾರದ ದಾಖಲೆಗಳಲ್ಲಿ ನೋಂದಾಯಿಸಲ್ಪಟ್ಟ ಟ್ರಸ್ಟಿನ ಮೂಲಧನ ಸನ್ಮಾನ ಸಮಿತಿಯವರು ಶ್ರೀ ನಾಗೇಗೌಡರಿಗೆ ಅರ್ಪಿಸಿದ ಗೌರವಧನವಾಗಿದ್ದಿತು. ನಾಗೇಗೌಡರು ಟ್ರಸ್ಟಿನ ಅಧ್ಯಕ್ಷರಾದರು. ಸರ್ವಶ್ರೀ ಜಿ. ನಾರಾಯಣ, ಡಾ.ಸಿದ್ದಯ್ಯ ಪುರಾಣಿಕ್, ಪ್ರೊ ಜಿ.ವೆಂಕಟಸುಬ್ಬಯ್ಯ, ಡಾ. ಜಿ.ಎಸ್.ಪರಮಶಿವಯ್ಯ, ಶ್ರೀ ಕೆ.ಆರ್.ಲಿಂಗಪ್ಪ, ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಶ್ರೀ ಸಿಂಪಿ ಲಿಂಗಣ್ಣ, ಪ್ರೊ. ಎಚ್.ಜೆ.ಲಕ್ಕಪ್ಪಗೌಡ ಅವರುಗಳು ಪ್ರಪ್ರಥಮ ಆಡಳಿತ ಮಂಡಳಿಯ ಸದಸ್ಯರುಗಳು. ಶ್ರೀ ಗೊ.ರು.ಚನ್ನಬಸಪ್ಪ ಅವರು ಕಾರ್ಯದರ್ಶಿಗಳಾಗಿ 'ಶ್ರೀ ಎಚ್.ಎಲ್. ನಾಗೇಗೌಡ ಜಾನಪದ ಟ್ರಸ್ಟ್' ಅಸ್ತಿತ್ವಕ್ಕೆ ಬಂದಿತು. ಶ್ರೀ ಟಿ.ಗೋವಿಂದರಾಜು ಪರಿಷತ್ತಿನ ಮೊತ್ತ ಮೊದಲ ಸಿಬ್ಬಂದಿಯಾಗಿದ್ದು ಅನಂತರ ಬಂದ ಡಾ. ಚಕ್ಕೆರೆ ಶಿವಶಂಕರ್ ಅಲ್ಪಾವಧಿಗೆ ಕಾರ್ಯ ನಿರ್ವಹಿಸಿ ನಿರ್ಗಮಿಸಿದರು. ಅನಂತರದಲ್ಲಿ ಶ್ರೀ ವ.ನಂ. ಶಿವರಾಮು, ಕುರುವ ಬಸವರಾಜ್, ಕಡಬ ಶ್ರೀನಿವಾಸ್ ಪರಿಷತ್ತಿನ ಸಿಬ್ಬಂದಿಯಾಗಿ ಸೇರ್ಪಡೆಯಾದರು. ನಾಗೇಗೌಡರಿಗೆ ಜಾನಪದ ದೀಕ್ಷೆ ನೀಡಿ, ಜಾನಪದ ಕ್ಷೇತ್ರದಲ್ಲಿ ಮುನ್ನಡೆಯಲು ಹಾದಿ ಹರಸಿದ ಸೋಬಾನೆ ಚಿಕ್ಕಮ್ಮ ರಾಗಿಕಲ್ಲುಗೂಟ ಹಿಡಿದು ರಾಗಿ ಬೀಸುವ ಅಪೂರ್ವ ಚಿತ್ರವು ಟ್ರಸ್ಟಿನ ಅರ್ಥಗರ್ಭಿತ ಲಾಂಛನವಾಗಿ ರೂಪುಗೊಂಡಿತು. ನಾಗೇಗೌಡರು ಅದುವರೆವಿಗೂ ಸಂಗ್ರಹಿಸಿದ ಅಪೂರ್ವ ಜನಪದ ಗೀತೆಗಳ ಧ್ವನಿಮುದ್ರಿಕೆಗಳು, ವಸ್ತುಗಳು, ಚಿತ್ರಗಳು ಮತ್ತು ಪುಸ್ತಕಗಳನ್ನು ಟ್ರಸ್ಟಿಗೆ ದೇಣಿಗೆ ನೀಡಿದರು. ಎಚ್.ಎಲ್.ನಾಗೇಗೌಡ ಜಾನಪದ ಟ್ರಸ್ಟ್ ವಿಧ್ಯುಕ್ತವಾಗಿ ಕುಮಾರ ಪಾರ್ಕ್ ಪಶ್ಚಿಮದಲ್ಲಿದ್ದ ನಾಗೇಗೌಡರ

ಮನೆಯ ಕೆಳ ಅಂತಸ್ತಿನಲ್ಲಿ ತನ್ನ ಚಟುವಟಿಕೆಗಳನ್ನು ಆರಂಭಮಾಡಿತು. ಆದರೆ ಕೆಲವೇ ದಿನಗಳಲ್ಲಿ 'ನಾಗೇಗೌಡ ಜಾನಪದ ಟ್ರಸ್ಟ್' ಎಂಬ ಹೆಸರನ್ನು ಆಡಳಿತ ಮಂಡಳಿ ಸದಸ್ಯರ ಒಪ್ಪಿಗೆಯ ಮೇರೆಗೆ ತಿದ್ದುಪಡಿ ಮಾಡಿ **ಕರ್ನಾಟಕ ಜಾನಪದ ಟ್ರಸ್ಟ್** ಎಂದು ಬದಲಾಯಿಸಲಾಯಿತು. ಇದಕ್ಕೆ ಕಾರಣ ಏನೆಂಬುದನ್ನು ನಾಗೇಗೌಡರ ಮಾತಿನಿಂದಲೇ ತಿಳಿಯಬಹುದು. 'ಟ್ರಸ್ಟಿಗೆ ನನ್ನ ಹೆಸರು ಇಟ್ಟಿದ್ದುದು ನನ್ನ ಮನಸ್ಸಿಗೆ ತುಂಬ ಕಿರಿಕಿರಿಯನ್ನುಂಟು ಮಾಡುತ್ತಿತ್ತು. ಚುಂಚನಗಿರಿ ಭೈರವೇಶ್ವರ ಗೀತಗಾಯನ ಮೇಳದಲ್ಲಿ ಇದು ನನ್ನ ಅನುಭವಕ್ಕೆ ಬಂದಿತು. ನಾನೇ ಅದರ ಅಧ್ಯಕ್ಷ ಮತ್ತು ಮ್ಯಾನೇಜಿಂಗ್ ಟ್ರಸ್ಟೀ ಆಗಿದ್ದುದು ಜನರ ಮನಸ್ಸಿನಲ್ಲಿ ಏನೇನೋ ಕಲ್ಪನೆಗೆ ಅವಕಾಶ ಮಾಡಿಕೊಡುವ ಸಂಭವವಿತ್ತು. ಈ ಟ್ರಸ್ಟ್ ನಾಗೇಗೌಡರ ಸ್ವಂತ ಟ್ರಸ್ಟ್ ಎಂಬ ಭಾವನೆ ಬರಲು ಸಾಧ್ಯವಿತ್ತು. ಈ ಕಾರಣಗಳಿಂದ ಟ್ರಸ್ಟಿನ ಹೆಸರನ್ನು 'ಕರ್ನಾಟಕ ಜಾನಪದ ಟ್ರಸ್ಟ್' ಎಂದು ಬದಲಾಯಿಸಲು ಆಡಳಿತ ಮಂಡಳಿಯನ್ನು ಕೇಳಿಕೊಂಡು ಅವರ ಒಪ್ಪಿಗೆ ಪಡೆದು ಬದಲಾದ ಹೆಸರನ್ನು ರಿಜಿಸ್ಟರ್ ಮಾಡಿಸಿದೆ.' (ಜಾನಪದ ಯಾತ್ರೆ) ಮುಂದೆ 1996ರಲ್ಲಿ ಕರ್ನಾಟಕ ಜಾನಪದ ಟ್ರಸ್ಟ್ ಎಂಬ ಹೆಸರನ್ನು ಮತ್ತೆ **'ಕರ್ನಾಟಕ ಜಾನಪದ ಪರಿಷತ್ತು'** ಎಂದು ತಿದ್ದುಪಡಿ ಮಾಡಿ ಈ ಹೆಸರನ್ನು ಖಾಯಮ್ಮಾಗಿ ಮುಂದುವರಿಸಿಕೊಂಡು ಬರಲಾಗಿದೆ.

ಕರ್ನಾಟಕ ಜಾನಪದ ಪರಂಪರೆಯ ಸಂರಕ್ಷಣೆ, ಸಂವರ್ಧನೆಗಾಗಿ ಹುಟ್ಟಿಕೊಂಡ ಕರ್ನಾಟಕ ಜಾನಪದ ಪರಿಷತ್ತಿನ ಧ್ಯೇಯೋದ್ದೇಶಗಳು ಕೆಳಕಂಡಂತಿವೆ.

ಕರ್ನಾಟಕ ಜಾನಪದ ಪರಿಷತ್ತಿನ ಧ್ಯೇಯೋದ್ದೇಶಗಳು

1. ಗ್ರಾಮಾಂತರ ಪ್ರದೇಶದಲ್ಲಿ ಜನರ ಬಾಯಲ್ಲಿ ಉಳಿದಿರುವ ನುಡಿಗಟ್ಟುಗಳು, ಆಡುಮಾತುಗಳು, ಹಾಡುಗಳು, ಗಾದೆಗಳು, ಕಥೆಗಳು, ಬಯಲಾಟ ಪ್ರಸಂಗಗಳು – ಹೀಗೆ ಎಲ್ಲ ಬಗೆಯ ಜನಪದ ಸಾಹಿತ್ಯ ಸಂಗ್ರಹ ಸಂರಕ್ಷಣೆ, ಪರಿಷ್ಕಾರ ಮತ್ತು ಪ್ರಸಾರ. ಮುಖ್ಯವಾಗಿ ಜಾನಪದ ಪತ್ರಿಕೆ, ಶಬ್ದಕೋಶ ಮತ್ತು ವಿಶ್ವಕೋಶಗಳ ಪ್ರಕಟಣೆ.
2. ಹಳ್ಳಿಗರ ವೇಷಭೂಷಣಗಳು, ಸಾಧನ ಸಲಕರಣೆಗಳು, ಬಳಕೆಯ ವಸ್ತುಗಳು

ಇತ್ಯಾದಿಗಳ ಸಂಗ್ರಹ ಅಲ್ಲದೆ, ಇಡೀ ಗ್ರಾಮೀಣ ಬದುಕನ್ನು ಜೀವಂತವಾಗಿ ಚಿತ್ರಿಸುವ ಬೃಹತ್ ವಸ್ತುಸಂಗ್ರಹಗಳ ಸ್ಥಾಪನೆ.

3. ಜಾನಪದ ಮೌಲ್ಯಗಳ ಬಗ್ಗೆ ಆಧುನಿಕರಲ್ಲಿ ಆಸಕ್ತಿ ಬೆಳೆಸಲು ಅಧ್ಯಯನ ವಿಷಯಕ್ಕೆ ಜಾನಪದವನ್ನೇ ವಿಶೇಷವಾಗಿ ಆರಿಸಿಕೊಂಡು ಅತ್ಯಧಿಕ ಅಂಕಗಳನ್ನು ಗಳಿಸುವ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬಹುಮಾನ ನೀಡುವುದು, ಶಾಲಾ ಕಾಲೇಜುಗಳಲ್ಲಿ ಜಾನಪದ ವಿಷಯಗಳನ್ನು ಕುರಿತ ಸೋದಾಹರಣ ಉಪನ್ಯಾಸ-ವ್ಯವಸ್ಥೆ ಮತ್ತು ಜನಪ್ರಿಯ ಕಿರು ಪ್ರಕಟಣೆಗಳನ್ನು ಹೊರತರುವುದು.

4. ಜನಪದ ಸಂಗೀತದ ವೈವಿಧ್ಯಪೂರ್ಣ ಧಾಟಿಗಳ ಧ್ವನಿಮುದ್ರಣ, ಧ್ವನಿಮುದ್ರಿತ ಟೇಪುಗಳ ಭಂಡಾರ ಸ್ಥಾಪನೆ, ಶಾಸ್ತ್ರೀಯ ಸಂಗೀತಕ್ಕೆ ಜನಪದ ಸಂಗೀತ ನೀಡಿರುವ ಕಾಣಿಕೆ ಕುರಿತು ನಡೆಸುವ ಸಂಶೋಧನೆಗೆ ನೆರವು, ಮೂಲ ಜನಪದ ಧಾಟಿಗಳನ್ನು ಜನಪ್ರಿಯಗೊಳಿಸಿ ಗ್ರಾಮಾಫೋನ್ ರಿಕಾರ್ಡುಗಳನ್ನು ಮತ್ತು ಕ್ಯಾಸೆಟ್‌ಗಳನ್ನು ಮಾಡಿಸುವುದು ಇತ್ಯಾದಿ.

5. ಜನಪದ ಕಲೆಗಳ ಸೊಬಗನ್ನು ಪರಿಚಯ ಮಾಡಿಕೊಡಲು ಅಲ್ಲಲ್ಲಿ ಜನಪದ ಕಲೆಗಳ ಪ್ರದರ್ಶನ ವ್ಯವಸ್ಥೆ, ಅಂತಹ ಪ್ರದರ್ಶನಗಳ ವ್ಯವಸ್ಥಾಪಕರಿಗೆ ನೆರವು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯ ಯೋಜನೆಗಳಲ್ಲಿ ಜನಪದ ಕಲಾತಂಡಗಳಿಗೆ ಅವಕಾಶ ಕಲ್ಪಿಸುವುದು. ಸಮೂಹ ಶಿಕ್ಷಣ ಹಾಗೂ ಮನರಂಜನೆಯ ಉದ್ದೇಶಕ್ಕೆ ಜನಪದ ಗೀತ ನೃತ್ಯ ರೂಪಕಗಳ ರಚನೆ ಹಾಗೂ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡುವುದು.

6. ಹಳ್ಳಿಯ ವ್ಯಕ್ತಿ–ವಸ್ತುಗಳು, ತೇರು–ಜಾತ್ರೆಗಳು, ಮದುವೆ–ಮುಂಜಿ, ಹಬ್ಬ ಹುಣ್ಣಿಮೆ, ಸಂಸ್ಕಾರ–ಸಂಪ್ರದಾಯ ಒಟ್ಟಿನಲ್ಲಿ ಜನಪದ ಜೀವನದ ಸಮಸ್ತ ಸಂಗತಿಗಳನ್ನು ಪ್ರತಿಬಿಂಬಿಸುವ ಸಾಕ್ಷ್ಯಚಿತ್ರಗಳ ತಯಾರಿಕೆ.

7. ಜಾನಪದ ವಿಚಾರ ಗೋಷ್ಠಿಗಳು, ಕಲಾಮೇಳಗಳು, ಸ್ಪರ್ಧೆಗಳು, ವಸ್ತುಪ್ರದರ್ಶನ ಮೊದಲಾದವುಗಳನ್ನು ಏರ್ಪಡಿಸುವುದು.

8. ಗುಡ್ಡಗಾಡು ಜನರ ಜೀವನವ ಅಧ್ಯಯನ ಮತ್ತು ಚಿತ್ರೀಕರಣ.

9. ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಜಾನಪದ ವಸ್ತು ಸಂಗ್ರಹಾಲಯಗಳ ನಿರ್ಮಾಣ.
10. 'ಜಾನಪದ ಲೋಕ' ಎಂಬ ಗ್ರಾಮೀಣ ಸಾಂಸ್ಕೃತಿಕ ಕೇಂದ್ರದ ನಿರ್ಮಾಣ.
11. ಜಾನಪದ ಗ್ರಂಥ ಭಂಡಾರ ತೆರೆಯುವುದು ಮತ್ತು ಜಾನಪದವನ್ನು ಕುರಿತಾದ ಗ್ರಂಥಗಳ ಪ್ರಕಟಣೆ.
12. ಜನಪದ ಕಲಾವಿದರ ಅಧಿಕೃತ ವೇಷಭೂಷಣಗಳು ಮತ್ತು ವಾದ್ಯಗಳ ತಯಾರಿಕೆ.
13. ಜನಪದ ಕಲೆಗಳ ಶಿಕ್ಷಣ ಮತ್ತು ತರಬೇತಿ.
14. ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ ಪ್ರತಿಭಾವಂತ ವ್ಯಕ್ತಿಗಳನ್ನು ಟ್ರಸ್ಟಿನ ವಾರ್ಷಿಕ ಸಮಾರಂಭದಲ್ಲಿ ಸನ್ಮಾನಿಸುವುದು, ಕಷ್ಟದಲ್ಲಿರುವ ಜನಪದ ಕಲಾವಿದರಿಗೆ, ಕ್ಷೇತ್ರಕಾರ್ಯಕರ್ತರಿಗೆ ಸರ್ಕಾರದಿಂದ ಮಾಸಾಶನ, ಗೌರವಧನ, ನಿರ್ವಹಣಾ ವೆಚ್ಚ ಇತ್ಯಾದಿ ನೆರವು ದೊರಕಿಸಿಕೊಡುವುದು.

ಮಾರ್ಚ್ 1979ರಂದು ಅಸ್ತಿತ್ವಕ್ಕೆ ಬಂದ ಟ್ರಸ್ಟಿನ ಉದ್ಘಾಟನೆಯನ್ನು ತಾ: 17.06.1979ರಂದು ಬೆಂಗಳೂರಿನ ವಿಶ್ವೇಶ್ವರಪುರಂ ಕಾಲೇಜಿನ ಆವರಣದಲ್ಲಿ ನೆರವೇರಿಸಲಾಯಿತು. ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರು ಉದ್ಘಾಟನೆ, ಸಚಿವ ಡಿ.ಬಿ. ಚಂದ್ರೇಗೌಡರ ಅಧ್ಯಕ್ಷತೆ. ಆದರೆ ಇಬ್ಬರೂ ಉದ್ಘಾಟನಾ ಕಾರ್ಯಕ್ರಮಕ್ಕೆ ಬರಲಿಲ್ಲ. ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ.ನಾರಾಯಣ ಅವರು ಜಾನಪದದ ಮೂಲಸ್ರೋತವಾದ ಬೀಸುವ ಕಲ್ಲಿನ ಮುಂದಿರಿಸಿದ ದೀಪವನ್ನು ಹಚ್ಚಿ ಕೈಮುಗಿದು ಟ್ರಸ್ಟಿನ ಉದ್ಘಾಟನೆಯನ್ನು ನೆರವೇರಿಸಿ ಶುಭವಾಗಲೆಂದು ಹಾರೈಸಿದರು.

ಹೀಗೆ ಎಚ್.ಎಲ್. ನಾಗೇಗೌಡರ ಜಾನಪದ ನಿಷ್ಠೆ, ಬದ್ಧತೆ ಮತ್ತು ಕಾರ್ಯತತ್ಪರತೆಯ ಫಲವಾಗಿ ಮಹತ್ವದ ಉದ್ದೇಶಗಳನ್ನು ಇರಿಸಿಕೊಂಡು ಅಸ್ತಿತ್ವಕ್ಕೆ ಬಂದ ಕರ್ನಾಟಕ ಜಾನಪದ ಪರಿಷತ್ತು, ನಾಡಿನಾದ್ಯಂತ ಜಾನಪದದ ಸಮಗ್ರ ಸಂರಕ್ಷಣೆ, ಸಂವರ್ಧನೆಗಾಗಿ ಎಲ್ಲ ಬಗೆಯ ಜನಪದ ಸಾಹಿತ್ಯ ಸಂಗ್ರಹ,

ಜಾನಪದ ಪತ್ರಿಕೆ, ಜಾನಪದ ಕೋಶಗಳ ಪ್ರಕಟಣೆ, ಗ್ರಾಮೀಣ ಬದುಕನ್ನು ಜೀವಂತವಾಗಿರಿಸುವ ವಸ್ತುಸಂಗ್ರಹಾಲಯಗಳ ಸ್ಥಾಪನೆ, ಜನಪದ ಸಂಗೀತದ ವೈವಿಧ್ಯಮಯ ಧಾಟಿಗಳ ಧ್ವನಿಮುದ್ರಣ, ಧ್ವನಿಮುದ್ರಿತ ಟೇಪುಗಳ ಭಂಡಾರ, ಮೂಲ ಜನಪದ ಧಾಟಿಗಳನ್ನು ಜನಪ್ರಿಯಗೊಳಿಸಲು ಗ್ರಾಮೀಣ ಗೀತೆಗಳ ಕ್ಯಾಸೆಟ್ ತಯಾರಿಕೆ, ಗ್ರಾಮೀಣ ಬದುಕಿನ ಚಟುವಟಿಕೆಗಳಿಗೆ ಸಂಬಂಧಿಸಿದ ಸ್ಥಿರ ಹಾಗೂ ಸಾಕ್ಷ್ಯಚಿತ್ರಗಳ ತಯಾರಿಕೆ, ಜಾನಪದ ವಿಚಾರ ಗೋಷ್ಠಿಗಳು, ಕಮ್ಮಟಗಳು, ಕಲಾಮೇಳಗಳು, ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ ಪ್ರತಿಭಾವಂತ ಜನಪದ ಕಲಾವಿದರ ಸನ್ಮಾನ–ಇವೇ ಮೊದಲಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಪರಿಷತ್ತಿನ ಪ್ರಮುಖ ಸಾಧನೆಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದಾಗಿದೆ.

1. ನೂರಾರು ಗಂಟೆಗಳ ಕಾಲ ಕೇಳಬಹುದಾದ ಜನಪದ ಗೀತ ಸಾಹಿತ್ಯದ ಧ್ವನಿಮುದ್ರಣ.
2. ನೂರಾರು ಗಂಟೆಗಳ ಕಾಲ ನೋಡಬಹುದಾದ ಜನಪದ ಸಂಸ್ಕೃತಿಯ ವಿವಿಧ ಪ್ರಕಾರಗಳ ವಿಡಿಯೋ ಚಿತ್ರೀಕರಣ.
3. ಕರ್ನಾಟಕ ಜಾನಪದ ಪರಂಪರೆಯ ಮಹತ್ವವನ್ನು ಬಿಂಬಿಸುವ ವರ್ಣಪಾರದರ್ಶಿಕೆಗಳ ತಯಾರಿಕೆ.
4. ಬೆಂಗಳೂರು ದೂರದರ್ಶನದಲ್ಲಿ ಸಿರಿಗಂಧ ಧಾರಾವಾಹಿಯ 108 ಸಂಚಿಕೆಗಳ ಪ್ರಸಾರ.
5. ಮೂಲ ಗಾಯಕರ ಸಾಹಿತ್ಯ, ದನಿ, ಧಾಟಿ, ಮಟ್ಟುಗಳಲ್ಲಿ ಹಾಡಿದ ಹಾಡುಗಳನ್ನು 'ಗ್ರಾಮೀಣ ಗೀತೆಗಳು' ಶೀರ್ಷಿಕೆಯಲ್ಲಿ ಕ್ಯಾಸೆಟ್ ಮತ್ತು ಸಿಡಿಗಳ ತಯಾರಿಕೆ.
6. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಾಮನಗರದ ಬಳಿ ಸುಮಾರು 15 ಎಕರೆ ಪ್ರದೇಶದಲ್ಲಿ ಜಾನಪದ ಲೋಕದ ನಿರ್ಮಾಣ.
7. ಜಾನಪದ ಜಗತ್ತು ಪತ್ರಿಕೆ ಪ್ರಕಟಣೆ–ಜನಪ್ರಿಯ ಜಾನಪದ ಪುಸ್ತಕ ಮಾಲಿಕೆಯಲ್ಲಿ 50ಕ್ಕೂ ಹೆಚ್ಚು ಕೃತಿಗಳ ಪ್ರಕಟಣೆ.
8. ಜನಪದ ಕಲೆಗಳ ತರಬೇತಿ.

9. ಜನಪದ ಸಂಗೀತ ತರಬೇತಿ.
10. ಮೂಡಲಪಾಯ ಯಕ್ಷಗಾನ ಪುನರುಜ್ಜೀವನ ಮತ್ತು ತರಬೇತಿ.
11. ಜನಪದ ಕಲಾಮೇಳಗಳು.
12. ಜಾನಪದ ಸಂಶೋಧನಾ ಕೇಂದ್ರ ಸ್ಥಾಪನೆ.
13. ಜಾನಪದ ಮಹಾವಿದ್ಯಾಲಯದ ಸ್ಥಾಪನೆ-ಸರ್ಟಿಫಿಕೇಟ್ ಮತ್ತು ಡಿಪ್ಲೋಮಾ ಕೋರ್ಸ್‌ಗಳ ಆರಂಭ.
14. ಜಾನಪದ ವಸ್ತುಸಂಗ್ರಹಾಲಯಗಳ ಸ್ಥಾಪನೆ.
15. ಜಾನಪದ ಉತ್ಸವಗಳ-ವ್ಯವಸ್ಥೆ-ಗಾಳಿಪಟ ಉತ್ಸವ-ದಸರಾ ಉತ್ಸವ-ಲೋಕೋತ್ಸವಗಳು.
16. ಬೆಂಗಳೂರಿನಲ್ಲಿ ಜಾನಪದ ಸಿರಿಭುವನ ನಿರ್ಮಾಣ.
17. ಜಿಲ್ಲಾ ಜಾನಪದ ಘಟಕಗಳ ಆರಂಭ.

ಮೇಲ್ಕಂಡವುಗಳೇ ಅಲ್ಲದೆ, ಇನ್ನು ಹತ್ತು ಹಲವು ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡು ಪರಿಷತ್ತು ನಿರಂತರ ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಾ ಬಂದಿದೆ.

ಕರ್ನಾಟಕ ಜಾನಪದ ಪರಿಷತ್ತು ಕಳೆದ 30 ವರ್ಷಗಳ ಅವಧಿಯಲ್ಲಿ ಸಾಧಿಸಿರುವ ಸಾಧನೆಗಳು ಅಸಂಖ್ಯ. ಎಲ್ಲವನ್ನು ಇಲ್ಲಿ ದಾಖಲಿಸಲು ಸಾಧ್ಯವಾಗದಿದ್ದರೂ ಪ್ರಮುಖ ಕಾರ್ಯಚಟುವಟಿಕೆಗಳನ್ನು ಹೇಳಲೇಬೇಕಾದ ಅಗತ್ಯವಿದೆ. ಪರಿಷತ್ತಿನ ಒಟ್ಟು ಜಾನಪದೀಯ ಚಟುವಟಿಕೆಗಳನ್ನು ಕೆಳಕಂಡಂತೆ ಸ್ಥೂಲವಾಗಿ ಅರಿಯಬಹುದು.

1. ಜಾನಪದ ದಾಖಲಾತಿ
2. ಜಾನಪದ ಪ್ರಯೋಗ : ಪ್ರದರ್ಶನ
3. ಜಾನಪದ ಚಿಂತನ : ಮಂಥನ
4. ಜಾನಪದ ತರಬೇತಿ

ಜಾನಪದ ದಾಖಲಾತಿ; (ಕೇರೆಲ್ಲ ಐಭೋಗ ಬೀದೆಲ್ಲ ಸಿಂಗಾರ)

ನಾಗೇಗೌಡರು ಮೂಲತಃ ಪ್ರಯೋಗಶೀಲರು. ಆಧುನಿಕ ಜಾನಪದ

ಪರಿಕಲ್ಪನೆಗಳ ಬಗ್ಗೆ ಅವರೆಂದು ತಲೆ ಕೆಡಿಸಿಕೊಂಡವರಲ್ಲ. ತಲೆಕೆಡಿಸುವ ಜಾನಪದ ವಿದ್ವಾಂಸರನ್ನು ತಮ್ಮ ಹತ್ತಿರಕ್ಕೆ ಬಿಟ್ಟುಕೊಂಡವರೂ ಅಲ್ಲ. ತಮ್ಮ ಪಾಡಿಗೆ ತಾವು ತಮಗೆ ತಿಳಿದಿದ್ದನ್ನು, ಅನಿಸಿದ್ದನ್ನು ಮನಸ್ಸಿಗೆ ತೋಚಿದ್ದನ್ನು ಕರ್ನಾಟಕ ಜಾನಪದ ಪರಿಷತ್ತಿನ ಮೂಲಕ ಕಾರ್ಯರೂಪಕ್ಕೆ ತಂದರು. ನಗರೀಕರಣದ ಪ್ರಯುಕ್ತ ಜಾನಪದವು ನಶಿಸುತ್ತಿದೆ. ನಶಿಸಿಹೋಗುತ್ತಿರುವ ಜಾನಪದವನ್ನು ಆದಷ್ಟು ಬೇಗ ಸಂರಕ್ಷಿಸಬೇಕು ಎನ್ನುವ ನವೋದಯ ರಾಷ್ಟ್ರೀಯ ಸಂರಕ್ಷಣಾ ಮನೋಧರ್ಮ ಅವರದಾಗಿತ್ತು. ಶರಾವತಿ ನದಿ ಬತ್ತಿಹೋದರೆ ಮತ್ತೆ ಉಕ್ಕಿಹರಿಯುವಂತೆ ಮಾಡಬಹುದು. ಆದರೆ ಜನಪದ ಸಾಹಿತ್ಯಶರಾವತಿ ಬತ್ತಿಹೋದರೆ ಎಂದೆಂದಿಗೂ ಉಕ್ಕಿಹರಿಯುವಂತೆ ಮಾಡುವುದು ಸಾಧ್ಯವಿಲ್ಲ ಎಂಬ ದೃಢನಿಲುವು ಅವರದಾಗಿತ್ತು. ಹಾಡುಗಾರನಾಗಲಿ, ಹಾಡುಗಾರ್ತಿಯಾಗಲಿ ಸತ್ತರೆ ಅವನೊಂದಿಗೆ ಅಥವಾ ಅವಳೊಂದಿಗೆ ಅವರ ಸಾಹಿತ್ಯವೆಲ್ಲವೂ ಮಣ್ಣು ಪಾಲಾಗುತ್ತದೆ. ಆದ್ದರಿಂದ ಗ್ರಾಮೀಣ ಹಾಡುಗಾರರು ಕಣ್ಮರೆಯಾಗುವ ಮುನ್ನ ಅವರಲ್ಲಿರುವ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಧ್ವನಿಮುದ್ರಿಸಿ ಸಂರಕ್ಷಿಸಿಡಬೇಕೆನ್ನುವ ಕಾಳಜಿ ಗೌಡರದು.

ನಾಗೇಗೌಡರ ಹೃದಯಕ್ಕೆ ಹೆಚ್ಚು ಹತ್ತಿರವಾದದ್ದು ಜಾನಪದ ದಾಖಲಾತಿ ಕೆಲಸವಾಗಿದ್ದಿತು. ಜನಪದ ಗೀತೆಗಳ ಧ್ವನಿಮುದ್ರಣ, ಜನಪದರ ಬಾಳು–ಬದುಕು, ಕುಣಿತ–ಮೆರೆತ, ಆಟೋಟಗಳು, ತೇರು–ಜಾತ್ರೆ–ಉತ್ಸವಗಳ ಚಿತ್ರೀಕರಣ ಮತ್ತು ವಸ್ತು ಸಂಗ್ರಹಾಲಯಗಳ ಸ್ಥಾಪನೆ ಅವರಿಗೆ ಪ್ರಿಯವಾದ ಕೆಲಸಗಳಾಗಿದ್ದವು. 1967ರಷ್ಟು ಹಿಂದೆಯೇ ತಮ್ಮೂರಿನ ಸೋಬಾನೆ ಚಿಕ್ಕಮ್ಮನ ಹಾಡುಗಳನ್ನು ಧ್ವನಿಮುದ್ರಿಸಿಕೊಳ್ಳುವುದರ ಮೂಲಕ ತಮ್ಮ ಜನಪದ ಗೀತಸಾಹಿತ್ಯದ ಧ್ವನಿಮುದ್ರಣ ಕಾರ್ಯವನ್ನು ಪ್ರಾರಂಭಮಾಡಿದ್ದರು. ಕರ್ನಾಟಕ ಜಾನಪದ ಪರಿಷತ್ತು ಸ್ಥಾಪನೆಯಪೂರ್ವದಲ್ಲಿ ಅವರ ಬಳಿ ಸಾಕಷ್ಟು ಧ್ವನಿಮುದ್ರಿತ ಟೇಪುಗಳಿದ್ದವು. ಅವುಗಳನ್ನು ಪರಿಷತ್ತಿಗೆ ನೀಡುವುದರ ಮೂಲಕ ಧ್ವನಿಮುದ್ರಣ ಕಾರ್ಯಕ್ಕೆ ಹೆಚ್ಚಿನ ಚಾಲನೆ ನೀಡಿದರು. ವೈಯಕ್ತಿಕ ನೆಲೆಯಲ್ಲಿ ಪ್ರಾರಂಭಮಾಡಿದ ಜಾನಪದ ದಾಖಲಾತಿ ಕೆಲಸವನ್ನು ಕರ್ನಾಟಕ ಜಾನಪದ ಪರಿಷತ್ತು ಸ್ಥಾಪನೆಯಾದ ಅನಂತರ ಸಾಂಸ್ಥಿಕ ಸ್ವರೂಪಕ್ಕೆ ಪರಿವರ್ತಿಸಿದರು.

ನಾಗೇಗೌಡರು, ಕರ್ನಾಟಕ ಜಾನಪದ ಪರಿಷತ್ತಿನ ಮೂಲಕ ಕೈಗೊಂಡ ಜಾನಪದ ದಾಖಲಾತಿ ಕೆಲಸವನ್ನು ಏಳು ಬಗೆಗಳಲ್ಲಿ ಗುರುತಿಸಬಹುದಾಗಿದೆ.

1. ವರ್ಣ ಪಾರದರ್ಶಿಕೆಗಳ ತಯಾರಿಕೆ
2. ಆಡಿಯೊ ದಾಖಲಾತಿ
3. ವಿಡಿಯೊ ದಾಖಲಾತಿ
4. ಜಾನಪದ ವಸ್ತುಸಂಗ್ರಹಾಲಯ ಸ್ಥಾಪನೆ
5. ಜಾನಪದ ಲೋಕ ಸ್ಥಾಪನೆ
6. ಜಾನಪದ ಜಗತ್ತು ಪತ್ರಿಕೆ ಪ್ರಕಟಣೆ
7. ಜಾನಪದ ಸಿರಿಭುವನ ಸ್ಥಾಪನೆ

1.1 1980ರ ಆಸುಪಾಸಿನಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಸಂಪರ್ಕಕ್ಕೆ ಬಂದವರು ಶ್ರೀ ವಿ.ಶ್ರೀನಿವಾಸಮೂರ್ತಿ ಕರ್ನಾಟಕದ ಅತ್ಯುತ್ತಮ ವಿಡಿಯೊ ಛಾಯಾಚಿತ್ರಗ್ರಾಹಕರುಗಳಲ್ಲಿ ಒಬ್ಬರು. ವಿಡಿಯೊ ತಂತ್ರಜ್ಞಾನ ಪರಿಣತಿಯೊಂದಿಗೆ ಗ್ರಾಮೀಣ ಪರಿಸರದಿಂದ ಬಂದವರಾದುದರಿಂದ ಜಾನಪದದ ಬಗ್ಗೆ ಪ್ರೀತಿ ಉಳ್ಳವರಾಗಿದ್ದರು. ವಿಡಿಯೊ ಚಿತ್ರೀಕರಣದಲ್ಲಿ ತಾಳ್ಮೆ ಸಹನೆ ಇದ್ದಿತು. ತಮಗೆ ಸರಿ ಎನಿಸುವವರೆಗೂ ಚಿತ್ರೀಕರಣ ನಡೆಸುತ್ತಿದ್ದರು. ಯಾವತ್ತಿಗೂ, ಎಲ್ಲಿಯೂ ಕೆಲಸದ ವಿಷಯದಲ್ಲಿ ರಾಜಿ ಮಾಡಿಕೊಂಡವರಲ್ಲ. ಜಾನಪದ ದಾಖಲಾತಿಯ ಬಗ್ಗೆ ತಮ್ಮದೇ ಆದ ಚಿಂತನೆಗಳನ್ನು ಹೊಂದಿದ್ದ ನಾಗೇಗೌಡರಿಗೆ ಶ್ರೀನಿವಾಸಮೂರ್ತಿ ಸಿಕ್ಕಿದ್ದು ಅನುಕೂಲಕರವಾಗಿ ಪರಿಣಮಿಸಿತು. ಶ್ರೀನಿವಾಸಮೂರ್ತಿಯವರ ತಾಂತ್ರಿಕ ಪರಿಣತಿಯನ್ನು ಬಳಸಿಕೊಂಡು, ಜನಪದರ ಬದುಕಿಗೆ ಹತ್ತಿದ ಸಮಸ್ತ ಸಂಗತಿಗಳಿಗೆ ಸಂಬಂಧಿಸಿದಂತೆ ಸುಮಾರು ಒಂದು ಸಾವಿರದಷ್ಟು ವರ್ಣಪಾರದರ್ಶಿಕೆಗಳನ್ನು ಸಿದ್ಧಪಡಿಸುವ ಯೋಜನೆಯನ್ನು ಹಮ್ಮಿಕೊಂಡ ಗೌಡರು, ಈ ಕೆಲಸಕ್ಕಾಗಿ ಶ್ರೀನಿವಾಸಮೂರ್ತಿಯೊಂದಿಗೆ ನಾಡಿನಲ್ಲೆಲ್ಲಾ ಸುತ್ತಾಟ ನಡೆಸಿದರು. 1982ರ ಜನವರಿಯಲ್ಲಿ ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ದೇವರ ಮಳ್ಳೂರು ಗ್ರಾಮದ ಹೆಣ್ಣುಮಕ್ಕಳ ಪಂಡರಿ ಭಜನೆಯನ್ನು ಚಿತ್ರೀಕರಿಸುವುದರೊಂದಿಗೆ ವರ್ಣಪಾರದರ್ಶಿಕೆಗಳ ತಯಾರಿಕೆ ಕೆಲಸ ಆರಂಭವಾಯಿತು.

ಜನಪದ ಕುಣಿತ–ಮೆರೆತಗಳು, ಹಬ್ಬ–ಹರಿದಿನಗಳು, ವೃತ್ತಿಗಾಯಕರು, ವಾದ್ಯಗಳು, ವೃತ್ತಿ ಕೌಶಲ್ಯಗಳ ಚಿತ್ರಗಳಷ್ಟೇ ಅಲ್ಲದೆ, ಕೋಳಿ ಕೂಗುತ್ತಿರುವುದು, ಬತ್ತ ಕುಟ್ಟುವುದು. ಬಳೆ ತೊಡಿಸುವುದು. ಗಂಧದಕಡ್ಡಿ ಹೊಸೆಯುವುದು, ಏತದಿಂದ

ನೀರೆತ್ತುವುದು. ರಾಗಿ ಬೀಸುವುದು, ಅಡಿಕೆ ಕೀಳುವುದು, ಮೀನು ಹಿಡಿಯುವುದು, ಗುಂಡು ಎತ್ತುವುದು, ಚಕ್ಕಡಿ ಓಟ, ಕೊಡವರ ಮದುವೆ, ರಂಪಣಿಬಲೆ – ಹೀಗೆ ದೈನಂದಿನ ಬದುಕಿನ ಸಮಸ್ತ ಚಿತ್ರಣವನ್ನು ವರ್ಣಪಾರದರ್ಶಿಕೆಗಳು ಒಳಗೊಂಡಿದ್ದವು. ಶ್ರೀನಿವಾಸಮೂರ್ತಿಯವರು ಸ್ಥಿರಚಿತ್ರಗಳನ್ನು ಮದ್ರಾಸಿಗೆ ತೆಗೆದುಕೊಂಡು ಹೋಗಿ ವರ್ಣಸಂಸ್ಕರಣೆಗೆ ಒಳಪಡಿಸಿ ಸ್ಲೈಡ್‌ಗಳನ್ನಾಗಿ ಸಿದ್ಧಪಡಿಸಿ ಮಾರಾಟಕ್ಕೆ ಅಣಿಗೊಳಿಸಿದರು. ಅಲ್ಲದೆ, 1984ರಲ್ಲಿ ಗೌಡರು ಅಮೆರಿಕಾಕ್ಕೆ ಹೋಗಿದ್ದಾಗ ಹವಾಯಿ ದ್ವೀಪದಲ್ಲಿರುವ ಪಾಲಿನೇಷಿಯನ್ ಕಲ್ಚರಲ್ ಸೆಂಟರ್‌ನಲ್ಲಿ ಲಭ್ಯ ಇರುವ ಪಾಲಿನೇಷಿಯನ್ ಸಂಸ್ಕೃತಿಗೆ ಸಂಬಂಧಿಸಿದ ಸ್ಲೈಡ್‌ಗಳು ಮತ್ತು ಡಕೋಟಾ ರೆಡ್ ಇಂಡಿಯನ್ನರಿಗೆ ಸಂಬಂಧಿಸಿದ ಸ್ಲೈಡ್‌ಗಳನ್ನು ಸಹ ತಂದು ಪರಿಷತ್ತಿನ ದಾಖಲಾತಿ ಭಂಡಾರಕ್ಕೆ ಸೇರಿಸಿದರು. ಜನಪದ ಗೀತೆಗಳ ಧ್ವನಿ ದಾಖಲಾತಿ ಭಂಡಾರವನ್ನು ಅತ್ಯಂತ ವ್ಯವಸ್ಥಿತ ಹಾಗೂ ಮಹತ್ವದ ರೀತಿಯಲ್ಲಿ ಫಿನ್ನಿಶ್ ಲಿಟರೇಚರ್ ಸೊಸೈಟಿಯು 1888ರ ವೇಳೆಗಾಗಲೇ ಸ್ಥಾಪಿಸಿದ್ದಿತು. 1928ರಲ್ಲಿ ಅಮೆರಿಕೆಯ ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ಆರಂಭವಾಗಿದ್ದಿತು. ಅಲ್ಲದೆ, ಅಮೆರಿಕಾದ ಹಲವಾರು ವಿಶ್ವವಿದ್ಯಾಲಯಗಳು ದಾಖಲಾತಿ ಭಂಡಾರವನ್ನು ತೆರೆದು ಜಾನಪದ ದಾಖಲಾತಿ ಕೆಲಸದಲ್ಲಿ ನಿರತವಾಗಿದ್ದವು.

1.2 ವಿದೇಶ ಪ್ರವಾಸಗಳ ಮೂಲಕ ಈ ತಿಳಿವಳಿಕೆಯನ್ನು ಸಂಪಾದಿಸಿದ್ದ ಗೌಡರು, ಪರಿಷತ್ತಿನಲ್ಲಿ ಜನಪದ ಗೀತೆಗಳ ಧ್ವನಿಮುದ್ರಣ ಭಂಡಾರವನ್ನು ಸ್ಥಾಪಿಸಲು ಮುಂದಾದರು. ತಮ್ಮ ಜಾನಪದ ದೀಕ್ಷಾ ಗುರುವಾದ ಸೋಬಾನೆ ಚಿಕ್ಕಮ್ಮನ ಹೆಸರಿನಲ್ಲಿ ಧ್ವನಿಮುದ್ರಣ ಭಂಡಾರವನ್ನು ಸ್ಥಾಪಿಸಿದರು. ಕರ್ನಾಟಕದ ಮೂಲೆ ಮೂಲೆಗಳಿಗೆ ಹೋಗಿ ಹಾಡುಗಾರರನ್ನು ಕಂಡು ಅವರ ಹಾಡು, ಕಥೆಗಳನ್ನು ಧ್ವನಿಮುದ್ರಿಸಿಕೊಂಡು ಬಂದರು. ಗೌಡರ ಧ್ವನಿಮುದ್ರಣ ದಾಖಲಾತಿ ಕೆಲಸದಲ್ಲಿ ಅನೇಕ ಹಿರಿಯರು ಕಿರಿಯರು ನೆರವಾದರು. ಕಳೆದ 30 ವರ್ಷಗಳಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಮೂಲಕ ಧ್ವನಿಮುದ್ರಿಸಿರುವ ಧ್ವನಿಮುದ್ರಿತ ಟೇಪುಗಳು. ಸೋಬಾನೆ ಚಿಕ್ಕಮ್ಮ ಸ್ಟುಡಿಯೋದಲ್ಲಿ, ಸುಮಾರು 500 ಗಂಟೆಗಳಿಗಿಂತಲೂ ಹೆಚ್ಚಿಗೆ ಕೇಳಬಹುದಾದಷ್ಟಿವೆ. ಕರ್ನಾಟಕದಾದ್ಯಂತ, ಬೀದರ್‌ನಿಂದ ಮೊದಲುಗೊಂಡು ಕೊಡಗಿನವರೆಗೂ ಸಂಗ್ರಹಿಸಲಾಗಿರುವ ಜನಪದ ಗೀತೆಗಳಲ್ಲಿ, ಟೇಪುಗಳಲ್ಲಿ ಅಡಕವಾಗಿರುವ ಜನಪದ ಗೀತೆಗಳ ವಿವಿಧ ಪ್ರಕಾರಗಳ ಪಟ್ಟಿ ಕೆಳಕಂಡಂತಿದೆ. ಕ್ಷೇತ್ರಕಾರ್ಯಕರ್ತರಿಗೆ, ಜನಪದ ಗೀತೆಗಳ ಅಭಿಮಾನಿಗಳು,

ಆಸಕ್ತರಿಗೆ ಮತ್ತು ಜಾನಪದ ಸಂಶೋಧಕರಿಗೆ ಅನುಕೂಲವಾಗಲಿ ಎಂಬ ಆಶಯದಿಂದ ಗೌಡರು ಸಂಗ್ರಹಿಸಿರುವ ಜನಪದ ಗೀತೆಗಳ ಪಟ್ಟಿಯನ್ನು ಕೊಡಲಾಗಿದೆ.

ಹೊಂಬಾಳೆ ಹೊಡುದಾವೆ ಸಿರಿಗಂಧ ಸೊಸ್ಯಾವೆ

1. ಬೀಸುವ ಪದಗಳು
2. ಕುಟ್ಟುವ ಪದಗಳು
3. ಮೊಸರು ಕಡೆಯುವ ಪದಗಳು
4. ಒಕ್ಕಲುತನದ ಪದಗಳು
5. ಬಾಂಧವ್ಯದ ಪದಗಳು
6. ಒಸಗೆ ಪದಗಳು
7. ಮದುವೆ ಪದಗಳು
8. ಬಯಕೆ ಪದಗಳು
9. ಬಾಣಂತಿ ಪದಗಳು
10. ಬಂಜೆ ಪದಗಳು
11. ಲಾಲಿ/ದೂರಿ/ಜೋಗುಳ/ತೊಟ್ಟಿಲ ಪದಗಳು
12. ಶಿಶುಪ್ರಾಸಗಳು
13. ಪ್ರೇಮಗೀತೆಗಳು
14. ತಿಂಗಳುಮಾವನ ಪದಗಳು
15. ಮಳೆರಾಯನ ಪದಗಳು
16. ಜೋಕುಮಾರನ ಪದಗಳು
17. ಜೋಗಯ್ಯನ ಪದಗಳು
18. ತಮಾಷೆ ಪದಗಳು
19. ಕಗ್ಗದ ಪದಗಳು
20. ದೇವರ ಪದಗಳು
21. ಕ್ರೈಸ್ತ ಹೆಂಗಸರ ಪದಗಳು
22. ಮುಸಲ್ಮಾನ ಹೆಂಗಸರ ಪದಗಳು
23. ಶರಣರ ಮೇಲಿನ ಪದಗಳು
24. ರಾಮ ಸೀತೆ ಪದಗಳು

25. ಧರ್ಮದ ಪದಗಳು ಮತ್ತು ಕುಂತಿ ಪದಗಳು
26. ತತ್ವ ಪದಗಳು
27. ಭಜನೆ ಪದಗಳು
28. ಮಂಗಳಾರತಿ ಪದಗಳು
29. ಗೀಗೀ ಪದಗಳು
30. ಡೊಳ್ಳಿನ ಪದಗಳು
31. ಭಾಗವಂತಿಕೆ ಪದಗಳು
32. ಅಂಟಿಕೆ ಪಂಟಿಕೆ ಪದಗಳು
33. ಲಾವಣಿಗಳು
34. ಹರದೇಶಿ–ನಾಗೇಶಿ ಪದಗಳು
35. ಹಚ್ಚಿ ಪದಗಳು
36. ಬುಡಕಟ್ಟು ಜನಾಂಗದವರ ಪದಗಳು
37. ಕೋಲಾಟದ ಪದಗಳು
38. ಅಲಾವಿ ಪದಗಳು
39. ವೀರಮಕ್ಕಳ ಪದಗಳು
40. ಪಂಡರೀ ಭಜನೆ ಪದಗಳು
41. ಜನಪದ ರಂಗಭೂಮಿ ಪದಗಳು
42. ಕಥನ ಗೀತೆಗಳು
43. ಕಥನ ಕಾವ್ಯಗಳು
44. ಕಂಸಾಳೆ ಪದಗಳು
45. ಚೌಡಿಕೆ ಪದಗಳು
46. ಗೊಂದಲಿಗರ ಪದಗಳು
47. ಗೊರವರ ಪದಗಳು
48. ನೀಲಗಾರರ ಪದಗಳು
49. ದೊಂಬಿದಾಸರ ಪದಗಳು
50. ಹೆಳವರ ಪದಗಳು
51. ಗೊಲ್ಲರ ಪದಗಳು
52. ಕಿನ್ನರಿ ಜೋಗಿಗಳ ಪದಗಳು

53. ಕರಪಾಲದವರ ಪದಗಳು
54. ಜನಪದ ಕಥೆ, ಪುರಾಣ, ಐತಿಹ್ಯಗಳು
55. ಒಗಟು, ಗಾದೆ, ಒಡಪುಗಳು
56. ಅಡಿಗೆ, ವೈದ್ಯ, ನಂಬಿಕೆ, ಸಂಪ್ರದಾಯ, ಹಬ್ಬ ಹರಿದಿನ, ವೃತ್ತಿ, ಬದುಕು, ವೇಷ ಭೂಷಣಗಳಿಗೆ ಸಂಬಂಧಿಸಿದ ವಿವರಣೆಗಳು
57. ವಿವಿಧ ಜನಪದ ವಾದ್ಯಗಳ ಸಂಗೀತ

1.3 ವರ್ಣಪಾರದರ್ಶಿಕೆಗಳ ತಯಾರಿಕೆ, ಧ್ವನಿಮುದ್ರಣದ ಜತೆಜತೆಗೆ ನಾಗೇಗೌಡರ ಆಸಕ್ತಿಯು ವಿಡಿಯೊ ಚಿತ್ರೀಕರಣದತ್ತ ಹೊರಳಿತು. 1983ರ ಏಪ್ರಿಲ್ 11ರಂದು ಯುಗಾದಿ ಹಬ್ಬದ ದಿನದಿಂದ ವಿಡಿಯೊ ಚಿತ್ರೀಕರಣವನ್ನು ಆರಂಭಿಸಿದರು. ಶ್ರೀರಂಗಪಟ್ಟಣ ತಾಲ್ಲೂಕು ಮಂಡ್ಯ ಕೊಪ್ಪಲಿನ ಬೋರೇದೇವರ ಗುಡಿ ಬಳಿ ಕಾವೇರಿ ತೀರದಲ್ಲಿ ಹತ್ತಾರು ಗ್ರಾಮದೇವತೆ ಪೂಜೆಗಳ ಪುಣ್ಯಸ್ನಾನದ ಚಿತ್ರೀಕರಣದೊಂದಿಗೆ ಕರ್ನಾಟಕ ಜಾನಪದ ಪರಿಷತ್ತಿನ ವಿಡಿಯೊ ಯಾತ್ರೆ ಮೊದಲಾಯಿತು. ಹತ್ತಾರು ಹಳ್ಳಿಗಳ ಗ್ರಾಮದೇವತೆಗಳ ಪೂಜೆಗಳು, ಛತ್ರಿ, ಚೂರಿಪಾನಗಳು, ನಂದಿ ಕಂಬ, ಪಟಗಳು, ಕೋಲಾಟ, ವೀರಮಕ್ಕಳ ಕುಣಿತ, ಭಜನೆ ಮೇಳಗಳು, ಮೊಳಗುವ ವಾದ್ಯಮೇಳಗಳು, ಕಿವಿಗಿಂಪಾದ ಹಾಡುಗಳು, ಆಚರಣೆ, ಸಂಪ್ರದಾಯಗಳ ಚಿತ್ರೀಕರಣ ನಡೆಯಿತು. ಅಲ್ಲಿಂದ ಮುಂದಕ್ಕೆ ವಿವಿಧ ಪ್ರದೇಶಗಳಲ್ಲಿ ನಡೆಯುವ ವಿವಿಧ ಗ್ರಾಮದೇವತೆಗಳ ಹಬ್ಬಗಳನ್ನು ಕುರಿತಾದ ಚಿತ್ರೀಕರಣ. ಮಧುಗಿರಿ ದಂಡಿನ ಮಾರಮ್ಮನ ಹಬ್ಬ, ತೈಲೂರು ಪಟದಮ್ಮನ ಹಬ್ಬ, ಗೋಕಾಕದ ದ್ಯಾಮವ್ವನ ಹಬ್ಬ, ದೀವರ ಗೌರಿ ಹಬ್ಬ, ಭೂಮಣ್ಣಿ ಹಬ್ಬ, ದೀಪಾವಳಿ ಹಬ್ಬ, ಹಂಜನಕೆರೆ ಗೋಣಿಮಾರಮ್ಮನ ಹಬ್ಬ, ವಾಗಟದಲ್ಲಿ ಸಂಕ್ರಾಂತಿ ಹಬ್ಬ, ಕೊಡಗಳ್ಳಿ ಬೀರೇದೇವರ ಹಬ್ಬ, ಜನಪದರ ಬಾಳು ಬದುಕಿನ ಚಿತ್ರೀಕರಣ. ಬತ್ತದ ಗದ್ದೆಯಲ್ಲಿ ಬತ್ತದ ಕಟಾವು, ಅದನ್ನು ಹೊರೆಕಟ್ಟುವುದು, ಹೆಂಗಸರು, ಗಂಡಸರು ಹೊರೆ ಹೊತ್ತು ಗಾಡಿಗೆ ತುಂಬುವುದು. ಎತ್ತಿಗೆ ಲಾಳಕಟ್ಟುವುದು, ಗಾಣಿಗಶೆಟ್ಟಿ ಗಾಣ ಆಡಿಸುವುದು. ಕಮ್ಮಾರರ ಕುಲುಮೆಹಟ್ಟಿ, ಊರ ಪರಗಳಲ್ಲಿ ಹಿಟ್ಟಿನಮುದ್ದೆ ಕಟ್ಟುವುದು. ಕುಂಬಾರ ಮಣ್ಣಿನಿಂದ ಮಡಿಕೆ ಮಾಡುವುದು, ಕೊರಮರ ಈಚಲು ಗರಿಗಳಿಂದ ಕುಕ್ಕೆ, ಬುಟ್ಟಿ, ಮೊರ ಹೆಣೆಯುವುದು, ಹಚ್ಚೆ ಹುಯ್ಯುವುದು. ಹೆಂಗಸರ ವೇಷಭೂಷಣಗಳು, ಒಡವೆಗಳು, ಜನಪದ ಕುಣಿತಗಳು,

ವಾದ್ಯಮೇಳಗಳು, ಕೊಡವರ ನಡೆ ನುಡಿಗಳು, ಮದುವೆ, ಹುತ್ತರಿ ಕೋಲಾಟ, ಪೊನ್ನಂಪೇಟೆಯ ಭೂತದ ಕೋಲ, ದೀವರ ಹೆಂಗಸರ ಬಾಳು ಬದುಕು, ಕೋಟಾದಲ್ಲಿ ಮಾರಿಬಲೆ – ಹೀಗೆ ಗ್ರಾಮೀಣ ಕರಕುಶಲ ಕಲೆಗಳು, ಹಬ್ಬ ಹರಿದಿನ, ಜಾತ್ರೆಗಳು, ಜನಪದ ಪ್ರದರ್ಶನ ಕಲೆಗಳು, ಜನಪದ ಕಾವ್ಯಮೇಳಗಳು, ಜನಪದ ರಂಗಭೂಮಿ ಪ್ರಕಾರಗಳು, ಜನಪದ ಕಸರತ್ತುಗಳು, ಜನಪದ ಕ್ರೀಡೆಗಳು, ಜನಪದ ವಸ್ತು ವಿಶೇಷಗಳು. ಇವೇ ಮೊದಲಾದವುಗಳನ್ನು ತಾಳಿನಿಂದ ತುದಿಯವರೆಗೆ ಚಿತ್ರೀಕರಣ ನಡೆಸಿದರು.

ಹೀಗೆ ಹಲವಾರು ವರ್ಷಗಳು ನಾಡಿನಲ್ಲೆಲ್ಲಾ ಸುತ್ತಾಡಿ ವಿಡಿಯೊ ಚಿತ್ರೀಕರಣವನ್ನು ಕೈಗೊಂಡು ಎಡಿಟ್ ಮಾಡಿ ಆಸಕ್ತರಿಗೆ ತೋರಿಸಲಾಯಿತು. ವಿಡಿಯೊ ಚಿತ್ರೀಕರಣವನ್ನು ನೋಡಿದವರೆಲ್ಲರೂ "ಇದನ್ನು ನಿಮ್ಮಲ್ಲೇ ಇರಿಸಿಕೊಳ್ಳಬೇಡಿ. ಬೆಂಗಳೂರು ದೂರದರ್ಶನದಲ್ಲಿ ಪ್ರಸಾರಮಾಡಿ, ಇದರಿಂದ ಎಲ್ಲರೂ ನೋಡಿ ಆನಂದಿಸಲು ಅವಕಾಶವಾಗುತ್ತದೆ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಆದರೆ ನಾಗೇಗೌಡರು ಚಿತ್ರೀಕರಿಸಿದ್ದುದು ವಿ.ಎಚ್.ಎಸ್. ಫಾರ್ಮ್ಯಾಟ್‌ನಲ್ಲಾದುದರಿಂದ ದೂರದರ್ಶನದಲ್ಲಿ ಪ್ರಸಾರಮಾಡಲು ಬರುವುದಿಲ್ಲ. ದೂರದರ್ಶನದಲ್ಲಿ ಪ್ರಸಾರ ಮಾಡಬೇಕಾದರೆ ಯು–ಮ್ಯಾಟಿಕ್ ಹೈಬ್ಯಾಂಡ್‌ನಲ್ಲಿ ಚಿತ್ರೀಕರಿಸಬೇಕಾಗಿತ್ತು. ಇಂತಹ ಚಿತ್ರೀಕರಣವನ್ನು ಜಗತ್ತಿನ ಯಾವುದೇ ಭಾಗದಲ್ಲಾದರೂ ದೂರದರ್ಶನದ ಮೂಲಕ ತೋರಿಸಲು ಸಾಧ್ಯತೆ ಇದ್ದುದನ್ನು ಮನಗಂಡ ನಾಗೇಗೌಡರು, ಚಿತ್ರೀಕರಣದ ಖರ್ಚು ವೆಚ್ಚಗಳು ದುಬಾರಿಯಾದರೂ ಚಿಂತಿಸದೆ, ಮತ್ತೊಮ್ಮೆ ಅತ್ಯಾಧುನಿಕ ಹೈಟೆಕ್ ಚಿತ್ರೀಕರಣದಲ್ಲಿ ತೊಡಗಿಸಿಕೊಂಡರು. ಹೀಗೆ ಚಿತ್ರೀಕರಿಸಿಕೊಂಡಿದ್ದನ್ನೆಲ್ಲ ಅಚ್ಚುಕಟ್ಟಾಗಿ 'ಎಡಿಟ್' ಮಾಡಿಸಿ 'ಸಿರಿಗಂಧ' ಶೀರ್ಷಿಕೆಯಲ್ಲಿ ಧಾರಾವಾಹಿಯಾಗಿ ಪ್ರಸಾರಮಾಡಲು ಬೆಂಗಳೂರು ದೂರದರ್ಶನಕ್ಕೆ ಸಲ್ಲಿಸಲಾಯಿತು. ಸಿರಿಗಂಧ ಧಾರಾವಾಹಿಯ ಬಿಡುಗಡೆ ಸಮಾರಂಭವು 1994ರ ಮೇ 9ರಂದು ಜಾನಪದ ಲೋಕದಲ್ಲಿ ನಡೆಯಿತು. ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ.ಕೃಷ್ಣ ಅವರು ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿ, 'ನಾಗೇಗೌಡರು ನಶಿಸಿಹೋಗುತ್ತಿದ್ದ ಜಾನಪದ ಕಲೆ ಹಾಗೂ ಸಂಸ್ಕೃತಿಯನ್ನು ರಕ್ಷಿಸಲು ಕಾಯಕಲ್ಪ ಮಾಡಿದ್ದಾರೆ. ಈ ಕ್ಷೇತ್ರ ಸಾರೋದ್ಧಾರವಾಗಿ ಬೆಳೆಯಲಿ' ಎಂದು ಹಾರೈಸಿದರು.

ಸಿರಿಗಂಧ ಧಾರಾವಾಹಿಯ ಶೀರ್ಷಿಕೆ ಗೀತೆಯನ್ನು ಪ್ರೊ. ಸಿ.ವೀರಣ್ಣನವರು ಬರೆದರು. ಹೆಸರಾಂತ ಸಂಗೀತಗಾರರಾದ ರಾಜನ್ ನಾಗೇಂದ್ರ ಸಹೋದರರು ಸಂಗೀತಕ್ಕೆ ಅಳವಡಿಸಿದರು. ಶ್ರೀಮತಿ ರತ್ನಮಾಲಾ ಪ್ರಕಾಶ್ ಹಾಡಿದರು. ಬೆಂಗಳೂರು ದೂರದರ್ಶನದ ನಿರ್ದೇಶಕರಾದ ಅನಿಸ್ ಉಲ್ ಹಕ್ ಅವರು ಮತ್ತು ಸಹಾಯಕ ನಿರ್ದೇಶಕರಾದ ನಳಿನಿ ರಾಮಣ್ಣ ದೂರದರ್ಶನದ ಪ್ರಸಾರಕ್ಕೆ ಸಹಾಯಮಾಡಿದರು. ಸಿರಿಗಂಧ ಧಾರಾವಾಹಿಯು 108 ಸಂಚಿಕೆಗಳಲ್ಲಿ ಪ್ರಸಾರವಾಗಿ ನಾಡಿನಾದ್ಯಂತ ಆಬಾಲವೃದ್ಧರಾದಿಯಾಗಿ ಸಮಸ್ತರ ಮೆಚ್ಚುಗೆಗೆ ಪಾತ್ರವಾಯಿತು.

1.4 ಒಂದು ಕಾಲದ, ಒಂದು ಪ್ರದೇಶದ ಮಾನವನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಬದುಕನ್ನು ರೂಪಿಸಿದ, ಆದರೆ ಆಧುನಿಕ ವೈಜ್ಞಾನಿಕತೆ ಹಾಗೂ ಕೈಗಾರಿಕೀಕರಣದ ಫಲವಾಗಿ ಬಳಕೆ ತಪ್ಪಿಹೋಗಿರುವ ಮತ್ತು ಬಳಕೆಯಲ್ಲಿದ್ದು ಪರಂಪರೆಯ ಮುದ್ರೆಯನ್ನು ಪಡೆದಿರುವ ವಸ್ತುಗಳ ಭಂಡಾರವೇ ಜಾನಪದ ವಸ್ತುಸಂಗ್ರಹಾಲಯ. ಇದು ಕೇವಲ ಸಾಧನ ಸಲಕರಣೆಗಳಿಗೆ ವಸ್ತು ಒಡವೆಗಳಿಗೆ ಸೀಮಿತ ಅಲ್ಲ. ಬದುಕಿನ ಎಲ್ಲ ಕ್ಷೇತ್ರಗಳಿಗೂ ಅದರ ವ್ಯಾಪ್ತಿ ವಿಸ್ತರಿಸುತ್ತದೆ. ಊರು, ನಗರಗಳ ನಿರ್ಮಾಣ, ಹುಲ್ಲು ಸೋಗೆ, ಹೆಂಚು, ಕಾಂಕ್ರೀಟು ಸಂಸ್ಕೃತಿಗೆ ಮಾನವ ವಿಸ್ತರಿಸಿಕೊಂಡ ರೀತಿ ಎಲ್ಲವೂ ವಸ್ತುಸಂಗ್ರಹಾಲಯದ ಕಕ್ಷೆಯೊಳಗೆ ಬರುತ್ತದೆ. ಬದುಕಿನ ಅನಿವಾರ್ಯ ಪ್ರಕ್ರಿಯೆಗಳಲ್ಲಿ ಒಂದಾದ ಆಧುನೀಕರಣದೊಂದಿಗೆ ನಾಶವಾಗುತ್ತಿರುವ ಸೌಂದರ್ಯಾಂಶಗಳನ್ನು ಮೂರ್ತೀಕರಿಸುವ ಹಿನ್ನೆಲೆಯಲ್ಲಿ ಜಾನಪದ ವಸ್ತು ಸಂಗ್ರಹಾಲಯಗಳು ಮಹತ್ವವನ್ನು ಪಡೆದಿವೆ (ಜಾನಪದ ಕೈಪಿಡಿ: 1997).

ಜಾನಪದ ದಾಖಲಾತಿ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯಗಳ ಅಗತ್ಯ ಮತ್ತು ಮಹತ್ವಗಳನ್ನು ನಾಗೇಗೌಡರು ಪರಿಪಕ್ವವಾಗಿ ಬಲ್ಲವರಾಗಿದ್ದರು. ಅವರು ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದಾಗ, ಶರಾವತಿ ವ್ಯಾಲಿ ಪ್ರಾಜೆಕ್ಟ್, ಭದ್ರಾ ಪ್ರಾಜೆಕ್ಟ್, ಅಂಬ್ಲಿಗೊಳ ಪ್ರಾಜೆಕ್ಟ್ ಮುಂತಾದ ವಿದ್ಯುಚ್ಛಕ್ತಿ ಹಾಗೂ ನೀರಾವರಿ ಯೋಜನೆಗಳ ಸಲುವಾಗಿ ಲಕ್ಷಾಂತರ ಎಕರೆ ಭೂಮಿ ಕಳೆದುಕೊಂಡವರಿಗೆ ಬೇರೆ ಕಡೆ ಭೂಮಿ ಒದಗಿಸುವುದು ಮುಂತಾದ ಕೆಲಸಗಳನ್ನು ಜಿಲ್ಲಾಧಿಕಾರಿಯಾಗಿ ನಿರ್ವಹಿಸಿದ್ದರು. ಪಾಳುಬಿದ್ದ ಊರುಗಳಲ್ಲಿ ಹೇಳುವವರು, ಕೇಳುವವರಿಲ್ಲದೆ

ಬಿದ್ದಿದ್ದ ಮಾಸ್ತಿ ಕಲ್ಲುಗಳು, ವೀರಗಲ್ಲುಗಳು, ಶಿಲಾಶಾಸನಗಳು, ಸುಂದರವಾದ ಕೆತ್ತನೆ ಕೆಲಸವುಳ್ಳ ವಿಗ್ರಹಗಳು ಕಲಾತ್ಮಕ ವಸ್ತು ಸಾಮಗ್ರಿಗಳನ್ನು ಅಣೆಕಟ್ಟಿನ ನೀರಿನಲ್ಲಿ ಮುಳುಗಲು ಬಿಡದೆ ಒಂದೆಡೆ ಸಂಗ್ರಹಿಸಿಡಬೇಕೆಂಬ ಮನಸ್ಸು ಮಾಡಿದರು. ಕಲಾತ್ಮಕವಾಗಿ ಬಾಳಿದ ಜನಸಮುದಾಯದ ಕಲಾತ್ಮಕ ವಸ್ತುಗಳು ವೃಥಾ ಹಾಳಾಗಬಾರದೆಂಬ ಸದುದ್ದೇಶ ನಾಗೇಗೌಡರ ಮನಸ್ಸಿನಲ್ಲಿ ಉತ್ಪನ್ನವಾಯಿತು. ಪುರಾತನ ವಸ್ತುಗಳನ್ನು ಸಂಗ್ರಹಿಸಿ ಸಂರಕ್ಷಿಸಿಡಬೇಕೆಂಬ ಅವರ ಹುಚ್ಚು ಇಲ್ಲಿಂದ ಪ್ರಾರಂಭವಾಯಿತು.

ನಾಗೇಗೌಡರು ಇಡೀ ಜಿಲ್ಲೆಯಲ್ಲಿ ಸಂಚರಿಸಿದರು. ಊರು-ಕೇರಿಗಳನ್ನು ಸುತ್ತಿದರು. ಗುಡಿ-ಗುಂಡಾರಗಳನ್ನು ತಡಕಿದರು. ತಾವೇ ಅಟ್ಟ ಹತ್ತಿ ಕೈಗೆ ಸಿಕ್ಕ ಹಳೆಯ ಕಾಲದ ಕತ್ತಿ, ಗುರಾಣಿ, ಕೊಡಲಿ, ಕುಡುಗೋಲು, ಚಿತ್ತಾರದ ಗೆಯ್ಮೆ ಮಾಡಿದ ಗಾಡಿಚಕ್ರಗಳು, ಉಪ್ಪಿನಕಾಯಿ ಬಟ್ಟಲು, ಸಂಬಾರ ಮರಿಗೆ, ಅಡಿಕೆ ಕತ್ತರಿ, ಸುಣ್ಣಕಾಯಿಡಬ್ಬಿ, ಕಂಚಿನ ಗಂಟೆ, ಕತ್ತಿ, ಗುರಾಣಿ, ಭರ್ಜಿ, ಕೈಗೊಡಲಿ, ಮಚ್ಚು, ಬಿಲ್ಲುಬಾಣ, ಬಂದೂಕು, ಹೂತಿಟ್ಟ ಹಿಂದಿನ ಕಾಲದ ನಾನಾ ಬಗೆಯ ನಾಣ್ಯಗಳು, ತೂಕದ ಬಟ್ಟುಗಳು- ಹೀಗೆ ಒಂದಲ್ಲ ಎರಡಲ್ಲ; ಕೈಗೆ ಸಿಕ್ಕವುಗಳನ್ನೆಲ್ಲ ತಂದು, ವಸ್ತುಸಂಗ್ರಹಾಲಯಗಳ ವಸ್ತು ಜೋಡಣೆಯಲ್ಲಿ ನುರಿತಾದವರನ್ನು ಕರೆಸಿ, ಶಿವಮೊಗ್ಗೆಯಲ್ಲಿ ಶಿವಪ್ಪನಾಯಕನ ಹೆಸರಿನಲ್ಲಿ ಜಿಲ್ಲಾ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿ ಒಪ್ಪ ಓರಣದಿಂದ ಜೋಡಿಸಿದ್ದರು. ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಎಸ್.ನಿಜಲಿಂಗಪ್ಪನವರು ಈ ವಸ್ತುಸಂಗ್ರಹಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿ ನಾಗೇಗೌಡರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದ್ದರು.

ವಸ್ತುಸಂಗ್ರಹಾಲಯದ ಸ್ಥಾಪನೆಯ ಹಿನ್ನೆಲೆಯಲ್ಲಿ ಇಂತಹ ಸಮೃದ್ಧ ಅನುಭವ ಮತ್ತು ಕಠಿಣ ಪರಿಶ್ರಮ ನಾಗೇಗೌಡರಿಗೆ ಇದ್ದುದರಿಂದ, ಕರ್ನಾಟಕ ಜಾನಪದ ಪರಿಷತ್ತಿನ ಸ್ಥಾಪನೆಯ ಅನಂತರ, ಜಾನಪದ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲು ಹಟತೊಟ್ಟು ಮುನ್ನಡೆದರು. ಈ ಹೊತ್ತಿಗಾಗಲೇ ಭಾರತದಲ್ಲಿ ವಸ್ತುಸಂಗ್ರಹಾಲಯಗಳ ಆಂದೋಲನವೇ ಆರಂಭವಾಗಿದ್ದಿತು. ಪುಣೆಯ ಕೇಳ್ಕರ್ ಮ್ಯೂಸಿಯಂ, ಅಹಮದಾಬಾದ್‌ನಲ್ಲಿ ಡಾ. ಜ್ಯೋತೀಂದ್ರ ಜೈನ್ ಸ್ಥಾಪಿಸಿದ್ದ ಶ್ರೇಯಸ್ ಜನಪದ ಕಲಾ ಮ್ಯೂಸಿಯಂ, ಉದಯಪುರದಲ್ಲಿ ದೇವಿಲಾಲ್

ಸಮರ ಅವರು ಸ್ಥಾಪಿಸಿದ ಜಾನಪದ ವಸ್ತುಸಂಗ್ರಹಾಲಯಗಳು ಗಮನಾರ್ಹ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. 1967ರಲ್ಲಿ ದೇಜಗೌ ಅವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಿದ ಜಾನಪದ ವಸ್ತುಸಂಗ್ರಹಾಲಯವು ಗುಣ–ಗಾತ್ರ–ಸತ್ವ–ವೈಜ್ಞಾನಿಕತೆಯ ದೃಷ್ಟಿಯಿಂದ ದೇಶದಲ್ಲೇ ಮೊದಲನೆಯದೆಂದು ಹೆಸರಾಗಿದ್ದಿತು. ಇವೆಲ್ಲವುಗಳನ್ನು ಕಂಡು, ನೋಡಿ, ತಿಳಿದು ಬಂದಿದ್ದ ನಾಗೇಗೌಡರು ಜಾನಪದ ವಸ್ತು ಸಂಗ್ರಹಾಲಯ ಸ್ಥಾಪನೆಯ ಕನಸು ಕಂಡರು. ಸೂತ್ರದ ಗೊಂಬೆಯಾಟದ ಪ್ರಸಿದ್ಧ ಕಲಾವಿದರಾದ ಶ್ರೀ ಕೊಗ್ಗ ಕಾಮತರ ಎರಡು ಸೂತ್ರದ ಗೊಂಬೆಗಳನ್ನು ಸಂಗ್ರಹಿಸುವ ಮೂಲಕ ತಮ್ಮ ಈ ಕಾರ್ಯಕ್ಕೆ ಚಾಲನೆಯನ್ನಿತ್ತರು. ರಾಜ್ಯದ ನಾನಾ ಕಡೆಗಳಲ್ಲಿ ಸಂಚರಿಸಿ ವಸ್ತುಗಳನ್ನು ಸಂಗ್ರಹಿಸುತ್ತಾ ಬಂದರು. ಆರಂಭಕ್ಕೆ ಕರ್ನಾಟಕ ಜಾನಪದ ಪರಿಷತ್ತಿನ ಬೆಂಗಳೂರು ಕಚೇರಿಯಲ್ಲಿ ಪುಟ್ಟದಾಗಿ ವಸ್ತುಸಂಗ್ರಹಾಲಯ ಸ್ಥಾಪಿಸಿ 1984ರ ಫೆಬ್ರವರಿ 8ರಂದು ಅದರ ಉದ್ಘಾಟನೆ ನೆರವೇರಿಸಿದರು. ಸುಮಾರು 20,000/– ರೂ.ಗಳ ವೆಚ್ಚದಲ್ಲಿ ಕಚೇರಿಗೆ ಹೊಂದಿಕೊಂಡಂತೆ ಸ್ಥಾಪನೆಯಾದ ಈ ಸಂಗ್ರಹಾಲಯವನ್ನು ಆಗಿನ ಯುವಜನ ಸೇವಾ ಸಚಿವ ಶ್ರೀ ಜೀವರಾಜ ಆಳ್ವ ಉದ್ಘಾಟಿಸಿ 'ಜಾನಪದ ವಸ್ತುಸಂಗ್ರಹಾಲಯವನ್ನು ವೀಕ್ಷಿಸುವುದೇ ಒಂದು ವಿಶೇಷ ಅನುಭವ' ಎಂದು ಅಭಿಪ್ರಾಯಪಟ್ಟರು. ಮುಂದೆ ಇದು ಬೃಹತ್ತಾಗಿ ಬೆಳೆಯಿತು. ಇಂದು ಜಾನಪದ ಲೋಕದಲ್ಲಿ ಒಳಾಂಗಣ ಮತ್ತು ಹೊರಾಂಗಣ ವಸ್ತುಸಂಗ್ರಹಾಲಯಗಳಿವೆ. ಆಯುಗಾರರ ಮಾಳವಿದೆ. ಶಿಲ್ಪಗಾರರ ಮಾಳವಿದೆ. ಜಾನಪದ ವಸ್ತುಸಂಗ್ರಹಾಲಯವನ್ನು ಕಟ್ಟುವಲ್ಲಿ ಗೌಡರೊಂದಿಗೆ ನೆರವಾದವರಲ್ಲಿ ಕುರುವ ಬಸವರಾಜ್, ಬೈರ‍್ನಳ್ಳಿ ಶಿವರಾಮ ಮತ್ತು ಕಡಬ ಶ್ರೀನಿವಾಸ ಪ್ರಮುಖರು.

ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಲೋಕದಲ್ಲಿ ಸ್ಥಾಪಿಸಿರುವ ಜಾನಪದ ವಸ್ತುಸಂಗ್ರಹಾಲಯಗಳಲ್ಲಿನ ವಸ್ತು ವಿಶೇಷಗಳ ಪಟ್ಟಿಯನ್ನು ಜಾನಪದ ಅಧ್ಯಯನಾಸಕ್ತರ ಸಲುವಾಗಿ ಇಲ್ಲಿ ನೀಡಲಾಗಿದೆ. ಇಷ್ಟಾಗಿಯೂ, ಒಂದು ಅಂಶವನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಜಾನಪದ ವಸ್ತು ಸಂಗ್ರಹಾಲಯ ಎನ್ನುವುದು ಕೇವಲ ಪುರಾತನ ಗ್ರಾಮೀಣ ಸರಕುಗಳ ಪ್ರದರ್ಶನ ಶಾಲೆಯಾಗಬಾರದು. ಜನಪದ ಸಮುದಾಯದ ಅನನ್ಯತೆಯನ್ನು ಬಿಂಬಿಸುವ, ಪರಿಶೋಧಿಸುವ, ತಿಳಿವಳಿಕೆ ನೀಡುವ ಸಂಸ್ಕೃತಿ ಕೇಂದ್ರವಾಗಬೇಕು.

ಮಡಿಕೆ ಕುಡಿಕೆಗಳು ಹೇಳ್ಯಾವೆ ಕಥೆಯ

1. ತೊಗಲುಗೊಂಬೆಗಳು
2. ಸೂತ್ರದ ಗೊಂಬೆಗಳು
3. ಖಿಲಾಡಿ ಗೊಂಬೆಗಳು
4. ವೇಷಭೂಷಣ ಸಹಿತ ಆಳೆತ್ತರದ ಗೊಂಬೆಗಳು
5. ಚರ್ಮ ವಾದ್ಯಗಳು
6. ತಂತಿ ವಾದ್ಯಗಳು
7. ತಾಳ ವಾದ್ಯಗಳು
8. ಲೋಹ ವಾದ್ಯಗಳು
9. ಗಾಳಿ ವಾದ್ಯಗಳು
10. ಒಡವೆಗಳು
11. ಆಯುಧಗಳು
12. ಮಕ್ಕಳ ಆಟಿಕೆಗಳು
13. ಮದುವೆ ಸಂಬಂಧಿ ವಸ್ತುಗಳು
14. ದೇವರ ವಿಗ್ರಹಗಳು ಮತ್ತು ಪೂಜಾ ಸಾಮಗ್ರಿಗಳು
15. ಹಚ್ಚೆ-ಚಿತ್ತಾರ
16. ಅಡಿಗೆಮನೆ ಸಲಕರಣೆಗಳು
17. ತಾಂಬೂಲ ಸಲಕರಣೆಗಳು
18. ನಾಣ್ಯಗಳು
19. ಅಳತೆ ಸಾಧನಗಳು
20. ಜನಪದ ವೈದ್ಯ ಸಂಬಂಧಿ ವಸ್ತುಗಳು
21. ಓಲೆಗರಿ ಕಡತಗಳು
22. ವೃತ್ತಿ ಉಪಕರಣಗಳು
23. ಸೋಮ ಹರಿಗೆಗಳು
24. ಗಂಜೀಫ ಕಾರ್ಡುಗಳು
25. ಪೌರಾಣಿಕ ಗೊಂಬೆಗಳು
26. ಗಾರುಡಿ ಗೊಂಬೆಗಳು

27. ಮುಖವಾಡಗಳು
28. ಮೆಕ್ಕೆಕಟ್ಟೆ ವಿಗ್ರಹಗಳು
29. ಛಾಯಾಚಿತ್ರಗಳು ಮತ್ತು ವರ್ಣಚಿತ್ರಗಳು
30. ಸಂಕೀರ್ಣ ವಸ್ತುಗಳು

ಕಾಕೋಳಿ ಕೂಗಿ ಲೋಕ ಬೆಳಗಾಯಿತು

1.5 ಕರ್ನಾಟಕದಲ್ಲಿ ಅತ್ಯುನ್ನತ ಗ್ರಾಮೀಣ ಸಾಂಸ್ಕೃತಿಕ ಕೇಂದ್ರವೊಂದನ್ನು ನಿರ್ಮಾಣ ಮಾಡಬೇಕೆನ್ನುವುದು ನಾಗೇಗೌಡರ ಬಹುದಿನಗಳ ಬಲವತ್ತರವಾದ ಕನಸು. ಥಾಯ್‌ಲೆಂಡ್ ಪ್ರವಾಸ ಕೈಗೊಂಡಿದ್ದ ಗೌಡರು ಥಾಯ್‌ಲೆಂಡ್‌ನ ಥೈ ವಿಲೇಜ್ ಮಾದರಿಯಲ್ಲಿ ಬೆಂಗಳೂರಿನಲ್ಲಿ ಇಂತಹ ಕೇಂದ್ರವನ್ನು 'ಜಾನಪದ ಲೋಕ' ಎಂಬ ಹೆಸರಿನಲ್ಲಿ ನಿರ್ಮಾಣ ಮಾಡಬೇಕೆಂಬ ಕನಸು ಕಂಡಿದ್ದರು. 1979ರಲ್ಲಿ ಕರ್ನಾಟಕ ಜಾನಪದ ಪರಿಷತ್ತು ಸ್ಥಾಪನೆಯಾದಂದಿನಿಂದಲೂ 'ಜಾನಪದ ಲೋಕ'ದ ನಿರ್ಮಾಣಕ್ಕಾಗಿ ಬೇಕಾದ ಜಾಗಕ್ಕಾಗಿ ಬೆಂಗಳೂರಿನಾದ್ಯಂತ ಹುಡುಕಾಟ ನಡೆಸಿದ್ದರು. ಆರ್ಕಿಟೆಕ್ಟ್ ಶಾಂತರಾವಕರ್ ಅವರಿಂದ ಜಾನಪದ ಲೋಕದ ನಕಾಶೆಯನ್ನು ಸಿದ್ಧಪಡಿಸಿಟ್ಟುಕೊಂಡಿದ್ದರು. ಬೆಂಗಳೂರಿನಲ್ಲಿ ಸೂಕ್ತ ಜಾಗ ದೊರೆಯದಿದ್ದಾಗ, ಬೆಂಗಳೂರಿನಿಂದ ಹೊರಗಡೆ ಏಕೆ ಸ್ಥಾಪನೆ ಮಾಡಬಾರದೆಂದು ಚಿಂತಿಸಿದ ನಾಗೇಗೌಡರು 1985ರ ಮೇ ಒಂದರಂದು ಬೆಂಗಳೂರು ವಿಶೇಷ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಟಿ.ತಿಮ್ಮೇಗೌಡರ ಸಹಕಾರದಿಂದ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಾಮನಗರದಿಂದ ಮುಂದೆ ದೊಡ್ಡಮಣ್ಣುಗುಡ್ಡೆ ಬ್ಲಾಕ್ ನಂ.306ನೇ ನಂಬರಿನಲ್ಲಿನ ಕೊರಕಲು ಜಮೀನನ್ನು ನಿರ್ಮಾಣಕ್ಕಾಗಿ ದೊರಕಿಸಿಕೊಂಡರು. ಬೆಂಗಳೂರು–ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ ಇದ್ದು, ಪ್ರವಾಸಿಗರು ನಿತ್ಯ ಓಡಾಡುವ ಹೆದ್ದಾರಿಯಾದುದರಿಂದ ಇದೇ ಪ್ರಶಸ್ತವಾದುದೆಂದು ತೀರ್ಮಾನಿಸಿ ಆ ಜಮೀನನ್ನು ಜಾನಪದ ಲೋಕಕ್ಕೆ ಆಯ್ಕೆ ಮಾಡಿಕೊಂಡರು.

ಜಾಗದ ಆಯ್ಕೆಯಾದ ಕೂಡಲೇ, ಮೆಸರ್ಸ್ ಬೋಪಯ್ಯ ಅಸೋಸಿಯೇಟ್ಸ್ ಅವರಿಂದ ಮಾಸ್ಟರ್ ಪ್ಲಾನ್ ತಯಾರಿಸಿದರು. ಮಾಸ್ಟರ್ ಪ್ಲಾನ್ ಅನುಸಾರ ಟೇಬಲ್ ಮಾಡೆಲ್ ಸಿದ್ಧಪಡಿಸಿ ಪರಿಷತ್ತಿನ ಕಚೇರಿಯಲ್ಲಿರಿಸಿದರು. ಜಾನಪದ ಲೋಕದ ನಿರ್ಮಾಣಕ್ಕೆ ಮೊದಲಿಗೆ ಮಂಜೂರಾಗಿದ್ದು 5 ಎಕರೆ ಜತೆಗೆ 2

ಎಕರೆ 10 ಗುಂಟೆ ಜಮೀನು. ಹಲವಾರು ತಿಂಗಳುಗಳ ಕಾಲ ಬೆಂಗಳೂರಿನಿಂದ ರಾಮನಗರಕ್ಕೆ ಅಲೆದಾಡಿದ ಗೌಡರು ಹತ್ತಾರು ಜನರ ಕಾಲುಕಟ್ಟಿ ಸುಮಾರು 10 ಎಕರೆ ಪ್ರದೇಶವನ್ನು ಜಾನಪದ ಲೋಕಕ್ಕೆ ಪಡೆದುಕೊಂಡರು. ಆಗಿನ್ನು ಪರಿಷತ್ತಿಗೆ ಸ್ವಂತ ವಾಹನ ಸೌಲಭ್ಯ ಇರದ ದಿನಗಳವು. ಬೆಂಗಳೂರಿನಿಂದ ರಾಮನಗರಕ್ಕೆ ಬಸ್ಸಿನಲ್ಲಿ ಪ್ರಯಾಣಮಾಡಿ, ರಾಮನಗರದಿಂದ ಜಾನಪದ ಲೋಕಕ್ಕೆ ಅವರಿವರ ವಾಹನಗಳಲ್ಲಿ ಹೋಗಬೇಕಾಗಿತ್ತು. ವಾಹನಗಳು ಸಿಗದಿದ್ದಾಗ ಗೌಡರು ಎಷ್ಟೋ ದಿನಗಳು ರಾಮನಗರದಿಂದ ಜಾನಪದ ಲೋಕಕ್ಕೆ ನಡೆದುಕೊಂಡು ಹೋಗಿದ್ದುದೂ ಉಂಟು.

ಜಾನಪದ ಲೋಕದಲ್ಲಿ ಎಲ್ಲೆಲ್ಲಿ ಯಾವ ಯಾವ ಕಟ್ಟಡಗಳು ಬರಬೇಕೆಂದು ಅರ್ಕಿಟೆಕ್ಟ್ ಬೋಪಯ್ಯನವರು ತಯಾರಿಸಿದ್ದ ಮಾಸ್ಟರ್ ಪ್ಲಾನಿನ ಅನುಸಾರ ಬೋರ್ಡ್‌ಗಳನ್ನು ಬರೆಸಿ ಹಾಕಿದರು. ಜಾನಪದ ಲೋಕದ ನಿರ್ಮಾಣಕ್ಕೆ ಬೇಕಾದ ಹಣಕಾಸಿನ ನೆರವಿಗಾಗಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳಿಗೆಲ್ಲಾ ಮನವಿಗಳನ್ನು ಸಲ್ಲಿಸಲಾಯಿತು. ದಾನಿಗಳನ್ನು ಹುಡುಕಿ ಅವರನ್ನು ಬೇಡಿಕೊಂಡಿದ್ದಾಯಿತು. ಇಷ್ಟಾಗಿಯೂ ಜಾನಪದ ಲೋಕದ ನಿರ್ಮಾಣಕ್ಕೆ ರಾಮನಗರದ ಜಿಲ್ಲಾ ಪರಿಷತ್ ಎಕ್ಸಿಕ್ಯುಟಿವ್ ಇಂಜಿನಿಯರ್ ಯು.ಎಂ. ಮಲ್ಲಿಕಾರ್ಜುನ ಗೌಡರು ಮತ್ತು ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಜೆ.ಡಿ.ಗಂಗಯ್ಯನವರು ನೀಡಿದ ಸಹಕಾರ ದೊಡ್ಡದು.

ಜಾನಪದ ಲೋಕವು ಗ್ರಾಮೀಣ ಸಂಸ್ಕೃತಿಯ ಪುನರುಜ್ಜೀವನ ಕೇಂದ್ರವಾಗ ಬೇಕೆಂದು ಬಯಸಿದ್ದ ಗೌಡರು ಜಾನಪದ ಲೋಕದ ಕಾರ್ಯಚಟುವಟಿಕೆಗಳ ರೂಪುರೇಷೆಗಳನ್ನು ಸಿದ್ಧಪಡಿಸಿದರು.

1. ಜನಪದರ ಬಾಳು–ಬದುಕು, ಹಬ್ಬ ಹರಿದಿನಗಳು, ಮದುವೆ–ಮುಂಜಿಗಳು, ಕೆಲಸ ಕಸುಬುಗಳು, ಉಡುಗೆ–ತೊಡುಗೆಗಳು ಇತ್ಯಾದಿಗಳಿಗೆ ಸಂಬಂದಪಟ್ಟ ಒಳ ಹಾಗೂ ಹೊರಾಂಗಣ ಮ್ಯೂಸಿಯಂಗಳ ಸ್ಥಾಪನೆ.
2. ಗ್ರಾಮೀಣರ ಧೀಮಂತ ಬದುಕಿಗೆ ಸಾಕ್ಷಿಯಾದ ವೀರಗಲ್ಲು, ಮಾಸ್ತಿಗಲ್ಲು, ಶಿಲಾಶಾಸನಗಳು ಇತ್ಯಾದಿಗಳ ಸಂಗ್ರಹ.
3. ಬೆಂಗಳೂರು–ಮೈಸೂರು ಮಧ್ಯೆ ಓಡಾಡುವ ಸಹಸ್ರಾರು ಸಂಖ್ಯೆಯ

ದೇಶ ವಿದೇಶಗಳ ಪ್ರವಾಸಿಗರ ಮನರಂಜನೆಗಾಗಿ ದಿನನಿತ್ಯ ಜನಪದ ಸಂಗೀತ, ನೃತ್ಯ, ನಾಟಕ, ಪ್ರದರ್ಶನ ಕಲೆಗಳ ಪ್ರದರ್ಶನ.

4. ಯುವ ಪೀಳಿಗೆಯು ಜನಪದ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಶಿಬಿರಗಳ ಏರ್ಪಾಟು.
5. ಯುವಕರಿಗೆ ಜನಪದ ಕಲೆಗಳಲ್ಲಿ ತರಬೇತಿ.
6. ಜನಪದ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ.
7. ಗ್ರಾಮೀಣ ಕಲಾವಿದರು ತಮ್ಮ ಕಲೆಗಳನ್ನು ಬದಲಾದ ಪರಿಸ್ಥಿತಿಗೆ ತಕ್ಕಂತೆ ಪರಿಷ್ಕರಿಸಿಕೊಂಡು, ಮೂಲ ಸತ್ವಕ್ಕೆ ಭಂಗ ಬರದಂತೆ ಪ್ರದರ್ಶಿಸುವ ಏರ್ಪಾಟು. ಇದಕ್ಕಾಗಿ ತಕ್ಕ ತರಬೇತಿ, ವೇಷಭೂಷಣಗಳ ವ್ಯವಸ್ಥೆ.
8. ಜನಪದ ಸಾಹಿತ್ಯದ ಧ್ವನಿಮುದ್ರಣ.
9. ಜನಪದ ಬದುಕಿನ ಸರ್ವ ಪ್ರಕಾರಗಳ ವಿಡಿಯೊ ಚಿತ್ರೀಕರಣ, ಸ್ಲೈಡ್‌ಗಳ ತಯಾರಿಕೆ ಮತ್ತು ಪ್ರದರ್ಶನ
10. ಜಾನಪದ ಸಮಗ್ರ ಸಂಗ್ರಹ–ಅಧ್ಯಯನ–ಸಂಶೋಧನೆ, ಬೃಹತ್ ಜಾನಪದ ಮಾಹಿತಿ ಭಂಡಾರ ಸ್ಥಾಪನೆ
11. ಜಾನಪದ ನಿಘಂಟು ಮತ್ತು ಕೋಶಗಳ ರಚನೆ.
12. ಗ್ರಾಮೀಣ ಕಲಾವಿದರ ವೇಷಭೂಷಣಗಳು, ವಾದ್ಯಗಳು ಮತ್ತಿತರ ಸಲಕರಣೆಗಳ ತಯಾರಿಕೆ ಮತ್ತು ಮಾರಾಟ ವ್ಯವಸ್ಥೆ.
13. ಗ್ರಾಮೀಣ ಕರಕುಶಲ ವಸ್ತುಗಳ ತಯಾರಿಕೆ ಮತ್ತು ಮಾರಾಟ ವ್ಯವಸ್ಥೆ.
14. ಗ್ರಾಮೀಣ ಮತ್ತು ಆದಿವಾಸಿ ಜನಾಂಗಗಳ ಮಹಿಳೆಯರ ಹೆಣಿಗೆ, ಹೊಲಿಗೆ, ರಂಗೋಲಿ, ಚಿತ್ತಾರ ಇತ್ಯಾದಿ ಕಲೆಗಳ ಶಿಕ್ಷಣ ಮತ್ತು ಪ್ರದರ್ಶನ.
15. ಜಾನಪದ ಸಂಬಂಧಿ ವಿಚಾರಗೋಷ್ಠಿಗಳು, ಪುಸ್ತಕ ಪ್ರಕಟಣೆ.
16. ಸಮರ ಕಲೆಗಳ ತರಬೇತಿ (ಕುಸ್ತಿ ವರಸೆ, ದೊಣ್ಣೆ ವರಸೆ, ಕತ್ತಿ ವರಸೆ, ಬಿಜಲಿ ವರಸೆ ಇತ್ಯಾದಿ).
17. ಟಗರು ಕಾಳಗ, ಕೋಳಿ ಅಂಕ, ಕಂಬಳ, ಎತ್ತಿನ ಗಾಡಿ ಓಟ ಇತ್ಯಾದಿ ಗ್ರಾಮೀಣ ಕ್ರೀಡೆಗಳ ಪ್ರದರ್ಶನ.
18. ಗ್ರಾಮೀಣ ಕ್ರೀಡಾ ಸ್ಪರ್ಧೆಗಳ ಏರ್ಪಾಟು.
19. ಗ್ರಾಮೀಣ ಹಬ್ಬಹರಿದಿನಗಳ ಆಚರಣೆಗಳಿಗೆ ವಾತಾವರಣ ನಿರ್ಮಾಣ.

20. ಜಾನಪದ ಲೋಕಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ವಿಶಿಷ್ಟ ಗ್ರಾಮೀಣ ಆಹಾರ ಪಾನೀಯಗಳನ್ನು ಒದಗಿಸುವ ಏರ್ಪಾಡು.

ಒಟ್ಟಿನಲ್ಲಿ, ಜನಸಮುದಾಯದ ನಡುವೆ ಗ್ರಾಮೀಣ ಸಂಸ್ಕೃತಿಯ ಬಗ್ಗೆ ಅಭಿಮಾನ, ಆಸಕ್ತಿ, ಶ್ರದ್ಧೆಗಳನ್ನು ಚೇತನಗೊಳಿಸುವ ಘನ ಉದ್ದೇಶಗಳನ್ನು ಜಾನಪದ ಲೋಕ ಅಂತರ್ಗತಿಸಿಕೊಂಡಿರುತ್ತದೆ.

ಜಾನಪದ ಲೋಕವು ಸಮಗ್ರ ಗ್ರಾಮೀಣ ಸಂಸ್ಕೃತಿಯ ಕೇಂದ್ರವಾಗಿ ಬೆಳೆಯಬೇಕೆಂಬುದು ಗೌಡರ ಉದಾತ್ತ ಉದ್ದೇಶವಾಗಿದ್ದಿತು. ಇದಕ್ಕಾಗಿ ಸ್ಥಳೀಯ ಗಣ್ಯರನ್ನು ಕರೆಸಿ ಸಮಾಲೋಚನೆ ನಡೆಸಿದರು. ನೆರವು ಕೋರಿದರು. ಸಲಹೆಗಳನ್ನು ನಿರೀಕ್ಷಿಸಿದರು. ಡಾ. ಎಸ್.ಎಲ್.ತಿಮ್ಮಯ್ಯ, ಡಾ. ವರದಪ್ಪ, ಸು.ತ.ರಾಮೇಗೌಡ, ಲೋಕಸಭಾ ಸದಸ್ಯರಾದ ಎಂ.ವಿ. ಚಂದ್ರಶೇಖರಮೂರ್ತಿ ಸೇನಾಪತಿ ವೈಟ್ಲೆ ಕಂಪನಿಯ ಕಾರ್ಯದರ್ಶಿ ಗೋವಿಂದರಾಜು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾದ ಸಿ.ನಾರಾಯಣಸ್ವಾಮಿ, ಎಲ್.ಎಸ್. ರಾಮಲಿಂಗಯ್ಯ ಹೀಗೆ ಹಲವು ಮಂದಿ ಗಣ್ಯರು ಹಲವು ಬಗೆಯಲ್ಲಿ ಜಾನಪದ ಲೋಕದ ನೆರವಿಗೆ ಮುಂದಾದರು.

1998ರ ಮೇ 2ರಂದು, ಚನ್ನಪಟ್ಟಣ ತಾಲ್ಲೂಕು ಮಳೂರು ಹೋಬಳಿ ಅವ್ವೇರಹಳ್ಳಿ ಗ್ರಾಮದ ಕಟ್ಟೆಮನೆ ಯಜಮಾನ ದಿವಂಗತ ಚನ್ನೇಗೌಡರು 1981ರಲ್ಲಿ ಶ್ರೀ ಆದಿಚುಂಚನಗಿರಿ ಮಠಕ್ಕೆ ನೀಡಲು ತಯಾರಿಸಿದ್ದ ಸುಮಾರು ಆರು ಅಡಿ ಅಗಲದ ಬೀಸುವ ಕಲ್ಲನ್ನು ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳವರು ಜಾನಪದ ಲೋಕದಲ್ಲಿ ಪ್ರತಿಷ್ಠಾಪನೆ ಮಾಡುವುದರ ಮೂಲಕ ಜಾನಪದ ಲೋಕದ ಚಟುವಟಿಕೆಗಳು ವಿಧ್ಯುಕ್ತವಾಗಿ ಪ್ರಾರಂಭವಾದವು. ಇದೇ ಸಂದರ್ಭದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತಿನ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಲ್ಲಿಕಾರ್ಜುನಗೌಡರು ಜಾನಪದ ಲೋಕದಲ್ಲಿ 'ಲೋಕಮಾತಾ ಮಂದಿರ'ವನ್ನು ಕಟ್ಟಿಸಿಕೊಡುವುದಾಗಿ ಭರವಸೆ ನೀಡಿದರು. ಬೆಂಗಳೂರು ಜಿಲ್ಲಾ ಪರಿಷತ್ ಅಧ್ಯಕ್ಷರಾದ ಸಿ. ನಾರಾಯಣಸ್ವಾಮಿ ಅವರು, ಜಿಲ್ಲಾ ಪರಿಷತ್ ವತಿಯಿಂದ ಕೊರೆಯಲಾಗಿದ್ದ ಕೊಳವೆ ಬಾವಿಯನ್ನು ಉದ್ಘಾಟಿಸಿದರು. ಆಶೀರ್ವಚನ ನೀಡಿದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು 'ಜನಪದ ಕಲೆಗಳನ್ನು ಉಳಿಸಿ ಬೆಳೆಸಿಕೊಂಡು ಬರಲಿಕ್ಕೆ

ನಾಗೇಗೌಡರು ತಮ್ಮನ್ನೇ ಅರ್ಪಿಸಿಕೊಂಡಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಡಿಸ್ನಿಲ್ಯಾಂಡ್, ಮರಿನಾಲ್ಯಾಂಡ್‌ಗಳಿರುವಂತೆ, ನಾಳಿನ ದಿನ ಜಾನಪದ ಲೋಕವೂ ಸಹ ಸಹಸ್ರಾರು ಜನರ ಪ್ರೇಕ್ಷಣೀಯ ಕೇಂದ್ರವಾಗುತ್ತದೆ' ಎಂದು ಹಾರೈಸಿದರು.

ಕನ್ನಡನಾಡಿನ 20ನೆಯ ಶತಮಾನದ ಚರಿತ್ರೆಯ ಅದ್ಭುತಗಳಲ್ಲಿ ಒಂದು ನಾಗೇಗೌಡರು ರೂಪಿಸಿದ ಜಾನಪದ ಲೋಕ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಾಮನಗರದ ಬಳಿ ಸುಮಾರು 15 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಜಾನಪದ ಲೋಕವು ನಾಗೇಗೌಡರು ಕಂಡ ಹಲವು ವರ್ಷಗಳ ಕನಸಿನ ಕೂಸು. ಈ ಕನಸು ಅವರ ಕಠಿಣ ಪರಿಶ್ರಮ, ಸಂಘಟನಾಶಕ್ತಿಯ ಫಲವಾಗಿ 1994ರ ಮಾರ್ಚ್ 12ರಂದು ನನಸಾಯಿತು. ಗೌಡರು ಜಾನಪದ ಲೋಕದ ಬೃಹತ್ ಪಾಳೆಯನ್ನು ಕಟ್ಟುವ ಕೆಲಸದಲ್ಲಿ ಯಶಸ್ವಿಯಾದರು.

ಜಾನಪದ ಲೋಕದ ಮಹತ್ವದ ಆಕರ್ಷಣೆಯೇ ಅದರ ಮಹಾದ್ವಾರ ಹರಿಗೆ ಮತ್ತು ಕೊಂಬುಗಳಿಂದ ಅಲಂಕೃತವಾದ ವಿಶಾಲ ಮಹಾದ್ವಾರ, ಇಕ್ಕೆಲಗಳಲ್ಲಿ ಎತ್ತರದ ನಂದೀಕಂಬಗಳು, ಶೈವ ಮತ್ತು ವೈಷ್ಣವ ಸಂಪ್ರದಾಯಗಳೆರಡರ ಸಮ್ಮಿಲನ ಈ ಮಹಾದ್ವಾರದ ರಚನೆಯಲ್ಲಿ ಅಡಗಿದೆ. ಒಳಹೋಗುತ್ತಿದ್ದಂತೆ ಎದ್ದು ಕಾಣುವ ಬಿಸುವ ಕಲ್ಲಿನ ಅರ್ಥಪೂರ್ಣವಾದ ಲಾಂಛನ, ಕೋಣಗಳನ್ನು ಕಟ್ಟಿ ಎಳೆಸುತ್ತಿದ್ದ ಬೃಹತ್ತಾದ ಬೀಸುವ ಕಲ್ಲು, ಗಿರಿಜನರ ಅಡುಗೆ ಮನೆಯ ವಿವಿಧ ವಸ್ತುಗಳ ಸಂಗ್ರಹಾಲಯವಾದ ಲೋಕಮಾತ ಮಂದಿರ, ಅದರ ಪಕ್ಕದಲ್ಲೇ ನಾಗೇಗೌಡರ ಜಾನಪದ ಬೆಳವಣಿಗೆಯನ್ನು ಪ್ರತಿಬಿಂಬಿಸುವ ಚಿತ್ರಕುಟೀರ, ಹಿಂಬದಿಯಲ್ಲಿ ದೀವರು ಮತ್ತು ಹಸಲರ ಗಿರಿಜನ ಕುಟೀರಗಳು, ಕಲಾವಿದರು ತಂಗಲೆಂದೇ ನಿರ್ಮಿಸಿರುವ ತೊಟ್ಟಿ ಕಂಬಗಳನ್ನು ಒಳಗೊಂಡ ದೊಡ್ಡಮನೆ, ಜಾನಪದಕ್ಕೆ ಸಂಬಂಧಪಟ್ಟ ಸುಮಾರು 5000ಕ್ಕೂ ಹೆಚ್ಚು ವಸ್ತುಗಳನ್ನು ಕಲಾತ್ಮಕವಾಗಿ ಹಾಗೂ ವೈಜ್ಞಾನಿಕವಾಗಿ ಕಾಯ್ದಿರಿಸಿರುವ ಎರಡು ಅಂತಸ್ತುಗಳ ಕಟ್ಟಡವಾದ ಲೋಕಮಹಲ್, ಕಲ್ಲಿನಲ್ಲಿ ಕಥೆ ಹೇಳುವ ಶಿಲ್ಪಮಾಳ, ಅಯಗಾರರ ಮಾಳ, ಜಾನಪದ ಲೋಕವನ್ನು ವೀಕ್ಷಿಸಲೆಂದೇ ಬರುವವರನ್ನು ಹರಸಲೆಂದೇ ಇಲ್ಲಿ ನೆಲೆ ನಿಂತಿರುವ ಲೋಕಪ್ರಿಯ ಮಹಾಗಣಪತಿಯ ದೇವಸ್ಥಾನ, ಸುಮಾರು 800 ರಿಂದ 1000 ಮಂದಿ ಕುಳಿತುಕೊಳ್ಳಬಹುದಾದ ಗ್ರೀಕ್ ಮಾದರಿಯ

ಬೃಹತ್ತಾದ ಬಯಲು ರಂಗಮಂದಿರ, ಮಕ್ಕಳು ಆಟವಾಡಲು ವಿಶಾಲವಾದ ಆಟದ ಮಾಳ ಇತ್ಯಾದಿಗಳೆಲ್ಲವೂ ಜಾನಪದ ಲೋಕದಲ್ಲಿವೆ

ಕರಕುಶಲ ಕಲಾವಿದರು ಈ ಲೋಕದಲ್ಲಿದ್ದುಕೊಂಡು ಕರಕುಶಲ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಡೊಳ್ಳು ಕುಣಿತ, ಸುಗ್ಗಿ ಕುಣಿತ, ಕೋಲಾಟ, ಬೀಸುಕಂಸಾಳೆ, ಗೊರವರ ಕುಣಿತ ಮೊದಲಾದ ಪ್ರದರ್ಶಕ ಕಲೆಗಳಲ್ಲಿ ತರಬೇತಿ ನೀಡಿ ಜಾನಪದ ಲೋಕದ್ದೇ ಆದ ಕಲಾತಂಡಗಳನ್ನು ರೂಪಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯವು ಜಾನಪದ ಲೋಕವನ್ನು ಸಂಶೋಧನಾ ಕೇಂದ್ರವನ್ನಾಗಿ ಮಾನ್ಯ ಮಾಡಿದ್ದು, ಸಂಶೋಧನಾ ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಗಾಗಿ ನೋಂದಾವಣೆ ಮಾಡಿಕೊಳ್ಳಬಹುದಾಗಿದೆ. ಸಂಶೋಧನಾ ಕೇಂದ್ರ ಮತ್ತು ಜಾನಪದ ಮಹಾವಿದ್ಯಾಲಯದ ನಿರ್ವಹಣೆಯ ಸಲುವಾಗಿ 1996ರ ಜನವರಿಯಲ್ಲಿ ಎನ್‌ಜಿಇಎಫ್ ಕಾರ್ಖಾನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಡಾ. ಚಕ್ಕೆರೆ ಶಿವಶಂಕರ್ ಅವರನ್ನು ನಿಯೋಜನಾ ಸೇವೆಯ ಮೇಲೆ ಕರೆಸಿಕೊಳ್ಳಲಾಯಿತು. 1999ರಿಂದ ಜಾನಪದ ಮಹಾವಿದ್ಯಾಲಯವು ಪ್ರಾರಂಭವಾಗಿದ್ದು, ಈ ಮಹಾವಿದ್ಯಾಲಯದಲ್ಲಿ ಜಾನಪದ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ನಾಡಿನ ಜಾನಪದ ವಿದ್ವಾಂಸರು ವಿದ್ಯಾರ್ಥಿಗಳಿಗೆ ಬೋಧಿಸಿದ್ದಾರೆ. ಪ್ರೊ. ಡಿ.ಲಿಂಗಯ್ಯ ಅವರು ಪ್ರಾರಂಭದಿಂದ ಹತ್ತು ವರ್ಷ ಗೌರವ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಇಲ್ಲಿ ತರಬೇತಿ ಪಡೆದವರು ಜಾನಪದದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಜಾನಪದ ಅಭಿರುಚಿ ಶಿಬಿರ, ಜಾನಪದ ಸಂಶೋಧನಾ ಕಮ್ಮಟ, ವಿಚಾರ ಸಂಕಿರಣಗಳನ್ನು ಜಾನಪದ ಲೋಕವಲ್ಲಿ ನಿಯತವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಸುಸಜ್ಜಿತವಾದ ಜಾನಪದ ಗ್ರಂಥಾಲಯವನ್ನು ಸ್ಥಾಪಿಸಿದ್ದು, ಕರ್ನಾಟಕ ಸರ್ಕಾರದ ಗ್ರಂಥಾಲಯ ಇಲಾಖೆಯು ಉಚಿತ ಕುರ್ಚಿ ಮೇಜುಗಳನ್ನು ಒದಗಿಸಿರುತ್ತದೆ. ಪ್ರತಿ ವರ್ಷ ಫೆಬ್ರವರಿ ತಿಂಗಳಿನಲ್ಲಿ ಜಾನಪದ ಲೋಕೋತ್ಸವವನ್ನು ತಪ್ಪದೆ ಆಚರಿಸಿಕೊಂಡು ಬರಲಾಗುತ್ತಿದೆ.

ಒಟ್ಟಿನಲ್ಲಿ ಜಾನಪದ ಲೋಕವು ವಿದ್ವಾಂಸರು, ಆಸಕ್ತರು, ಸಂಶೋಧಕರ ಪಾಲಿಗೆ ಅಮೂಲ್ಯವಾದ ಆಕರ ಜಗತ್ತು. ಜನಪದ ಕಲಾವಿದರ ಪಾಲಿಗೆ ಕಾಶಿಯಾಗಿ ಪರಿಣಮಿಸಿದೆ. ಸಂಶೋಧಕರಿಗೆ ಸಹಸ್ರಾರು ಗ್ರಾಮೀಣ ವಸ್ತುಗಳು,

ಧ್ವನಿಮುದ್ರಿಕೆಗಳು, ಉತ್ತಮ ಗ್ರಂಥ ಭಂಡಾರ, ವಿಡಿಯೊ ಚಿತ್ರೀಕರಣ ಮಾಹಿತಿ, ಪ್ರೋಷಕರ ಸಲುವಾಗಿ ಜನಪದ ಕಲಾ ಮಹೋತ್ಸವಗಳು, ಆಸಕ್ತರಿಗೆ ಅಭಿರುಚಿ ಮೂಡಿಸುವ ಶಿಬಿರಗಳು, ಪ್ರಶಿಕ್ಷಣಾರ್ಥಿಗಳಿಗೆ ಜನಪದ ಕಲೆಗಳ ತರಬೇತಿ ಶಿಬಿರಗಳು–ಹೀಗೆ ನಿರಂತರ ಜಾನಪದೀಯ ಚಟುವಟಿಕೆಗಳ ಆಗರವಾಗಿರುವ ಜಾನಪದ ಲೋಕವು ಜಗತ್ತಿನ ಅತ್ಯುತ್ತಮ ಜಾನಪದ ಕೇಂದ್ರಗಳಲ್ಲಿ ಒಂದಾಗಿರುತ್ತದೆ.

'ಜಾನಪದ ಜಗತ್ತು' ಪತ್ರಿಕೆ ಪ್ರಕಟಣೆ

1.6 ತರೀಕೆರೆ ಜಾನಪದ ಸಮ್ಮೇಳನದ ಅನಂತರ ಮೈಸೂರಿನಲ್ಲಿ ಸ್ಥಾಪನೆಯಾದ ಕರ್ನಾಟಕ ಜಾನಪದ ಪರಿಷತ್ತು ಮತ್ತು ಹೊರತಂದ 'ಜಾನಪದ' ಪತ್ರಿಕೆಯು ಕೆಲವೇ ದಿನಗಳಲ್ಲಿ ನಿಂತುಹೋಯಿತು. ಜಾನಪದಕ್ಕೆ ಮೀಸಲಾದ ಪತ್ರಿಕೆ ಇಲ್ಲದಿರುವುದು ದೊಡ್ಡ ಕೊರತೆಯಾಗಿದ್ದಿತು. ಪತ್ರಿಕೆಯು ಕೇವಲ ಟ್ರಸ್ಟಿನ ಮುಖವಾಣಿಯಾಗಬಾರದು. ನಾಡಿನ ಒಳ–ಹೊರಗೆ ನಡೆಯುತ್ತಿರುವ ಜಾನಪದ ಸಂಬಂಧಿ ಚಟುವಟಿಕೆಗಳನ್ನು ಪರಿಚಯಿಸುವಂತಾಗಬೇಕು. ನಾಡಿನಾದ್ಯಂತ ಇರುವ ಜಾನಪದ ವಿದ್ವಾಂಸರು, ವಿದ್ಯಾರ್ಥಿಗಳು, ಕಲಾವಿದರು, ಆಸಕ್ತರು ತಂತಮ್ಮ ವಿಚಾರಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಸಮರ್ಥ ವೇದಿಕೆಯಾಗಬೇಕು. ಕಲಾವಿದರು ತಮ್ಮ ಕಷ್ಟ ಸುಖ, ನೋವು ನಲಿವುಗಳನ್ನು, ತಮ್ಮ ಮನದಾಳದ ಅನಿಸಿಕೆಗಳನ್ನು ಮುಕ್ತವಾಗಿ ಅಭಿವ್ಯಕ್ತಿಸಲು ಪತ್ರಿಕೆಯು ಮಾಧ್ಯಮವಾಗಬೇಕು ಎಂದು, ಕರ್ನಾಟಕ ಜಾನಪದ ಟ್ರಸ್ಟ್‌ನ ಆಶಯಕ್ಕನುಗುಣವಾಗಿ ಪತ್ರಿಕೆಯೊಂದನ್ನು ಹೊರತರಬೇಕೆಂಬ ಉದ್ದೇಶದಿಂದ ನಾಗೇಗೌಡರು 'ಜಾನಪದ ಜಗತ್ತು' ಎಂಬ ಶೀರ್ಷಿಕೆಯಲ್ಲಿ ಪತ್ರಿಕೆಯೊಂದನ್ನು ಪ್ರಕಟಿಸಲು ಸಿದ್ಧರಾದರು. 1980ರ ಜನವರಿ ಒಂದರಂದು ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ, ಸರಳ ಸಮಾರಂಭದಲ್ಲಿ ಜಾನಪದ ಜಗತ್ತು ದ್ವೈಮಾಸಿಕ ಪತ್ರಿಕೆಯ ಮೊದಲ ಸಂಚಿಕೆಯನ್ನು ಬಿಡುಗಡೆ ಮಾಡಿದ ಜಾನಪದ ತಜ್ಞ ಡಾ. ಹಾ.ಮಾ.ನಾಯಕ ಅವರು. 'ನಮ್ಮ ನಾಡಿನ ಜಾನಪದ ಅಧ್ಯಯನ–ಅಭಿವೃದ್ಧಿ ಕಾರ್ಯಗಳು ವಿಶ್ವಮಟ್ಟಕ್ಕೆ ಸರಿದೊರೆಯಾಗಿ ನಿಲ್ಲುವಂತೆ ಮಾಡುವತ್ತ ನಾವೆಲ್ಲ ಗಮನ ಹರಿಸಬೇಕು. ವಿಶ್ವವಿದ್ಯಾಲಯದ ಮಟ್ಟವನ್ನೇರಿರುವ ಜಾನಪದವನ್ನು ಕುರಿತು ವೈಜ್ಞಾನಿಕ ಅಧ್ಯಯನ ಅತ್ಯಂತ ಮುಖ್ಯವಾದುದು. ಜಾನಪದಕ್ಕಾಗಿಯೇ ಮೀಸಲಾದ ನಿಯತಕಾಲಿಕವೊಂದು ನಮ್ಮಲ್ಲಿರಲಿಲ್ಲ. ಅದನ್ನು

ಈಡೇರಿಸಲು ಮುಂದೆ ಬಂದದ್ದು ಶ್ರೀ ನಾಗೇಗೌಡ ಟ್ರಸ್ಟ್ ಅವರ ಕಾರ್ಯಾಸಕ್ತಿಯ ದ್ಯೋತಕವಾಗಿದೆ. ಕನ್ನಡ ಜಾನಪದ ಕ್ಷೇತ್ರದಲ್ಲಿ ವೈಜ್ಞಾನಿಕ ದೃಷ್ಟಿಯ, ಆಳವಾದ ಅಧ್ಯಯನದ ಬರಹಗಳಿಗೆ ಪ್ರೇರಣೆಯನ್ನೊದಗಿಸಿ, ಪ್ರೋತ್ಸಾಹಿಸಿ, ಅಗತ್ಯವಾದ ಪರಿಭಾಷೆಯನ್ನು ಬೆಳೆಸಿ ಮುನ್ನಡೆಸುವ ಜವಾಬ್ದಾರಿಯನ್ನು ಜಾನಪದ ಜಗತ್ತು ನಿರ್ವಹಿಸಿದಾಗ ಮಾತ್ರವೇ ಅದರ ಅಸ್ತಿತ್ವ ಸಾರ್ಥಕಗೊಳ್ಳುವುದು. 'ನಮ್ಮ ನಾಡಿನ ಜಾನಪದ ವಿದ್ವಾಂಸರು ಇದರಲ್ಲಿ ಪಾಲುದಾರರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ' ಎಂದು ಅಭಿಪ್ರಾಯಪಟ್ಟರು. ಅಧ್ಯಕ್ಷತೆ ವಹಿಸಿದ್ದ ಡಾ. ರಂ.ಶ್ರೀ. ಮುಗಳಿಯವರು 'ಮಣ್ಣಿನ ಸತ್ವವನ್ನೊಳಗೊಂಡ ಜಾನಪದವೇ ನಾಡಿನ ಸಂಸ್ಕೃತಿಯ ಪುನಃಶ್ಚೇತನಕ್ಕೆ ಪರಿಣಾಮಕಾರಿ ಮಾಧ್ಯಮ. ನಾವು ಯಾವುದೇ ವಿಚಾರದ ಅಧ್ಯಯನ ಮತ್ತು ವಿಶ್ಲೇಷಣೆ ನಡೆಸಬೇಕಾದರೆ ಇಲ್ಲಿಯ ಹಿನ್ನೆಲೆಯಲ್ಲಿಯೇ ನಡೆಸಬೇಕು' ಎಂದು ತಿಳಿಸಿದರು. ಅಧ್ಯಕ್ಷರಾದ ನಾಗೇಗೌಡರು ಮಾತನಾಡಿ, ಆದಷ್ಟು ಬೇಗ ದ್ವೈಮಾಸಿಕವನ್ನು ಮಾಸಿಕವಾಗಿ ಪ್ರಕಟಿಸಬೇಕೆಂದಿರುವ ತಮ್ಮ ಆಶಯವನ್ನು ವ್ಯಕ್ತಪಡಿಸಿದರು. ಪತ್ರಿಕೆಯನ್ನು ಬೆಳೆಸಲು ಜಾನಪದ ಕ್ಷೇತ್ರತಜ್ಞರು ಮತ್ತು ಸಾರ್ವಜನಿಕ ಓದುಗರು ಸಹಕರಿಸಬೇಕೆಂದು ಕೋರಿದರು. ಸಂಸ್ಥಾಪಕ ಸದಸ್ಯರುಗಳಾದ ಶ್ರೀ ಜಿ.ನಾರಾಯಣ, ಪ್ರೊ. ಜಿ.ವೆಂಕಟಸುಬ್ಬಯ್ಯ ಮತ್ತು ಡಾ. ಸಿದ್ದಯ್ಯ ಪುರಾಣಿಕ್ ಉಪಸ್ಥಿತರಿದ್ದರು. ಪತ್ರಿಕೆಯ ಪ್ರಧಾನ ಸಂಪಾದಕರು ಎಚ್.ಎಲ್.ನಾಗೇಗೌಡರಾದರೆ, ಸಂಪಾದಕದ್ವಯರು ಗೊ.ರು.ಚನ್ನಬಸಪ್ಪ ಮತ್ತು ಎಚ್.ಜೆ.ಲಕ್ಕಪ್ಪಗೌಡ. ಸಹ ಸಂಪಾದಕರಾದ ಟಿ. ಗೋವಿಂದರಾಜು ಅವರುಗಳು ಆರಂಭದಲ್ಲಿದ್ದರು.

ಅಂದಿನಿಂದ ಇಂದಿನವರೆಗೂ 'ಜಾನಪದ ಜಗತ್ತು' ಹರಿಗಡಿಯದಂತೆ ನಡೆದುಕೊಂಡು ಬರುತ್ತಿದೆ. ಹಲವಾರು ವಿಶೇಷ ಸಂಚಿಕೆಗಳನ್ನು ಹೊರತಂದಿದೆ. ಗಮನಿಸಬಹುದಾದವುಗಳಲ್ಲಿ ಮಹಿಳಾ ಜಾನಪದ, ಮಡಿಲಕ್ಕಿ, ಹೂವು ಹೊಂಬಾಳೆ, ಮಾರಮ್ಮನ ಅಧ್ಯಯನ, ಸ್ಥಳನಾಮಗಳ ಅಧ್ಯಯನ, ದೈವ ಜಾನಪದ, ರೋಗ ಜಾನಪದ ಮುಂತಾದುವು ಅಧ್ಯಯನಾರ್ಹ ಸಂಪ್ರಬಂಧಗಳಿಂದ ಕೂಡಿದ್ದು ಸಂಗ್ರಹಯೋಗ್ಯ ಸಂಚಿಕೆಗಳೆನಿಸಿವೆ.

ಪತ್ರಿಕೆಯು ಆರಂಭದಲ್ಲಿ ದ್ವೈಮಾಸಿಕವಾಗಿದ್ದುದ್ದು ಕ್ರಮೇಣ ಚಂದಾದಾರರ ಕೊರತೆ, ಜಾಹಿರಾತು ಕೊರತೆ, ಕಾಗದ ಮತ್ತು ಮುದ್ರಣವೆಚ್ಚದ ಏರಿಕೆಯಿಂದಾಗಿ

ತ್ರೈಮಾಸಿಕವಾಯಿತು. ಪತ್ರಿಕೆಗೆ ಕಳೆದ 30 ವರ್ಷಗಳಲ್ಲಿ ಹಲವಾರು ಸಹಸಂಪಾದಕರುಗಳು ಆಗಿಹೋಗಿದ್ದಾರೆ. ವಿ.ಎನ್. ಶಿವರಾಮು, ಕುರುವ ಬಸವರಾಜ್, ಬಸವರಾಜ ಆಕಳವಾಡಿ ಮುಖ್ಯರು. 1996ರಂದ ಪ್ರೊ. ಡಿ.ಲಿಂಗಯ್ಯ ಮತ್ತು ಡಾ. ಚಕ್ಕೆರೆ ಶಿವಶಂಕರ್ ಈ ಪತ್ರಿಕೆಯ ಸಂಪಾದಕರಾಗಿದ್ದುಕೊಂಡು ಜಾನಪದಕ್ಕೆ ಸಂಬಂಧಪಟ್ಟಂತೆ ಹೊಸ ಹೊಸ ವಿಚಾರಗಳನ್ನು ಪ್ರಕಟಿಸುತ್ತಾ ಬಂದಿರುತ್ತಾರೆ.

ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಜಗತ್ತು ಪತ್ರಿಕೆಯ ಜತೆಗೆ 'ಮೈಲಾರಲಿಂಗನ ಕಾವ್ಯ', 'ಗ್ರಾಮದೇವತೆ ಮಾರಮ್ಮ', ದುಂಡಮಲ್ಲಿಗೆ ಹೂವ ಬುಟ್ಟಿಲಿ ಬಂದಾವ. ಕನ್ನಡ ಜಾನಪದ ಕೋಶ, ಎಸೆನ್ಷಿಯಲ್ಸ್ ಆಫ್ ಕರ್ನಾಟಕ ಫೋಕ್ ಲೋರ್ ಮುಂತಾದ ಮೌಲಿಕ ಕೃತಿಗಳನ್ನು ಸಹ ಹೊರತಂದಿರುತ್ತದೆ. ಇತ್ತೀಚೆಗೆ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಜಿ.ನಾರಾಯಣ ಅವರ ಆಶಯದ ಮೇರೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲಿಕೆಯಲ್ಲಿ ಪ್ರಕಟಣೆಗೆ ಮುಂದಾಗಿದೆ. ಈಗಾಗಲೇ ಈ ಮಾಲೆಯಲ್ಲಿ 50 ಪುಸ್ತಕಗಳು ಹೊರಬಂದಿದ್ದು, ಇನ್ನು 50 ಪುಸ್ತಕಗಳು ಹೊರಬರಲಿವೆ.

ಕರ್ನಾಟಕ ಜಾನಪದ ಪರಿಷತ್ತು ಇಂದು ಕನ್ನಡ ನಾಡಿನ ಜಾನಪದ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಜಾನಪದ ದಾಖಲಾತಿ ಭಂಡಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿ ಭೌತಿಕ ವಸ್ತು ಪರಿಕರಗಳೊಂದಿಗೆ ಜನಪದ ಸಾಹಿತ್ಯದ ಅತ್ಯುತ್ತಮ ಆಡಿಯೊ ದಾಖಲಾತಿ, ಜನಪದ ಕಲೆಗಳು, ಹಬ್ಬ ಹರಿದಿನಗಳು, ಆಟೋಟಗಳು, ಜನಪದರ ಬಾಳು ಬದುಕಿಗೆ ಸಂಬಂಧಿಸಿದ ವಿಡಿಯೊ ದಾಖಲಾತಿ ಇದೆ. ಈ ದಾಖಲಾತಿಯು ವಿದ್ವಾಂಸರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕ ಶೈಕ್ಷಣಿಕ, ಸಂಶೋಧನಾತ್ಮಕ ಉದ್ದೇಶಗಳಿಗಾಗಿ ಸಮರ್ಪಕವಾಗಿ ಬಳಕೆಯಾಗಬೇಕಾದ ಅವಶ್ಯಕತೆ ಇದೆ ಎಂಬುದನ್ನು ಸಂಸ್ಥೆ ಮನಗಾಣಬೇಕಿದೆ.

ಜಾನಪದ ವೈವಿಧ್ಯತೆಯನ್ನು ಪರಿಶೋಧಿಸುವ, ಪರಿಚಯಿಸುವ ಮತ್ತು ಪರಿಷ್ಕರಿಸುವ ಹಾಗೂ ಪ್ರೋತ್ಸಾಹಿಸುವ ಕೆಲಸವನ್ನು ಕಳೆದ 35 ವರ್ಷಗಳಿಂದಲೂ ಜನಪದ ಲೋಕದ ರೂವಾರಿಯಾದ ಎಚ್.ಎಲ್.ನಾಗೇಗೌಡರು ಪ್ರೀತಿ, ಆಸಕ್ತಿ ಪರಿಶ್ರಮಗಳಿಂದ ನಿರ್ವಹಿಸಿಕೊಂಡು ಬಂದಿರುತ್ತಾರೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ಗ್ರಾಮೀಣ ಸಾಂಸ್ಕೃತಿಕ ಅಸ್ತಿತ್ವ ಮತ್ತು ಅನನ್ಯತೆಗಳನ್ನು ಗುರುತಿಸುವ, ಕಟ್ಟುವ, ಕಲಿಸುವ ಆ ಮೂಲಕ ಬೆಳೆಸುವ ಜರೂರು ಇದೆ ಎಂಬುದನ್ನು ಮನಗಂಡ ಎಚ್.ಎಲ್.ನಾಗೇಗೌಡರು ಜಾನದಪ ಸಿರಿ ಸೊಗಡುಗಳನ್ನು ನಗರದ ಜನತೆಗೆ ಉಣಬಡಿಸುವ ಸಲುವಾಗಿ ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ಜಾನಪದವನ್ನು ಬೆಂಗಳೂರು ನಗರದಲ್ಲಿ ನಾಟಿಹಾಕಲು ಯೋಜಿಸಿದ್ದರು.

ಅವರ ಚಿಂತನೆಯ ಫಲವಾಗಿ 'ಜಾನಪದ ಸಿರಿಭುವನ'ವು ಮುಂಬರುವ ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ನಿರ್ಮಾಣಗೊಳ್ಳಲಿದೆ. ಈ ಜಾನಪದ ಸಿರಿಭುವನವು ಕೇವಲ ಕಲ್ಲುಕಟ್ಟಡವಾಗಿರದೆ ಜಗತ್ತಿನ ಎಲ್ಲ ಗ್ರಾಮೀಣ ಜನಸಮುದಾಯಗಳ ಜೀವಕೇಂದ್ರವಾಗಿ ಪರಿಣಮಿಸಲಿದೆ. ದುಡಿಯುವ ಜನವರ್ಗದ ಬಾಳು ಬದುಕು, ಸಂಸ್ಕೃತಿ, ಆಚಾರ-ವಿಚಾರ, ಕಲೆ ಸಾಹಿತ್ಯ, ಹಬ್ಬಹರಿದಿನಗಳು, ಆಚರಣೆ-ಸಂಪ್ರದಾಯಗಳು ನಂಬಿಕೆ ನಡೆವಳಿಕೆಲ್ಲವೂ ಈ ಸಿರಿಭುವನದಲ್ಲಿ ಮರುಹುಟ್ಟು ಪಡೆಯುವುದರ ಮೂಲಕ ಜಗತ್ತಿನಾದ್ಯಂತ ಪ್ರವಹಿಸುವ ಕಾರ್ಯಕೇಂದ್ರವಾಗಿ 'ಜಾನಪದ ಸಿರಿಭುವನ'ವು ಮುಂಬರುವ ದಿನಗಳಲ್ಲಿ ಕೆಲಸ ಮಾಡಲಿದೆ. ಕರ್ನಾಟಕ ಜಾನಪದ ಪರಂಪರೆಯನ್ನು ಉಳಿಸಿ ಬೆಳೆಸುವುದಷ್ಟೇ ಅಲ್ಲದೆ ಜಾಗತಿಕ ಮಟ್ಟದಲ್ಲಿ ಜಾನಪದ ಕರ್ನಾಟಕದ ಘನತೆಯನ್ನು ಎತ್ತಿಹಿಡಿಯುವ ಮಹತ್ವದ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳಲಿದೆ.

ಜನಪದ ಸಾಹಿತ್ಯ, ಭಾಷೆ, ಸಂಗೀತ, ನೃತ್ಯ, ನಾಟಕ, ಹಬ್ಬ-ಹರಿದಿನ, ಚಿತ್ರ, ಶಿಲ್ಪ ನಂಬಿಕೆ, ಸಂಪ್ರದಾಯ ಎಲ್ಲವೂ ಗ್ರಾಮೀಣ ಸಾಂಸ್ಕೃತಿಕ ಬದುಕಿನ ಬೇರುಗಳು. ಸಮಗ್ರ ಗ್ರಾಮೀಣ ಸಂಸ್ಕೃತಿಯ ಸಿರಿಗಂಧದ ಸಿರಿಯನ್ನು ನಗರದತ್ತ ಕೊಂಡೊಯ್ಯುವುದು, ತನ್ಮೂಲಕ ನಗರಿಗರಿಗೆ ಪರಿಚಯಿಸುವುದು ಬೆಂಗಳೂರಿನಲ್ಲಿ ತಲೆಯೆತ್ತಿರುವ ಸಿರಿಭುವನದ ಮೂಲ ಉದ್ದೇಶ. ಹೊಟ್ಟೆಪಾಡಿಗಾಗಿ ನಗರದಲ್ಲಿ ನೆಲೆಸಿರುವ ಕಲಾವಿದರು, ಕುಶಲ ಕೆಲಸಗಾರರು, ಸಂಸ್ಕೃತಿ ಪ್ರಿಯರುಗಳಿಗೆ ಇದೊಂದು ಅಭೂತಪೂರ್ವ ಕೊಡುಗೆಯಾಗಲಿದೆ. ಇಂತಹ ಯೋಜನೆಯು ಬೃಹತ್ ಭಾರತ ನಗರಗಳಲ್ಲಿ ಮೊದಲನೆಯದು ಮತ್ತು ವಿಶಿಷ್ಟವಾದುದು. ಸಮೂಹ ಮಾಧ್ಯಮಗಳ ಸನ್ನಿರೋಗಕ್ಕೆ ಒಳಗಾಗಿರುವ ಜನಸಮುದಾಯದ ಮನಸ್ಸನ್ನು ಅವಸರದ ಒತ್ತಡಗಳಿಂದ ಬಿಡುಗಡೆಗೊಳಿಸಿ ಅಹ್ಲಾದ ಮತ್ತು ಪರಿಶುದ್ಧ

ಮನರಂಜನೆಯ ಕಡೆಗೆ ತಿರುಗಿಸುವ ಕಾರ್ಯಯೋಜನೆಗಳನ್ನು ಸಿರಿಭುವನವು ಮುಂಬರುವ ದಿನಗಳಲ್ಲಿ ಆಯೋಜಿಸಿದೆ.

ಜನಜೀವನದಲ್ಲಿ ಬೇರುಬಿಟ್ಟಿರುವ, ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಹರಿದಿರುವ ಜಾನಪದವು ಆಧುನಿಕ ಸಂದರ್ಭದಲ್ಲಿ ಸಾಮೂಹಿಕ ಪರಿಸರದಲ್ಲಿ ಅದರ ಜೀವನಾಡಿಯಾಗಿ ಮುಂದುವರಿಯಬೇಕಾದರೆ ಜಾನಪದದ ಉಳಿವು ಮತ್ತು ಬೆಳವಣಿಗೆ ಅತ್ಯವಶ್ಯಕ. ಈ ದಿಶೆಯಲ್ಲಿ ನಗರದ ಶಾಲಾ ಕಾಲೇಜು ವಿದ್ಯಾರ್ಥಿಗಳು ರಂಗಭೂಮಿ ಮತ್ತು ದೂರದರ್ಶನ ಕಲಾವಿದರುಗಳು, ಆಸಕ್ತ ತರುಣ ತರುಣಿಯರಿಗೆ ವೈವಿಧ್ಯಮಯ ಜನಪದ ಪ್ರದರ್ಶಕ ಕಲೆಗಳಲ್ಲಿ, ಜನಪದ ಗೀತ ಸಾಹಿತ್ಯದಲ್ಲಿ ಹಾಗೂ ನೂರಾರು ದನಿ ಧಾಟಿಗಳ ಸಹಸ್ರಾರ ಸೊಲ್ಲು ಪಲ್ಲವಿಗಳಿಂದ ಶೋಭಿತವಾದ ಜನಪದ ಸಂಗೀತದಲ್ಲಿ ತರಬೇತಿ ನೀಡುವುದರ ಮೂಲಕ ಜಾನಪದ ಕರ್ನಾಟಕದ ಘನತೆಯನ್ನು ಹೆಚ್ಚಿಸುವುದು ಈ ಯೋಜನೆಯ ಉದ್ದೇಶ. ತರಬೇತಿ ಹೊಂದಿದ ತಂಡಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಾಂಸ್ಕೃತಿಕ ವಿನಿಯಮ ಕ್ಷೇತ್ರದಲ್ಲಿ ಬಳಸಿಕೊಳ್ಳಬಹುದು. ಈಗಾಗಲೇ ಪರಿಷತ್ತು ಇದಕ್ಕಾಗಿ ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿ ಡೊಳ್ಳು, ಕೋಲಾಟ, ಗೊರವರ ಕುಣಿತ, ರಂಗದ ಕುಣಿತಗಳಲ್ಲಿ ತರಬೇತಿ ನೀಡಿದೆ.

ಕಲಿಯದವರಿಂದ ಕಲಿತವರಿಗೆ :

ಸಾಮಾನ್ಯವಾಗಿ ಕಲಿತವರು ಕಲಿಯದವರಿಗೆ ಕಲಿಸುವುದು ಲೋಕಾರೂಢಿ. ಆದರೆ ಕಲಿಯದವರು ಕಲಿತವರಿಗೆ ಕಲಿಸಬೇಕೆನ್ನುವುದು ಶ್ರೀ ನಾಗೇಗೌಡರ ವಿಶಿಷ್ಟ ಪರಿಕಲ್ಪನೆ. ಹಲಗೆ ಬಳಪ ಹಿಡಿದು ಬರೆಯದ, ಗುರುಮುಖೇನ ಓದು ಕಲಿಯದ ನಮ್ಮ ಜನಪದ ಕಲಾವಿದರು ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳು, ನಿಸರ್ಗ ಸಹಜ ಹಾಡಹಕ್ಕಿಗಳು, ಕಲಾಕೋವಿದರು ಹಾಡಲಾರಂಭಿಸಿದರೆ ಎಡೆಬಿಡದೆ ದಿನಗಟ್ಟಲೆ ಹಾಡುವ ಜನಪದ ಕೋಗಿಲೆಗಳು ಕುಣಿಯಲಾರಂಭಿಸಿದರೆ ಮೈ ಬೆವರು ನೀರಾಗಿ ಹರಿಯುವಂತೆ, ಹೆಜ್ಜೆ ಮತ್ತು ತಾಳ ತಪ್ಪದೆ ಕುಣಿಯುವ ಅಸಂಖ್ಯಾತ ಜನಪದ ನವಿಲುಗಳು. ಇವರೆಲ್ಲರ ಸದ್ಬಳಕೆಯಿಂದ ಕರ್ನಾಟಕ ಜಾನಪದ ಪರಿಷತ್ತು ಆಲೋಚಿಸಿರುವ ಕಾರ್ಯಕ್ರಮಗಳು ಕೆಳಕಂಡಂತಿವೆ.

1. ಜನಪದ ಗೀತ ಸಂಗೀತ ಸಮೃದ್ಧ ಹಾಗೂ ವೈವಿಧ್ಯಮಯ. ಹುಟ್ಟಿನಿಂದ ಸಾವಿನವರೆಗೂ ಇರುವ ಅಪಾರ ಗೀತ ಸಂಪತ್ತಿನ ಸುಶ್ರಾವ್ಯವಾದ ಸಾವಿರಾರು ದನಿ–ಧಾಟಿ ಪಲ್ಲವಿಗಳಿಂದ ಕೂಡಿದ ಮೂಲ ಜನಪದ ಗೀತೆಗಳನ್ನು ಮೂಲ ಧಾಟಿಗಳಲ್ಲೇ ಕಲಿಸುವ ವ್ಯವಸ್ಥೆ. ರಾಗಿಕಲ್ಲನ್ನೇ ಕಾಣದವರಿಗೆ ರಾಗಿ ಬೀಸುವ ಪದಗಳನ್ನು ಕಲಿಸುವ ಈ ಆಶಯವೇ ವಿನೂತನವಾದುದು.
2. ಕಣ್ಮರೆಯಾಗುತ್ತಿರುವ ಸುಗ್ಗಿ ಕುಣಿತ, ಗೊರವರ ಕುಣಿತ, ಬೀಸು ಕಂಸಾಳೆ, ದಟ್ಟೀ ಕುಣಿತ, ಕಿನ್ನರಿ ಜೋಗಿ, ಚೌಡಿಕೆ, ಕರಪಾಲ–ಇವೇ ಮೊದಲಾದ ಕುಣಿತಗಳನ್ನು ಗುರುತಿಸಿ ಅವುಗಳನ್ನು ಆದಷ್ಟು ಕಡಿಮೆ ಅವಧಿಯಲ್ಲಿ ಗುರುಶಿಷ್ಯ ಪರಂಪರೆಯ ಅನ್ವಯ ಆಯಾ ಕಲೆಗಳಲ್ಲಿ ಪರಿಣತಿ ಪಡೆದಿರುವ ಮೂಲ ಕಲಾವಿದರುಗಳನ್ನು ಸಿರಿಭುವನಕ್ಕೆ ಕರೆಸಿಕೊಂಡು ಅವರಿಂದ ಕಲಿಸುವ ವ್ಯವಸ್ಥೆ.
3. ಅದ್ದೂರಿ ಬಣ್ಣಗಾರಿಕೆ, ವರ್ಣರಂಜಿತ ವೇಷಭೂಷಣಗಳು, ನೃತ್ಯ, ಗೀತ ಸಾಹಿತ್ಯ, ಸಂಭಾಷಣೆಗಳಿಂದ ಕೂಡಿದ ಮೂಡಲಪಾಯ ಯಕ್ಷಗಾನ ದೊಡ್ಡಾಟ, ತೊಗಲುಗೊಂಬೆ, ಸೂತ್ರದ ಗೊಂಬೆಯಾಟದಂತಹ ಪ್ರಕಾರಗಳನ್ನು ಪುನರುಜ್ಜೀವನಗೊಳಿಸುವುದು ಮತ್ತು ಕಲಿಸುವ ವ್ಯವಸ್ಥೆ.
4. ಜನಪದ ಕಥನಗೀತೆಗಳು, ಕಥೆಗಳನ್ನು ಆಧರಿಸಿ ಸಿದ್ಧಪಡಿಸಿದ ನೃತ್ಯರೂಪಕಗಳನ್ನು ದೂರದರ್ಶನ ಇತ್ಯಾದಿ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಪ್ರಸಾರ ಮಾಡುವ ವ್ಯವಸ್ಥೆ.
5. ನಾಗಾಲ್ಯಾಂಡ್, ಮಣಿಪುರ ಮುಂತಾದ ಈಶಾನ್ಯ ರಾಜ್ಯಗಳಲ್ಲಿ ರೂಢಿಯಲ್ಲಿರುವ ಸಮರಕಲೆಗಳು ನಮ್ಮಲ್ಲಿಯೂ ಇವೆ. ದೊಣ್ಣೆ ವರಸೆ, ಕತ್ತಿ ವರಸೆ, ಬಿಜಲಿ ವರಸೆ, ಬೆಂಕಿ ವರಸೆ, ಕುಸ್ತಿಯಂತಹ ಕ್ಷೀಣಿಸುತ್ತಿರುವ ಕಲೆಗಳನ್ನು ಪುನರುಜ್ಜೀವನಗೊಳಿಸುವ ಮತ್ತು ಕಲಿಸುವ ವ್ಯವಸ್ಥೆ.
6. ಕಾಲೇಜಿನಿಂದ ಕಾಲೇಜಿಗೆ ಜಾನಪದ ಪರಿಚಯ ಕಾರ್ಯಕ್ರಮ. ಗೀತೆ–ಕಥೆ–ಗಾದೆ ಒಗಟುಗಳನ್ನು ಕುರಿತಾದಂತೆ ಶಿಬಿರಗಳನ್ನು ಏರ್ಪಡಿಸುವುದು.
7. ಜಾನಪದ ಆಟೋಟಗಳ ಸ್ಪರ್ಧೆಗಳನ್ನು ಏರ್ಪಡಿಸುವುದು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಮಕ್ಕಳುಗಳಿಗೆ ಈ ಆಟೋಟಗಳಲ್ಲಿ ತರಬೇತಿ

ನೀಡುವುದು. ಜಾನಪದ ಆಟೋಟಗಳಲ್ಲಿ ಈಗಾಗಲೇ ಗಾಳಿಪಟ ಕ್ರೀಡೆಯನ್ನು ಪುನರುಜ್ಜೀವನಗೊಳಿಸಿದ್ದು ಕಳೆದ 15 ವರ್ಷಗಳಿಂದಲೂ ಪ್ರತಿ ಜುಲೈ ತಿಂಗಳಿನಲ್ಲಿ ಅದ್ಧೂರಿಯಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಅದರಂತೆ ಲಾಗಾಯ್ತಿನಿಂದ ನಮ್ಮಲ್ಲಿ ಉಳಿದುಬಂದಿರುವ ಇತರ ಜನಪದ ಕ್ರೀಡೆಗಳಿಗೆ ಹೊಸ ತಲೆಮಾರು ಸ್ಪಂದಿಸಲು ಸೂಕ್ತ ಪರಿಹಾರ ಮತ್ತು ಅವಕಾಶಗಳನ್ನು ಕಲ್ಪಿಸುವುದು.

8. ಜಾನಪದ ಕ್ವಿಜ್ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
9. ಪರಿಷತ್ತು ಸಂಗ್ರಹಿಸಿರುವ ಮತ್ತು ಚಿತ್ರೀಕರಿಸಿರುವ ಆಡಿಯೊ-ವಿಡಿಯೊ ಕ್ಯಾಸೆಟ್‌ಗಳಲ್ಲಿರುವ ಕರ್ನಾಟಕ ಜಾನಪದ ಪರಂಪರೆಯ ಹತ್ತು ಹಲವು ಮುಖಗಳನ್ನು, ವೈವಿಧ್ಯಗಳನ್ನು ಸಮೂಹಮಾಧ್ಯಮಗಳಲ್ಲಿ ಅದರಲ್ಲೂ ಆಕಾಶವಾಣಿ, ದೂರದರ್ಶನಗಳಲ್ಲಿ ಮೇಲಿಂದ ಮೇಲೆ ಪ್ರಸಾರ ಮಾಡುವುದರ ಮೂಲಕ ಕರ್ನಾಟಕ ಜಾನಪದ ಹಿರಿಮೆಯನ್ನು ಪರಿಚಯಿಸುವುದು.

ಜಾನಪದ ಪ್ರಯೋಗ ಶಾಲೆ

ಆಡಿಯೊ ವಿಡಿಯೊ ರೆಕಾರ್ಡಿಂಗ್, ಎಡಿಟಿಂಗ್, ಗಣಕೀಕರಣ ಯಂತ್ರಗಳು ಇತ್ಯಾದಿಗಳನ್ನು ಅಳವಡಿಸುವುದು; ತಂತ್ರಜ್ಞಾನವನ್ನು ಅಳವಡಿಸಿಕೊಂಡು ಜನಪದ ಗೀತೆಗಳ ಆಡಿಯೊ ಮತ್ತು ವಿಡಿಯೊ ಸಿಡಿಗಳು, ಕರ್ನಾಟಕ ಜಾನಪದ ಪರಂಪರೆಗೆ ಸಂಬಂಧಿಸಿದ ಹತ್ತು ಹಲವು ಪ್ರಕಾರಗಳ ವಿಡಿಯೊ ಸಿಡಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವುದು.

ಜಾನಪದ ಮಾಹಿತಿ ಕೇಂದ್ರ

ಜಗತ್ತಿನಾದ್ಯಂತ ನಡೆದಿರುವ ನಡೆಯುತ್ತಿರುವ ಜಾನಪದೀಯ ಚಟುವಟಿಕೆಗಳು, ಜಾನಪದ ಸಂಘ ಸಂಸ್ಥೆಗಳು, ಜನಪದ ಕಲಾವಿದರ ಸಂಪೂರ್ಣ ವಿವರಗಳು ಇತ್ಯಾದಿ ಮಾಹಿತಿ ಕೇಂದ್ರದಲ್ಲಿ ಲಭ್ಯವಿರುವಂತೆ ಮಾಡುವುದು.

ಜನಪದ ಗ್ರಂಥಾಲಯ

ಇದುವರೆಗೂ ಕನ್ನಡದಲ್ಲಿ, ಭಾರತೀಯ ಭಾಷೆಗಳಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಹೊರಬಂದಿರುವ ಜಾನಪದಕ್ಕೆ ಸಂಬಂಧಪಟ್ಟ ಎಲ್ಲಾ ಕೃತಿಗಳನ್ನು ಸಂಗ್ರಹಿಸುವುದು. ಲಭ್ಯ ಇರದ ಪುಸ್ತಕಗಳ ಜೆರಾಕ್ಸ್ ಪ್ರತಿಗಳನ್ನು ಕಾಯ್ದಿರಿಸುವುದು.

ಮೂಡಲಪಾಯ ಯಕ್ಷಗಾನ ಹಸ್ತಪ್ರತಿಗಳು, ತಾಳೆಗರಿಗಳ ಸಂಗ್ರಹ, ಜಗತ್ತಿನ ಯಾವುದೇ ದೇಶದ ಜಾನಪದ ನಿಯತಕಾಲಿಕೆಗಳು ಇತ್ಯಾದಿಗಳನ್ನು ತರಿಸುವುದು.

ಜಾನಪದ ಸಂಪರ್ಕ ಜಾಲ

ದೇಶಿಯ ಮತ್ತು ವಿದೇಶಿಯ ಜಾನಪದ ಸಂಘ ಸಂಸ್ಥೆಗಳು, ವಿದ್ವಾಂಸರುಗಳೊಂದಿಗೆ ನಿಯತ ಸಂಪರ್ಕವನ್ನು ಇರಿಸಿಕೊಳ್ಳಲು ಫೋಕ್‌ಲೋರ್ ವೆಬ್‌ಸೈಟ್ ಬಳಸುವುದು.

ಕರಕುಶಲ ವಸ್ತುಗಳ ತಯಾರಿಕೆ

ಮಾರಾಟ ಮತ್ತು ಪ್ರದರ್ಶನ ಜನಪದ ಭಿತ್ತಿಚಿತ್ರಗಳು, ರಂಗವಲ್ಲಿ ಚಿತ್ರಗಳು, ಮಡಿಕೆ-ಕುಡಿಕೆಗಳ ಮೇಲಿನ ಚಿತ್ರಗಳು, ತೊಗಲುಗೊಂಬೆ, ಸೂತ್ರದ ಗೊಂಬೆಗಳು, ಮುಖವಾಡಗಳು, ಯಕ್ಷಗಾನ ಬಯಲಾಟಗಳ ಮುಖವರ್ಣಿಕೆಗಳು, ಹಲಗೆ, ಬಟ್ಟೆ, ಕಾಗದ, ಗಾಜು ಮುಂತಾದವುಗಳ ಮೇಲೆ ಬಿಡಿಸಿದ ಚಿತ್ರಗಳು ಬಿದಿರಿನ ಮತ್ತು ಮರದ ತೊಟ್ಟಿಲುಗಳು, ದೀಪಸ್ತಂಭಗಳು, ವಾದ್ಯವಿಶೇಷಗಳು (ಕೊಂಬು, ಕಹಳೆ, ಕೊಳಲು, ಪಿಳ್ಳಂಗೋವಿ, ದಮಡಿ, ದುಡಿ, ಚಂಡೆ, ಗುಮಟೆ, ಕರಡೆ, ಡಮರುಗ, ತಮಟೆ, ತಾಳ, ಗೆಜ್ಜೆ, ಜಾಗಟೆ ಇತ್ಯಾದಿ) ಆಟಿಕೆಗಳು ಬಯಲಾಟದ ವೇಷಭೂಷಣಗಳು, ಕಿನ್ನಾಳದ ಗೊಂಬೆಗಳು, ಸಾಲೋಟಗಿ ಕೌದಿ, ದೇವರ ಹಸೆಗೋಡೆ, ಬುಟ್ಟಿ ಚಿತ್ತಾರಗಳು, ತೇವಟಿಗೆ, ನಲ್ಕೆ ಜನಾಂಗದವರು ತಯಾರಿಸುವ ತಾಳೆಗರಿ, ತೆಂಗಿನ ಸೋಗೆಗಳ ತತ್ತರ ಕೊಡೆ ಇತ್ಯಾದಿಗಳನ್ನು ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡುವುದು.

ಜಾನಪದ ಸಿರಿಭುವನ ಜೀವಕೇಂದ್ರಗಳು

1. ಜನಪದ ಗೀತಗಾಯನ ಕಲಿಕಾ ಕೇಂದ್ರ
2. ಜನಪದ ಪ್ರದರ್ಶನ ಕಲೆಗಳ ತರಬೇತಿ ಕೇಂದ್ರ
3. ಮೂಡಲಪಾಯ ಯಕ್ಷಗಾನ ಪುನರುಜ್ಜೀವನ ಕೇಂದ್ರ
4. ಗೊಂಬೆಯಾಟಗಳ ಕಲಿಕಾ ಕೇಂದ್ರ
5. ಜಾನಪದ ಪ್ರಯೋಗ ಶಾಲೆ (ಆಡಿಯೊ-ವಿಡಿಯೊ)
6. ಜಾನಪದ ಮಾಹಿತಿ ಕೇಂದ್ರ
7. ಜನಪದ ಕರಕುಶಲ ಕಲೆಗಳ ತಯಾರಿಕಾ ಕೇಂದ್ರ

8. ಆಡಿಟೋರಿಯಂ (ಸಭಾಂಗಣ)
9. ಬಯಲು ರಂಗಮಂದಿರ
10. ಜನಪದ ವಸ್ತುಸಾಮಗ್ರಿಗಳ ಮಾರಾಟ ಮಳಿಗೆ
11. ಜನಪದ ಕಲಾವಿದರಿಗಾಗಿ ಡಾರ್ಮೆಟರಿಗಳು
12. ದೇಸೀ ತಿನಿಸುಗಳ ಉಪಾಹಾರ ಮಂದಿರ

ಇವೆಲ್ಲವನ್ನು ಒಳಗೊಂಡ ಜಾನಪದ ಸಿರಿಭುವನದ ನಕಾಶೆ ಸಿದ್ಧವಾಗಿದ್ದು, ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಕಟ್ಟಲು ಆಲೋಚಿಸಿರುವುದು ಈ ಜಾನಪದ ಸಿರಿಭುವನದ ವೈಶಿಷ್ಟ್ಯವಾಗಿರುತ್ತದೆ. ಸಮಗ್ರ ಗ್ರಾಮೀಣ ಸಂಸ್ಕೃತಿಯ ಪ್ರತಿಬಿಂಬವಾಗಿ ರೂಪುಗೊಳ್ಳಲಿರುವ ಜಾನಪದ ಸಿರಿಭುವನವು ನಗರದ ಜನರ ಪ್ರಮುಖ ಆಕರ್ಷಣೆಯಾಗಿ ಪರಿಣಮಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಮೇಲ್ಕಂಡ ಎಲ್ಲಾ ಕೇಂದ್ರಗಳು ಪರಸ್ಪರ ಅಂತರಸಂಬಂಧಗಳನ್ನಷ್ಟೇ ಹೊಂದಿರದೆ ನಾಡಿನ, ರಾಷ್ಟ್ರದ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಜಾನಪದ ಸಂರಕ್ಷಣೆ, ಸಂವರ್ಧನೆ, ಪ್ರಚಾರ ಮತ್ತು ಪ್ರಸರಣಗಳನ್ನು ಆಶಯಗಳನ್ನಾಗಿ ಉಳ್ಳ ಎಲ್ಲಾ ಸರ್ಕಾರಿ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳು, ಆಸಕ್ತರು ವಿದ್ವಾಂಸರುಗಳೊಂದಿಗೆ ನಿಕಟ ಮತ್ತು ನಿಯತ ಸಂಪರ್ಕವನ್ನಿರಿಸಿಕೊಂಡು ಕಾರ್ಯನಿರ್ವಹಿಸುತ್ತವೆ.

ಜಾನಪದ ಸಿರಿಭುವನವನ್ನು ಕೇವಲ ಜಾನಪದೀಯ ಚಟುವಟಿಕೆಗಳಿಗಷ್ಟೇ ಮೀಸಲಾಗಿರಿಸಿಲ್ಲ. ಎಲ್ಲಾ ಸಾಹಿತ್ಯ ಸಂಸ್ಕೃತಿಗಳಿಗೆ ತಾಯಿಯೋಪಾದಿಯಲ್ಲಿರುವ ಈ ಜಾನಪದ ಸಿರಿಭುವನದಲ್ಲಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ವಚನ ಗಾಯನ, ಕೀರ್ತನ ಸಾಹಿತ್ಯ, ಭರತನಾಟ್ಯ ಕಲೆ ಮತ್ತು ಸಾಂಸ್ಕೃತಿಕ ಇನ್ನಿತರ ಚಟುವಟಿಕೆಗಳಿಗೂ ಸಹ ಮುಕ್ತ ಅವಕಾಶವಿರುತ್ತದೆ. ಈ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕ್ರಿಯಾಶೀಲ ವ್ಯಕ್ತಿಗಳು, ಸಂಘ ಸಂಸ್ಥೆಗಳು ತಮ್ಮ ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನಕ್ಕಾಗಿ ಸಿರಿಭುವನದ ಅಂಗಳವನ್ನು ಬಳಸಿಕೊಳ್ಳಬಹುದು.

ಸಿರಿಭುವನದಲ್ಲಿರುವ ಸೌಲಭ್ಯಗಳು

ಮುಂಬರುವ ದಿನಗಳಲ್ಲಿ ನಮ್ಮ ಸಿರಿಭುವನದಲ್ಲಿ ಕೆಳಕಂಡ ಸೌಲಭ್ಯಗಳು ಲಭ್ಯವಿರುತ್ತವೆ :

1. ಸುಸಜ್ಜಿತ ಆಡಿಯೊ–ವಿಡಿಯೊ ಕೇಂದ್ರ
2. ಬಯಲು ರಂಗಮಂದಿರ
3. ಸಭೆ ಸಮಾರಂಭಗಳ ಸಲುವಾಗಿ ಒಳಾಂಗಣ ಸಭಾಂಗಣ ವ್ಯವಸ್ಥೆ
4. ಉಪಾಹಾರ ಕೇಂದ್ರ
5. ಕರಕುಶಲ ಮಳಿಗೆಗಳು (ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ)
6. ರಿಸೆಪ್ಷನ್ ಕೌಂಟರ್ (ಜಾನಪದ ಮಾಹಿತಿ ಕೇಂದ್ರ)
7. ಪುಸ್ತಕಗಳು, ಕ್ಯಾಸೆಟ್‌ಗಳ ಮಾರಾಟ ಮಳಿಗೆಗಳು

2. ಜಾನಪದ ಪ್ರಯೋಗ ; ಪ್ರದರ್ಶನ ;
ಗೆಜ್ಜೆ ಗಿಲಿಗಿಲಿ ಮದ್ದಲೆ ಧಿಮಿ ಧಿಮಿ

ಜನಪದ ಕಲಾವಿದರು ಮತ್ತು ಕಲೆಗಳ ಪ್ರದರ್ಶನವನ್ನು ಕೇವಲ ಬೀದಿ ಮೆರವಣಿಗೆಗಳಿಗಷ್ಟೇ ಸೀತಮಿಗೊಳಿಸದೆ ವ್ಯವಸ್ಥಿತ ರೀತಿಯಲ್ಲಿ ಸೂಕ್ತ ವಾತಾವರಣ ಹಾಗೂ ವೇದಿಕೆಯನ್ನು ಕಲ್ಪಿಸಿಕೊಡುವುದರ ಮೂಲಕ ಜನಪದ ಕಲೆಗಳ ಘನತೆಯನ್ನು ಎತ್ತರಕ್ಕೆ ಕೊಂಡೊಯ್ಯಬೇಕೆಂಬುದು ನಾಗೇಗೌಡರ ಉದಾತ್ತ ಧ್ಯೇಯವಾಗಿದ್ದಿತು. ಈಗಾಗಲೇ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ.ನಾರಾಯಣ ಅವರ ಸಹಕಾರದೊಂದಿಗೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಜಿಲ್ಲಾ ಜಾನಪದ ಕಲಾಮೇಳಗಳನ್ನು ಸಂಘಟಿಸಿದ್ದರ ಅನುಭವದ ಹಿನ್ನೆಲೆಯಲ್ಲಿ ನಾಗೇಗೌಡರು ಕರ್ನಾಟಕ ಜಾನಪದ ಪರಿಷತ್ತಿನ ಮೂಲಕ ಅತ್ಯುತ್ತಮ ಜನಪದ ಕಲಾಮೇಳಗಳು ಮತ್ತು ಉತ್ಸವಗಳನ್ನು ಏರ್ಪಡಿಸಿದ್ದರು. ಕಳೆದ 30 ವರ್ಷಗಳಿಂದ ಕರ್ನಾಟಕ ಜಾನಪದ ಪರಿಷತ್ತು ಏರ್ಪಡಿಸಿರುವ ಕಲಾಮೇಳಗಳು ಮತ್ತು ಉತ್ಸವಗಳು ಅಸಂಖ್ಯ. ಸ್ಥಳಾವಕಾಶದ ಕೊರತೆಯಿಂದಾಗಿ ಕೆಲವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

ಜನಪದ ಕಲೆಗಳ ಪುನರಾವರ್ತಿತ ಪ್ರದರ್ಶನಗಳು ಮತ್ತು ಮೇಳಗಳನ್ನಷ್ಟೇ ಅಲ್ಲದೆ, ನಶಿಸಿ ಹೋಗುತ್ತಿದ್ದ ಜನಪದ ಸಂಪ್ರದಾಯಗಳನ್ನು ಸಹ ಗೌಡರು ಮತ್ತೆ ಪುನರುಜ್ಜೀವನಗೊಳಿಸಿದರೆಂಬುದಕ್ಕೆ ಗಾಳಿಪಟ ಉತ್ಸವವು ಅತ್ಯುತ್ತಮ ಉದಾಹರಣೆಯಾಗಿರುತ್ತದೆ.

2.1 ಜಗತ್ತಿನ ನಾನಾ ಭಾಗಗಳಲ್ಲಿ ಗಾಳಿಪಟ ಹಾರಿಸುವುದು ವ್ಯಾಪಕವಾಗಿದೆ. ಥಾಯ್ಲೆಂಡ್, ಇಂಡೋನೇಷಿಯಾ, ಚೀನಾ, ಜಪಾನ್ ಮುಂತಾದ ಕಡೆಗಳಲ್ಲಿ

ಗಾಳಿಪಟ ಹಾರಿಸುವುದರಲ್ಲಿ ಸ್ಪರ್ಧೆಗಳು ಏರ್ಪಡುವುದು ಉಂಟು. ಭಾರತದಲ್ಲೂ ಲಕ್ನೊ ಅಹಮದಾಬಾದ್ ಮೊದಲಾದ ಕಡೆಗಳಲ್ಲಿ ಗಾಳಿಪಟ ಹಾರಿಸುವುದುಂಟು. ಕರ್ನಾಟಕದಲ್ಲಿ ಆಷಾಢಮಾಸದಲ್ಲಿ ಬರುವ ಪ್ರಥಮ ಏಕಾದಶಿ ಹಬ್ಬವನ್ನು ಗಾಳಿಪಟದ ಹಬ್ಬ ಎಂದೇ ಕರೆಯುತ್ತಾರೆ. ಆಷಾಢಮಾಸವು ಗಾಳಿಕಾಲ. ಬೀಸುವ ಗಾಳಿಯಲ್ಲಿ ಗಾಳಿಪಟಗಳನ್ನು ಆಗಸದೆತ್ತರಕ್ಕೆ ಹಾರಿಸಿ ಜನ ಸಂತೋಷ ಪಡುತ್ತಿದ್ದರು. ಮಂಡ್ಯ, ಮೈಸೂರು, ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ರೂಢಿಯಲ್ಲಿದ್ದ ಈ ಸಂಪ್ರದಾಯವು ನಿಂತುಹೋಗುತ್ತಾ ಬಂದಿತ್ತು. ಹೀಗಿರುವಾಗ ಇಂಥ ಒಂದು ಕಲೆಯನ್ನು ಪುನರುಜ್ಜೀವನಗೊಳಿಸಬೇಕೆಂದು ಮನಸ್ಸು ಮಾಡಿದ ನಾಗೇಗೌಡರು ಸಿದ್ಧತೆ ನಡೆಸಿದರು. ಪರಿಷತ್ತಿನ ಸಹಾಯಕರಾದ ಕಡಬ ಶ್ರೀನಿವಾಸ್ ಅವರನ್ನು ಎಲ್ಲೆಲ್ಲಿ ಗಾಳಿಪಟ ಹಾರಿಸುವ ಜನ ಇದ್ದಾರೆಂಬುದನ್ನು ತಿಳಿದು ಬರುವ ಕೆಲಸಕ್ಕೆ ಹಚ್ಚಿದರು. ಕರಪತ್ರಗಳನ್ನು ಮುದ್ರಿಸಿ ಎಲ್ಲೆಡೆ ಹಂಚಿದರು. 1988ರ ಆಗಸ್ಟ್ 31ರಂದು ಜಾನಪದ ಲೋಕದ ಬಯಲಿನಲ್ಲಿ, ದಾರ ತಯಾರಿಕೆಯಲ್ಲಿ ಹೆಸರಾದ ಮಧುರಾ ಕೋಟ್ಸ್ ಕಂಪನಿಯ ಭವಾನಿ ಶಂಕರ್ ಎಂಬುವರ ಸಹಕಾರದೊಂದಿಗೆ ಪ್ರಪ್ರಥಮ ಗಾಳಿಪಟ ಉತ್ಸವ ಮತ್ತು ಸ್ಪರ್ಧೆಯನ್ನು ಏರ್ಪಡಿಸಿದ್ದಿತು. 60 ವರ್ಷದ ಮುದುಕರಿಂದ ಹಿಡಿದು 6 ವರ್ಷದ ಮಕ್ಕಳವರೆಗೂ ಎಲ್ಲರೂ ಉತ್ಸಾಹದಿಂದ ಭಾಗವಹಿಸಿದರು. 1988ರಲ್ಲಿ ಆರಂಭವಾದ ಗಾಳಿಪಟ ಉತ್ಸವವು, ಕಳೆದ 21 ವರ್ಷಗಳಿಂದಲೂ ನಿರಂತರವಾಗಿ ಕರ್ನಾಟಕ ಜಾನಪದ ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಾ ಬಂದಿದೆ. ಪ್ರತೀ ವರ್ಷ ಜುಲೈ ತಿಂಗಳಿನಲ್ಲಿ ಉತ್ಸವವು ಅದ್ದೂರಿಯಾಗಿ ಆಚರಿಸಲ್ಪಡುತ್ತದೆ.

2.2 ದಸರೆ ತಿಂಗಳಿನಲ್ಲಿ ಜಾನಪದ ಲೋಕದಲ್ಲಿ ದಸರಾ ಉತ್ಸವ ನಡೆಸಬೇಕೆನ್ನುವುದು ನಾಗೇಗೌಡರ ಇಚ್ಛೆಯಾಗಿದ್ದಿತು. ಇದರಿಂದ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ, ಮೈಸೂರು ದಸರಾಕ್ಕೆ ಹೋಗಿ ಬರುವ ಪ್ರವಾಸಿಗರು ಜಾನಪದ ಲೋಕಕ್ಕೆ ಭೇಟಿ ನೀಡಿ ಇಲ್ಲಿಯೂ ದಸರಾ ಉತ್ಸವದಲ್ಲಿ ಪಾಲ್ಗೊಳ್ಳಲಿ ಎಂಬುದು ಉತ್ಸವದ ಹಿಂದಿನ ಉದ್ದೇಶವಾಗಿದ್ದಿತು. ತದನುಸಾರ ಜಾನಪದ ಲೋಕದಲ್ಲಿ ದಸರಾ ಉತ್ಸವವನ್ನು ಆರಂಭಿಸಲಾಯಿತು. 1988ರ ಅಕ್ಟೋಬರ್ 20 ರಿಂದ 23ರ ವರೆಗೆ 4 ದಿನಗಳ ಕಾಲ ಅದ್ದೂರಿಯಾಗಿ ದಸರಾ ಉತ್ಸವ ನಡೆಯಿತು. ಕರ್ನಾಟಕದ ನಾನಾ ಭಾಗಗಳಿಂದ ಸುಮಾರು 550ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದರು. 56 ಜೊತೆ ಎತ್ತುಗಳು ಮೆರವಣಿಗೆಯಲ್ಲಿ

ಭಾಗವಹಿಸಿದ್ದವು. ಮೆರವಣಿಗೆಯು ದಸರೆಯ ಫೌಜನ್ನು ಮೀರಿಸಿದ್ದಿತು. ಸಮಾರೋಪ ಸಮಾರಂಭಕ್ಕೆ ಆಗಮಿಸಿದ್ದ ಸಮಾಜ ಕಲ್ಯಾಣ ಯುವಜನ ಸೇವಾ ಇಲಾಖೆ ಮಂತ್ರಿ ಪಿ.ಜಿ.ಆರ್. ಸಿಂಧ್ಯಾ ಮಾತನಾಡಿ 'ನಶಿಸಿ ಹೋಗುತ್ತಿರುವ ಜನಪದ ಕಲೆಗಳಿಗೆ ನಾಗೇಗೌಡರು ಜೀವದಾನ ಮಾಡುತ್ತಿದ್ದಾರೆ, ಸರ್ಕಾರ ಮಾಡಬೇಕಾದ ಕೆಲಸವನ್ನು ಅವರು ಮಾಡುತ್ತಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಜಾನಪದ ಲೋಕ ಪ್ರೇರಣಾ ಕೇಂದ್ರವಾಗಲಿ' ಎಂದು ಹಾರೈಸಿದರು. ಮಳೂರು ಪಟ್ಟಣದ ಪುಟ್ಟಸ್ವಾಮಿಗೌಡರು, ಚನ್ನಪಟ್ಟಣದ ಡಾ. ಟಿ.ವರದಪ್ಪನವರು, ಸು.ತ. ರಾಮೇಗೌಡರು, ರಾಮನಗರದ ಡಾ ಎಸ್.ಎಲ್.ತಿಮ್ಮಯ್ಯನವರು, ಮಾಗಡಿಯ ಜವರಪ್ಪ ಮತ್ತು ಸಂಗಡಿಗರು ಬಿಡದಿಯ ಸಿ.ಬೋರಯ್ಯನವರು ಮೊದಲಾಗಿ ಅನೇಕ ಗಣ್ಯರು ದಸರಾ ಉತ್ಸವದ ಯಶಸ್ಸಿಗೆ ಶ್ರಮಿಸಿದರು.

2.3 1989ರ ಏಪ್ರಿಲ್ 7ರಿಂದ ಮೂರು ದಿನಗಳು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ವಸಂತೋತ್ಸವ ನಡೆಯಿತು. ಇಡಗುಂಜಿಯ ಶಂಭು ಹೆಗ್ಗಡೆ ಯವರಿಂದ 'ಜರಾಸಂಧ ವಧೆ' ಯಕ್ಷಗಾನ, ಅಂತರವಳ್ಳಿಯ ಜೀವನಗೌಡ ಸಂಗಡಿಗರಿಂದ 'ವೀರ ಅಭಿಮನ್ಯು' ಸೂತ್ರದ ಗೊಂಬೆಯಾಟ, ತಿಪಟೂರು ಅಭಿನಯ ಮಹಿಳಾ ತಂಡದವರಿಂದ 'ಕೆರೆಗೆ ಹಾರ' ನಾಟಕ ನಡೆದವು.

2.3 ಇದೇ 1989ರ ಏಪ್ರಿಲ್ 19ರಿಂದ 22ರ ವರೆಗೆ ಜಾನಪದ ಲೋಕದಲ್ಲಿ ಪೌರಾಣಿಕ ನಾಟಕೋತ್ಸವವನ್ನು ಏರ್ಪಡಿಸಲಾಗಿದ್ದಿತು. ಕತ್ತಲಾಗುತ್ತಿದ್ದಂತೆ ಭವ್ಯ ಅರಮನೆಯಲ್ಲಿ ರಾಜ ಮಹಾರಾಜರ ಒಡ್ಡೋಲಗ, ಅಂತಃಪುರದಲ್ಲಿ ರಾಜ ರಾಣಿಯರ ಸರಸ ಸಲ್ಲಾಪ, ಉದ್ಯಾನವನದಲ್ಲಿ ರಾಜಕುಮಾರ-ರಾಜಕುಮಾರಿಯರ ವಿಹಾರ, ಘೋರಾರಣ್ಯದಲ್ಲಿ ರಾಕ್ಷಸರ ಆರ್ಭಟ ಎಲ್ಲವೂ ಜಾನಪದ ಲೋಕದಲ್ಲಿ ಕತ್ತಲ ರಾತ್ರಿಯಲ್ಲಿ ಮೈದಳೆದವು. ಚನ್ನಪಟ್ಟಣ, ರಾಮನಗರ, ದೇವನಹಳ್ಳಿ, ಮಾಗಡಿ ತಾಲ್ಲೂಕುಗಳ ಗ್ರಾಮೀಣ ಭಾಗಗಳಿಂದ ಬಂದ ನಾಟಕ ತಂಡಗಳು, ಕುರುಕ್ಷೇತ್ರ, ಚಂದ್ರಹಾಸ, ರಾಜ ಸತ್ಯವ್ರತ, ಅಭಿಮನ್ಯುವಿನ ಜನ್ಮರಹಸ್ಯ, ದಾನಶೂರ ಕರ್ಣ, ಸುಭದ್ರ ಕಲ್ಯಾಣ-ಇವೇ ಮೊದಲಾದ ನಾಟಕಗಳನ್ನು ಅಭಿನಯಿಸಿದವು. ಮಂಡ್ಯದ ರಾಜರಾಜೇಶ್ವರಿ ಡ್ರಾಮಾ ಸೀನರಿಯಲ್ಲಿ ಒಂದನ್ನೊಂದು ಮೀರಿಸಿ ಕಿನ್ನರ ಲೋಕವನ್ನೇ ಸೃಷ್ಟಿಸಿದವು.

2.5 1990ರ ಏಪ್ರಿಲ್ 4ರಿಂದ 13ರ ವರೆಗೆ ಒಂದು ವಾರ ಕಾಲ ಜಾನಪದ

ಲೋಕದಲ್ಲಿ ನಾಟಕ ಸಪ್ತಾಹ ನಡೆಯಿತು. ಜನಪದ ರಂಗಭೂಮಿಯ ವಿವಿಧ ಮುಖಗಳನ್ನು ಅದರ ಸೊಗಡು ಸೊಗಸುಗಳನ್ನು ಪರಿಚಯಿಸುವುದು ಈ ನಾಟಕೋತ್ಸವದ ಉದ್ದೇಶವಾಗಿತ್ತು. ಇದೇ ಮೊದಲು ಇಂತಹ ಉತ್ಸವ ಏರ್ಪಾಡಾಗಿದ್ದುದು. ಮೂಡಲಪಾಯ ಮತ್ತು ಪಡುವಲಪಾಯ ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣಪಾರಿಜಾತ, ಪೌರಾಣಿಕ ನಾಟಕ–ಇವೆಲ್ಲವೂ ಈ ಉತ್ಸವದಲ್ಲಿ ಮೇಳೈಸಿದ್ದವು. ಧರ್ಮಸ್ಥಳದ ಮಂಜುನಾಥೇಶ್ವರ ಯಕ್ಷಗಾನ ಮಂಡಳಿಯವರು 'ಸುದರ್ಶನ ವಿಜಯ' ಆಟ ಆಡಿದರು. ರಾಮನಗರ ತಾಲ್ಲೂಕು ಹೆಗ್ಗಡಗೆರೆಯವರು 'ಶನಿಪ್ರಭಾವ' 'ಸುಂದರಕಾಂಡ ರಾಮಾಯಣ' ಮತ್ತು ನಾಗಮಂಗಲ ತಾಲ್ಲೂಕಿನ ನರಗನಹಳ್ಳಿಯವರು ಮೂಡಲಪಾಯ ಯಕ್ಷಗಾನ ಪ್ರಸಂಗಗಳನ್ನು ಪ್ರದರ್ಶಿಸಿದರು. ಗದಗ–ಬೆಟಗೇರಿಯ ಶ್ರೀ ಹೊಸ ಬನಶಂಕರಿ ಗುಡಿಮೇಳದವರು 'ಗಿರಿಜಾ ಕಲ್ಯಾಣ' ದೊಡ್ಡಾಟ ಆಡಿದರೆ, ಬಿಜಾಪುರ ಜಿಲ್ಲೆ ಸಾಲೋಟಗಿಯವರು 'ಶ್ರೀಕೃಷ್ಣ ಪಾರಿಜಾತ'ವನ್ನು ಸೊಗಸಾಗಿ ಅಭಿನಯಿಸಿ ತೋರಿಸಿದರು. ಬೆಳಗಾವಿ ಜಿಲ್ಲೆ ಗೋಕಾಕ್‌ದ ವಿಜಯ ನಾಟ್ಯ ಸಂಘದವರು ಸಂಗ್ಯಾ ಬಾಳ್ಯಾ ಆಡಿದರು. ರಾಮನಗರ ಮಿತ್ರ ಬಳಗದವರು 'ದಾನಶೂರ ಕರ್ಣ' ಎಂಬ ಪೌರಾಣಿಕ ನಾಟಕವನ್ನು ಪ್ರದರ್ಶಿಸಿದರು. ಏಳು ದಿನದ ಈ ನಾಟಕೋತ್ಸವದ ಉದ್ಘಾಟನೆಯು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾದ ಸಿ. ನಾರಾಯಣಸ್ವಾಮಿ, ಮಾಜಿ ಸಚಿವ ಎಂ.ಚಂದ್ರಶೇಖರ ಮತ್ತು ರಾಮನಗರದ ಶಾಸಕ ಸಿ.ಎಂ.ಲಿಂಗಪ್ಪ ನಡೆಸಿಕೊಟ್ಟರು. ಜಾನಪದ ಲೋಕದ ಸುತ್ತಮುತ್ತಲಿನ ಹತ್ತಾರು ಊರುಗಳ ಜನರಿಗೆ ಒಂದು ವಾರ ನಾಟಕದ ರಸದೌತಣ ನಡೆಯಿತು.

2.6 1992ರ ಮಾರ್ಚ್ 8ರಿಂದ 10ರ ವರೆಗೆ ಮೂರು ದಿನಗಳ ಕಾಲ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಜರುಗಿದ ಆದಿವಾಸಿ ಮೇಳ ಅತ್ಯಂತ ಅಪರೂಪದ ಉತ್ಸವವಾಗಿತ್ತು. ಹಾಲಕ್ಕಿ ಒಕ್ಕಲಿಗ ಬುಡಕಟ್ಟು ಕಲಾವಿದೆ ಸುಕ್ರಿ ಬೊಮ್ಮಗೌಡ ಉತ್ಸವವನ್ನು ಉದ್ಘಾಟಿಸಿದರೆ, ಮಹಾರಾಷ್ಟ್ರದ ಬುಡಕಟ್ಟು ಜನಾಂಗಗಳನ್ನು ಕುರಿತು ಕೆಲಸ ಮಾಡಿದ ಗೋದಾವರಿ ಪರುಳೇಕರ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕನ್ನಡ ನಾಡಿನ ಎಲ್ಲಾ ಬುಡಕಟ್ಟು ಜನಾಂಗಗಳ ಕಲಾವಿದರು ಈ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಆದಿವಾಸಿ ಮಹಿಳೆಯರ ಉಡಿಗೆ ತೊಡಿಗೆ, ವಾದ್ಯಗಳು. ಕಲಾತ್ಮಕ ಕರಕುಶಲ ವಸ್ತುಗಳ ಪ್ರದರ್ಶನವು ಉತ್ಸವದ ವಿಶೇಷ ಆಕರ್ಷಣೆಯಾಗಿದ್ದಿತು.

2.7 1996ರ ಮಾರ್ಚ್ 22ರಿಂದ 26ರ ವರೆಗೆ ಐದು ದಿನಗಳ ಕಾಲ ಜಾನಪದ ಲೋಕೋತ್ಸವವು ನಡೆಯಿತು. ರಾಜ್ಯ ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಲೋಕದ ಮೊದಲ ಹುಟ್ಟುಹಬ್ಬ ಆರಂಭವಾಯಿತು. ಜನಪದ ಕಲಾಪ್ರದರ್ಶನಗಳಲ್ಲದೆ, ಕರಕುಶಲ ಮೇಳವನ್ನು ಸಹ ಏರ್ಪಡಿಸಲಾಗಿದ್ದಿತು. ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀಮತಿ ಬಿ.ಟಿ.ಲಲಿತಾನಾಯಕ್ ಅವರು ಪಂಜು ಹೊತ್ತಿಸಿ ಲೋಕೋತ್ಸವಕ್ಕೆ ಶುಭ ಕೋರಿದರು. ರಾಜ್ಯ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾದ ಶ್ರೀ ಎಂ.ಶಂಕರಲಿಂಗೇಗೌಡರು ಸಮ್ಮಾಳ ಬಾರಿಸುವ ಮೂಲಕ ಐದು ದಿನಗಳ ಉತ್ಸವವನ್ನು ಉದ್ಘಾಟಿಸಿದರು. ಪ್ರಾಸ್ತಾವಿಕ ಭಾಷಣ ಮಾಡಿದ ನಾಗೇಗೌಡರು ಜಾನಪದ ಲೋಕದ ನಿರ್ಮಾಣದ ಹಿಂದಿನ ಹಿನ್ನೆಲೆ ಹಾಗೂ ಮುಂದಿನ ಯೋಜನೆಗಳನ್ನು ಕುರಿತು ವಿವರಿಸಿದರು. ನಾಡಿನ ವಿವಿಧ ಭಾಗಗಳಿಂದ ಬಂದಿದ್ದ ಜನಪದ ಕಲಾತಂಡಗಳು ತಮ್ಮ ಕಲಾಕೌಶಲ್ಯವನ್ನು ಪ್ರದರ್ಶಿಸಿ ಪ್ರೇಕ್ಷಕರ ಮನ ಸೂರೆಗೊಂಡವು. ಜಾನಪದಕ್ಕೋಸ್ಕರವಾಗಿ ತಮ್ಮ ಬದುಕನ್ನೇ ತೆಯ್ದಂತಹ ಜನಪದ ಕಲಾವಿದರುಗಳನ್ನು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ಸನ್ಮಾನಿಸಿ ಗೌರವಿಸಿದರು. ಅಂದು ಪ್ರಾರಂಭವಾದ ಜಾನಪದ ಲೋಕೋತ್ಸವವು ಕಳೆದ 15 ವರ್ಷಗಳಿಂದಲೂ ನಾಗೇಗೌಡರ ಆಶಯಕ್ಕನುಗುಣವಾಗಿ ನಿರಂತರವಾಗಿ ನಡೆದುಕೊಂಡು ಬರುತ್ತಿದೆ.

2.8 ಸಮೂಹ ಮಾಧ್ಯಮಗಳ ದಾಳಿಗೊಳಗಾಗಿ ನಶಿಸಿಹೋಗುತ್ತಿರುವ ಜನಪದ ಕಲೆಗಳನ್ನು ಉಳಿಸಿ ಬೆಳೆಸಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಕರ್ನಾಟಕ ಜಾನಪದ ಪರಿಷತ್ತಿನ ಆಶಯಕ್ಕೆ ಪೂರಕವಾಗಿ 95–96ನೇ ಸಾಲಿನ ವಿಶೇಷ ಘಟಕ ಯೋಜನೆ ಅನ್ವಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸ್ಪಂದಿಸಿದ್ದರ ಫಲವಾಗಿ ಜಾನಪದ ಲೋಕದಲ್ಲಿ ಪರಿಶಿಷ್ಟ ಜಾತಿ/ವರ್ಗಕ್ಕೆ ಸೇರಿದ ಯುವಕರಿಗೆ ರಂಗದ ಕುಣಿತ, ಡೊಳ್ಳು ಕುಣಿತ, ಗೊರವರ ಕುಣಿತ ಮತ್ತು ಕೋಲಾಟ ಈ ಪ್ರದರ್ಶಕ ಕಲೆಗಳ ವ್ಯವಸ್ಥಿತ ಕಲಿಕೆಯ ಶಿಬಿರವನ್ನು ಏರ್ಪಡಿಸಲಾಗಿದ್ದಿತು. 01.02.1996ರಿಂದ 13.03.1996ರ ವರೆಗೆ ರಂಗದ ಕುಣಿತ, ಗೊರವರ ಕುಣಿತ, ಡೊಳ್ಳು ಕುಣಿತ, ಕೋಲಾಟ ಕಲೆಗಳನ್ನು ತರಬೇತಿ ನೀಡಲಾಯಿತು. ಮೇಲ್ಕಂಡ ಎಲ್ಲಾ ತರಬೇತಿ ಶಿಬಿರಗಳು ವಸತಿ ಸಹಿತ

ಶಿಬಿರಗಳಾಗಿದ್ದವು. ಜನಪದ ಕಲೆಗಳ ತರಬೇತಿ ಮುಕ್ತಾಯ ಸಮಾರಂಭದಲ್ಲಿ ಆಡಳಿತ ಮಂಡಳಿ ಸದಸ್ಯರುಗಳಾದ ಜಿ.ನಾರಾಯಣ, ಡಾ.ಬಸವರಾಜ ಮಲಶೆಟ್ಟಿ, ಶ್ರೀ ಹುಚ್ಚಪ್ಪ ಮಾಸ್ತರ, ಶ್ರೀ ಯಳಸಂಗಿ ಕಲ್ಲಣ್ಣ, ಶ್ರೀ ಗುರುಮೂರ್ತಿ ಪೆಂಡಕೂರು ಅವರುಗಳು ಉಪಸ್ಥಿತರಿದ್ದರು. ಶ್ರೀ ಜಿ.ನಾರಾಯಣ ಅವರು ಮಾತನಾಡಿ, "ಇಂದು ನಮ್ಮ ಜನಪದ ಕಲೆಗಳು ಸಮೂಹ ಮಾಧ್ಯಮಗಳ ಹಾವಳಿಗೆ ಸಿಕ್ಕಿ ನಶಿಸಿಹೋಗುತ್ತಿರುವ ಸಂದರ್ಭದಲ್ಲಿ ಸರ್ಕಾರವು ವಿಶೇಷ ಘಟಕ ಯೋಜನೆಯಡಿಯಲ್ಲಿ ಕೈಗೊಂಡಿರುವ ಇಂತಹ ತರಬೇತಿಯನ್ನು ಈವತ್ತಿನ ಯುವಕರು ಸದುಪಯೋಗ ಪಡಿಸಿಕೊಂಡು ಕಲೆಗಳನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ಮುಂದಾಗಬೇಕು" ಎಂದು ಕರೆ ನೀಡಿದರು.

2.9 1996ರ ಜನವರಿ 30–31 ಈ ಎರಡು ದಿನಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು ಇವುಗಳ ಸಹಯೋಗದೊಂದಿಗೆ ಜಾನಪದ ಲೋಕದಲ್ಲಿ ವಿಶಿಷ್ಟ ಜನಪದ ಕಲೆಗಳ ಉತ್ಸವ ಜರುಗಿತು. ಬೀಸು ಕಂಸಾಳೆ, ಸೋಮನ ಕುಣಿತ, ನಂದೀಕೋಲು ಕುಣಿತ, ಕರಗದ ಕುಣಿತ, ಡೊಳ್ಳು ಕುಣಿತ, ತಮಟೆ ಕುಣಿತ, ಪೂಜಾ ಕುಣಿತ, ಮೂಡಲಪಾಯ ಯಕ್ಷಗಾನ ಪ್ರದರ್ಶನಗಳು ನಡೆದವು.

2.10 1996 ಸೆಪ್ಟೆಂಬರ್ 4, 5 ಮತ್ತು 6 ಈ ಮೂರು ದಿನಗಳ ಕಾಲ ಮತ್ತೆ ಮೇಲ್ಕಂಡ ಸಂಸ್ಥೆಗಳ ಸಹಯೋಗದಲ್ಲಿ ವಲಯ ಜಾನಪದ ಕಲಾಮಹೋತ್ಸವ ನಡೆಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ ಸಮ್ಮಾಳ ಬಾರಿಸುವುದರ ಮೂಲಕ ಉತ್ಸವವನ್ನು ಉದ್ಘಾಟಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗಳಾದ ಶ್ರೀ ಅ.ರಾ.ಚಂದ್ರಹಾಸ ಗುಪ್ತ, ನಿರ್ದೇಶಕರಾದ ವೈ.ಕೆ.ಮುದ್ದುಕೃಷ್ಣ, ಉಪನಿರ್ದೇಶಕರಾದ ವೆಂ.ಶ್ರೀನಿವಾಸ ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಚ್.ಜೆ.ಲಕ್ಕಪ್ಪಗೌಡರು ಉಪಸ್ಥಿತರಿದ್ದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಎಚ್.ಎಲ್.ನಾಗೇಗೌಡರು ವಹಿಸಿದ್ದರು. ಉತ್ಸವದಲ್ಲಿ ತುಡುಮು ವಾದನ, ವೀರಭದ್ರನ ಕುಣಿತ, ಡೊಳ್ಳು ಕುಣಿತ, ಆಂಧ್ರಪ್ರದೇಶದ ಗಿರಿಜನ ನೃತ್ಯ ಅಕಾಡೆಮಿಯ ಹೆಣ್ಣುಮಕ್ಕಳಿಂದ ಕೋಲಾಟ, ಸುಗ್ಗಿ ಕುಣಿತ, ಲಂಬಾಣಿ ಕುಣಿತ, ತಮಿಳುನಾಡಿನ ಕರಗಾಟ್ಟಂ ಕಾವಡಿ, ಕೀಲುಕುದುರೆ, ತಪ್ಪಾಟಂ

ಪ್ರದರ್ಶನಗಳು, ಕೇರಳದ ಕಲಾವಿದರಿಂದ ಕುಮ್ಮಟ್ಟಿ, ಕುಮಾರಿ ಲಕ್ಷ್ಮೀ ಗೋಪಾಲಸ್ವಾಮಿ ಭರತನಾಟ್ಯ, ಧರಣಿ ಕಶ್ಯಪ್ ಅವರ ಕೂಚ್ಚುಪುಡಿ ನೃತ್ಯಗಳು, ಶ್ರೀಕೃಷ್ಣಪಾರಿಜಾತ ನಾಟಕಗಳು ಪ್ರದರ್ಶನಗೊಂಡವು. ಅಕಾಡೆಮಿಯ ಅಧ್ಯಕ್ಷರಾದ ಲಕ್ಕಪ್ಪಗೌಡರು ಮಾತನಾಡುತ್ತ, "ಕರ್ನಾಟಕದ ಜಾನಪದ ಕಲೆಗಳು ಬೇರೆ ರಾಜ್ಯಗಳಲ್ಲಿ ಮತ್ತು ಇತರ ರಾಜ್ಯಗಳ ಕಲೆಗಳು ನಮ್ಮ ರಾಜ್ಯದಲ್ಲಿ ಪ್ರದರ್ಶನ ಗೊಳ್ಳುವುದರಿಂದ ಜನಪದ ಕಲೆಯ ಭಾವೈಕ್ಯತೆ ಸಾಧಿಸಿದಂತಾಗುತ್ತದೆ ಮತ್ತು ಸಾಂಸ್ಕೃತಿಕ ವಿನಿಮಯ ಆದಂತಾಗುತ್ತದೆ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಅರ್ಜುನ ಜೋಗಿ ನೃತ್ಯ ರೂಪಕ

2.11 ವೈವಿಧ್ಯಮಯ ಪುರಾಣ ಕಥನಗಳನ್ನು ಆಧರಿಸಿ ನೃತ್ಯರೂಪಕಗಳನ್ನು ನಿರ್ಮಿಸಿ ಸಾದರಪಡಿಸುವ ಯೋಜನೆಯ ಅನ್ವಯ ಕರ್ನಾಟಕ ಜಾನಪದ ಪರಿಷತ್ತು, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ನೆರವಿನೊಂದಿಗೆ ಅರ್ಜುನ ಜೋಗಿ ಕಥಾನಕವನ್ನು ನೃತ್ಯರೂಪಕವನ್ನಾಗಿ ಸಿದ್ಧಪಡಿಸಲು ಯೋಜಿಸಿದ್ದಿತು. ಸುಪ್ರಸಿದ್ಧ ಕಥಕ್ ನೃತ್ಯ ಪ್ರವೀಣೆ ಶ್ರೀಮತಿ ಮಾಯಾರಾವ್ ಅವರು ಈ ನೃತ್ಯರೂಪಕವನ್ನು ನಿರ್ದೇಶಿಸಿ ರಂಗಕ್ಕೆ ಅಳವಡಿಸಿದರು. 1996ರ ಜುಲೈ 22ರಂದು ಮಾಯಾರಾವ್ ಅವರ 'ನಾಟ್ಯ ಇನ್‌ಸ್ಟಿಟ್ಯೂಟ್ ಆಫ್ ಕಥಕ್ ಅಂಡ್ ಕೊರಿಯೋಗ್ರಫಿ' ವಿದ್ಯಾಲಯದ ವಿದ್ಯಾರ್ಥಿಗಳು 'ಅರ್ಜುನ ಜೋಗಿ' ನೃತ್ಯರೂಪಕವನ್ನು ಅಮೋಘವಾಗಿ ಪ್ರದರ್ಶಿಸಿದರು. ಈ ಪ್ರದರ್ಶನವು ನೆರೆದ ಪ್ರೇಕ್ಷಕರಿಗೆ ವಿನೂತನ ಅನುಭವವನ್ನು ತಂದುಕೊಟ್ಟಿತಲ್ಲದೆ ಮುಕ್ತಕಂಠದ ಪ್ರಶಂಸೆಗೆ ಪಾತ್ರವಾಯಿತು. ನೃತ್ಯರೂಪಕದ ಸಿದ್ಧತೆಯಲ್ಲಿ ಡಾ. ಚಕ್ಕರೆ ಶಿವಶಂಕರ್ ಸಾಹಿತ್ಯದ ನೆರವು ನೀಡಿದ್ದರು.

ನೃತ್ಯರೂಪಕದ ಪ್ರಥಮ ಪ್ರದರ್ಶನವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಎಚ್. ಪಟೇಲ್ ಉದ್ಘಾಟಿಸಿದರು. ಸಚಿವರುಗಳಾದ ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್, ಶ್ರೀ ಎಂ.ಪಿ. ಪ್ರಕಾಶ್, ವಿಧಾನಪರಿಷತ್ತಿನ ಸಭಾಪತಿಗಳಾದ ಶ್ರೀ ಡಿ.ಬಿ.ಕಲ್ಮಣಕರ್ ಉಪಸ್ಥಿತರಿದ್ದರು.

2.12 ಶ್ರೀ ಎಚ್.ಎಲ್. ನಾಗೇಗೌಡರು ಕಳೆದ 30 ವರ್ಷಗಳಿಂದ ನಾಡಿನಾದ್ಯಂತ ಸುತ್ತಾಡಿ ಧ್ವನಿಮುದ್ರಿಸಿಕೊಂಡಿರುವ. ಜನಪದ ಸಂಗೀತ ಸಾಹಿತ್ಯದ ಭಾರಿ ಭಂಡಾರವೇ ಪರಿಷತ್ತಿನಲ್ಲಿದೆ. ಸುಮಾರು ಒಂದೂವರೆ ಸಾವಿರ ಗಂಟೆಗಳ

ಕಾಲ ಕೇಳಬಹುದಾದಷ್ಟು ಧ್ವನಿಮುದ್ರಿಕೆಗಳಿವೆ. ಈ ಧ್ವನಿಮುದ್ರಿಕೆಗಳಲ್ಲಿನ ಗೀತೆಗಳ ರಾಗ–ಧಾಟಿ, ತಾಳ–ಮೇಳ, ದನಿ–ಬನಿ ಎಲ್ಲವೂ ಮೂಲ ಹಾಡುಗರ ಸ್ವತ್ತು; ಮೂಲರೂಪದಲ್ಲೇ ಬಡಿಸಿದ ತುತ್ತು. ಇವುಗಳಲ್ಲಿ ಅನೇಕ ಅಪರೂಪದ ಸೊಲ್ಲು-ಪಲ್ಲವಿಗಳಿವೆ. ಅಸಂಖ್ಯಾತ ಹೆಂಗಸರ ದನಿ ಗಂಡಸರ ಧಾಟಿಗಳಿವೆ. ಯಕ್ಷಗಾನದ ಮಟ್ಟುಗಳು ಮತ್ತು ವಿವಿಧ ವಾದ್ಯಗಳ ಗಸ್ತುಗಳಿವೆ.

ಈವತ್ತಿನ ದಿನಗಳಲ್ಲಿ ಜನಪದ ಗೀತೆಗಳು ಎಂದು ಹಣೆಪಟ್ಟಿ ಹಚ್ಚಿಕೊಂಡು ಪುಂಖಾನುಪುಂಖವಾಗಿ ಹೊರಬರುತ್ತಿರುವ ನಕಲಿ ಜಾನಪದ ಕ್ಯಾಸೆಟ್‌ಗಳು ನಮ್ಮ ಹಾಡುಗಾರರ ಅಭಿರುಚಿಯ ದಿಕ್ಕುಗೆಡಿಸುತ್ತಿವೆ. ನಿಜವಾದ ಜನಪದ ಗೀತೆ ಯಾವುದೆಂಬುದು ತಿಳಿಯದೆ ಹೊಸದಾಗಿ ಹಾಡು ಕಲಿಯ ಹೊರಟವರು ಗೊಂದಲದಲ್ಲಿ ಸಿಲುಕಿದ್ದಾರೆ. ಈ ಗೊಂದಲವನ್ನು ನಿವಾರಿಸಿ ಹೊಸದಾಗಿ ಕಲಿತು ಹಾಡುತ್ತಿರುವವರಲ್ಲಿ ಮೂಲ ಜನಪದ ಗೀತಗಾಯನ ಕಲೆಯನ್ನು ಪ್ರೋತ್ಸಾಹಿಸಿ ಬೆಳೆಸುವ ದೃಷ್ಟಿಯಿಂದ ಗ್ರಾಮೀಣ ಪ್ರದೇಶಗಳ ಮೂಲಕ ಗಾಯಕ, ಗಾಯಕಿಯರು ಮೂಲ ಮಟ್ಟುಗಳಲ್ಲಿ ಹಾಡಿರುವ ಮೂಲ ಸಾಹಿತ್ಯವನ್ನು ಒಳಗೊಂಡ ಮೂನ್ನೂರು ಕ್ಯಾಸೆಟ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಯೋಜನೆಯನ್ನು ಕರ್ನಾಟಕ ಜಾನಪದ ಪರಿಷತ್ತು ಹಮ್ಮಿಕೊಂಡಿದ್ದು, ಈ ಯೋಜನೆಯ ಮೊದಲ ಹಂತವಾಗಿ, ತಾ: 29.11.99ರಂದು ಸೋಮವಾರ ಸಂಜೆ 5 ಗಂಟೆಗೆ ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಯವನಿಕಾ ಸಭಾಂಗಣದಲ್ಲಿ ತನ್ನ ಗ್ರಾಮಗೀತೆಗಳ 30 ಕ್ಯಾಸೆಟ್‌ಗಳ ಬಿಡುಗಡೆ ಸಮಾರಂಭವನ್ನು ಏರ್ಪಡಿಸಿದ್ದಿತು. ಬೆಂಗಳೂರಿನ ಸಹ್ಯಾದ್ರಿ ಸಂಘದ ಸಂಯುಕ್ತ ಆಶ್ರಯದಲ್ಲಿ ನಡೆದ ಈ ಸಮಾರಂಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ, ಸಿನಿಮಾ ಮತ್ತು ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ಹೆಸರಾದ ಡಾ. ಚಂದ್ರಶೇಖರ ಕಂಬಾರ ಅವರು ಧ್ವನಿ ಸುರುಳಿಯ ಬುತ್ತಿಯನ್ನು ಬಿಚ್ಚುವುದರ ಮೂಲಕ 30 ಗ್ರಾಮಗೀತೆ ಕ್ಯಾಸೆಟ್‌ಗಳನ್ನು ಬಿಡುಗಡೆ ಮಾಡಿದರು. 'ಇಂದಿನ ದಿನಗಳಲ್ಲಿ ಕಿವಿಯ ಕೆಲಸ ಕಡಿಮೆಯಾಗುತ್ತಾ ಬಂದಿದ್ದು, ಕಣ್ಣಿನ ಕೆಲಸ ಹೆಚ್ಚಾಗುತ್ತಿದೆ. ಜನ ಓದುವುದು, ಕೇಳುವುದಕ್ಕಿಂತ ನೋಡುವುದರತ್ತ ಹೆಚ್ಚು ಗಮನಹರಿಸುತ್ತಿದ್ದಾರೆ. ಅಮೇರಿಕಾದಂತಹ ದೇಶದಲ್ಲಿ ಮಕ್ಕಳು ಚಾನೆಲ್‌ಗಳಿಗೆ ಮೊರೆಹೋಗಿದ್ದಾರೆ. ವಿಸ್ಮಯ, ಕುತೂಹಲಗಳೆನ್ನುವುದು ಅವರ ಬದುಕಿನಲ್ಲಿ ಇಲ್ಲವಾಗಿದೆ. ಇಂತಹ

ಸಂದರ್ಭದಲ್ಲಿ ನಾಗೇಗೌಡರು ಜನಪದ ಸಂಗೀತ ಸಾಹಿತ್ಯವನ್ನು ಸಂರಕ್ಷಿಸಿ ಅವುಗಳನ್ನು ಧ್ವನಿಸುರುಳಿಗಳಲ್ಲಿ ಕಾಯ್ದಿರಿಸುವುದರ ಮುಖಾಂತರ ನಾಡಿನ ಸಂಸ್ಕೃತಿ ಸಂರಕ್ಷಣೆಯ ಕಾರ್ಯಮಾಡುತ್ತಿದ್ದಾರೆ' ಎಂದು ಶ್ಲಾಘಿಸಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಎಚ್.ಎಲ್.ನಾಗೇಗೌಡರು ಕರ್ನಾಟಕ ಜಾನಪದ ಪರಿಷತ್ತು ಕಳೆದ 30 ವರ್ಷಗಳಿಂದಲೂ ಹತ್ತು ಹಲವು ಅಪರೂಪದ ಜಾನಪದೀಯ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾಗ್ಯೂ ಕೂಡಾ ನಮ್ಮ ಪತ್ರಿಕೆಗಳು ಸರಿಯಾದ ರೀತಿಯಲ್ಲಿ ಪ್ರಚಾರ ನೀಡುತ್ತಿಲ್ಲ' ಎಂದು ಪತ್ರಿಕಾ ಮಾಧ್ಯಮದ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಡಾ. ಚಕ್ಕರೆ ಶಿವಶಂಕರ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕರ್ನಾಟಕದ ಕ್ಯಾಸೆಟ್ ಕ್ಷೇತ್ರದಲ್ಲಿ 30 ಕ್ಯಾಸೆಟ್‌ಗಳನ್ನು ಒಮ್ಮೆಗೆ ಬಿಡುಗಡೆ ಮಾಡಿದ ಅಪರೂಪದ ಸಮಾರಂಭ ಇದಾಗಿತ್ತು. ಪರಿಷತ್ತು ಬಿಡುಗಡೆ ಮಾಡಿದ 30 ಕ್ಯಾಸೆಟ್‌ಗಳ ಶೀರ್ಷಿಕೆಗಳು ಕೆಳಕಂಡಂತಿವೆ:

1. ಹಚ್ಚೆ ಪದಗಳು
2. ಹಾಲರಬಿ ಬಂದೊ
3. ಕಂಸಾಳೆ ಪದಗಳು
4. ಕರುಣಿ ಕಣ್ಣ ತೆರಿಯೆ
5. ಸುವ್ವಿ ಸುವ್ವಿ ಸುವ್ವಾಲೆ
6. ಶಿವನ ಮರೆಯಬಾರದು
7. ಸೋಬಾನೆ ಎನ್ನೀರೆ
8. ಚೆಲ್ಲಿದರು ಮಲ್ಲಿಗೆಯ
9. ಶಿವನೆ ನೀ ಬಾರೊ ನಮ್ಮನಿಗೆ
10. ಕಿನ್ನುಡಿ ಕಿರುಗೆಜ್ಜೆ
11. ಸೋಬಾನವೆಲ್ಲ ಶಿವನಿಗೆ
12. ಕಲ್ಯಾಣವೇ ಶಿವನೆ ಕಲ್ಯಾಣವೇ
13. ಜೂಜನ್ಯಾಡ್ಯಾರೆ ದೊರೆಗಳ ಮಕ್ಕಳು
14. ಕೋಲು ಮಲ್ಲಿಗೆ ಕೋಲೆ

15. ದೊಂಬಿದಾಸರ ಪದಗಳು
16. ಕೊಣವೇಗೌಡನ ಕಥೆ
17. ನಿದ್ರೆಗಣ್ಣಾಗೆ ನೆನದೇವೆ
18. ಅಣ್ಣಾನ ಮನಿಗೆ ಹೆಣ್ಣೀಗೆ ನಾನೋದೆ
19. ಚೌಡಿಕೆ ಪದಗಳು
20. ರಾಮಾನೆ ಚಂದುರಾಮಾ
21. ಪೂಜೆ ಮಾಡನ ಬನ್ನಿರೆ
22. ಶಕ್ತಿಗೆ ಸುಳ್ಳಾ ಅಂತೀರಣ್ಣಾ
23. ಜ್ಞಾನಿ ಗುಣ ಬೇರೆ ತಾತಾ
24. ಕ್ವಾರಣ್ಯ ಸಾರವರೆ ಮಾದೇವಾ
25. ಯಾರ ಮನಿ ಯಾರ ಹೊಲ
26. ಸೀಗಡಿಗೆ ಬಂತು ಸಿರಿತನ
27. ತೂಗುತಾದ ನೋಡು ಜೋಕಾಲಿ
28. ಕಲ್ಯಾಣ ಎನ್ನುವೋದು
29. ಕಂಬಕಂಬಕೆ ಎಂಬತ್ತು ದೀವಿಗೆ
30. ತೂಗಿರಿ ದೀವಿಗೆಯ

ಜಾನಪದ ಲೋಕದಲ್ಲಿ ಬಹುದೊಡ್ಡ ಸ್ವಾಗತಮಂಟಪದ ಅನಾವರಣ

2.13 ತಾ: 05.02.1999ರಂದು ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರಿನ ಕೀರ್ತಿ ಕ್ರಿಯೇಷನ್ ಅವರ ಸಹಯೋಗದೊಂದಿಗೆ ಜಾನಪದ ಲೋಕದಲ್ಲಿ ನೂತನವಾಗಿ ನಿರ್ಮಿಸಿರುವ ಸ್ವಾಗತ ಮಂಟಪದ ಅನಾವರಣ ಸಮಾರಂಭ ಏರ್ಪಡಿಸಿದ್ದು, ಮಾನ್ಯ ಗೃಹಮಂತ್ರಿಗಳಾದ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ ಅವರು ಜಾನಪದ ಲೋಕದ ಮಹಾದ್ವಾರದ ಬಳಿಯಲ್ಲಿ ಸುಮಾರು 50 ಅಡಿ ಎತ್ತರದ ನೂತನ ಸ್ವಾಗತ ಮಂಟಪವನ್ನು ಅನಾವರಣಗೊಳಿಸಿದರು. ಅನಂತರ ಬಯಲು ರಂಗಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡುತ್ತಾ 'ಜನಪದ ಕಲೆ ಸಂಸ್ಕೃತಿಯನ್ನು ಶ್ರೀ ನಾಗೇಗೌಡರು ವಿಚಾರಮಾಡಿ ಆಚರಣೆಗೆ

ತಂದಿದ್ದಾರೆ. ಪ್ರಚಾರ ಅಗತ್ಯ, ಎಂದು ಹೇಳಿದರು. ಕೀರ್ತಿ ಕ್ರಿಯೇಷನ್ಸ್‌ನ ಶ್ರೀ ಕೆ.ಎನ್.ಅಶೋಕ ಕುಮಾರ್ ಎಲ್ಲರನ್ನು ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಎಚ್.ಎಲ್.ನಾಗೇಗೌಡರು 'ಇಂತಹ ಸಾಂಸ್ಕೃತಿಕ ಕೇಂದ್ರಗಳಿಗೆ ಜನರ ಪ್ರೋತ್ಸಾಹ ಸಾಲದು' ಎಂದು ವಿಷಾದಿಸಿದರು. ಮುಖ್ಯ ಅತಿಥಿಗಳಾದ ರಾಮನಗರದ ಶಾಸಕ ಶ್ರೀ ಸಿ.ಎಂ.ಲಿಂಗಪ್ಪನವರು 'ಜಾನಪದ ಲೋಕದಲ್ಲಿ ಕಲಾ ತರಬೇತಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ಪ್ರಾರಂಭಿಸುವುದಾಗಿ' ತಿಳಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆಂಧ್ರಪ್ರದೇಶದ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಎನ್.ವೈ. ಹನುಮಂತಪ್ಪ ಅವರು 'ಜಾನಪದ ಲೋಕ ಜಾನಪದದ ಕಾಶಿ. ಇದರ ನೇತಾರರಾದ ನಾಗೇಗೌಡರು ಜನಪದ ಸಂಸ್ಕೃತಿಯ ಉಳಿವಿಗೆ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದಾರೆ' ಎಂದರು. ವೇದಿಕೆಯಲ್ಲಿ ದಿ ಹಿಂದು ಪತ್ರಿಕೆಯ ಚೀಫ್ ಸರ್ಕುಲೇಷನ್ ಮ್ಯಾನೇಜರ್ ಶ್ರೀ ಎಂ.ಆರ್.ಶಿವಕುಮಾರ್, ರೀಜನಲ್ ಮ್ಯಾನೇಜರ್ ಶ್ರೀ ಎನ್.ರಾಜಶೇಖರ್ ಮತ್ತು ಕೀರ್ತಿ ಕ್ರಿಯೇಷನ್ಸ್‌ನ ಗೋಪಿನಾಥ ಜೆ. ರೇಳೇಕರ್ ಉಪಸ್ಥಿತರಿದ್ದರು.

2.14 ಪ್ರಯೋಗ, ಪ್ರದರ್ಶನ ಮತ್ತು ತರಬೇತಿ ಪ್ರಧಾನವಾದ ಜಾನಪದ ಸಿರಿಭುವನದಲ್ಲಿ 10.02.2003ರಂದು ವಿಶಿಷ್ಟ ಜನಪದ ಕಲಾ ಮಹೋತ್ಸವ ನಡೆಯಿತು. ಗೊಂಡ ಬುಡಕಟ್ಟು ಕಲಾವಿದರುಗಳಿಂದ ಢಕ್ಕೆ ಕುಣಿತ, ಸಿದ್ಧಿ ಬುಡಕಟ್ಟು ಮಹಿಳೆಯರಿಂದ ಪುಗಡಿ ಕುಣಿತ, ತಮಟೆ ಕುಣಿತ, ಕೊಂಬು ಕಹಳೆ ಹರೆ, ದೋಣು ವಾದನ, ಕಂಸಾಳೆ ಗಾಯನ, ರಂಗದ ಕುಣಿತ, ಕೀಲಾರದ ಮಕ್ಕಳಿಂದ ಡೊಳ್ಳು ಕುಣಿತಗಳು ಪ್ರದರ್ಶನಗೊಂಡು ಪ್ರೇಕ್ಷಕರನ್ನು ಆಕರ್ಷಿಸಿದವು.

ಸಿರಿಭುವನದಲ್ಲಿ ರತಿಕಲ್ಯಾಣ

2.15 ಕನ್ನಡ ಜನಪದ ರಂಗಭೂಮಿ ಪರಂಪರೆಯಲ್ಲಿ ಮೂಡಲಪಾಯ ಯಕ್ಷಗಾನವು ಅತ್ಯಂತ ವಿಶಿಷ್ಟವಾದ ದೃಶ್ಯಕಲಾ ಪ್ರಕಾರ, ಸಾಹಿತ್ಯ ಸಂಗೀತ ಹಾಡುಗಾರಿಕೆ–ಮಾತುಗಾರಿಕೆ–ಬಣ್ಣಗಾರಿಕೆ–ಅಭಿನಯ–ಕುಣಿತ–ವೇಷ ಭೂಷಣ ಗಳು ಇವೇ ಮೊದಲಾದ ಅಂಶಗಳನ್ನು ಒಳಗೊಂಡ ಮನರಂಜನಾ ಮಾಧ್ಯಮವಿದು. ಒಂದು ಕಾಲಕ್ಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಈ ಕಲಾಪ್ರಕಾರ ಕ್ರಮೇಣ ಪ್ರೋತ್ಸಾಹಿಸುವವರಿಲ್ಲದೆ, ಅಳಿವಿನ ಅಂಚಿಗೆ ಬಂದು ನಿಂತಿದೆ. ನಶಿಸಿಹೋಗುತ್ತಿರುವ ಈ ಕಲೆಯನ್ನು ಪುನರುಜ್ಜೀವನಗೊಳಿಸಬೇಕೆಂಬ

ಆಶಯದಿಂದ ಕರ್ನಾಟಕ ಜಾನಪದ ಪರಿಷತ್ತು ಮೂಡಲಪಾಯ ಯಕ್ಷಗಾನ ತರಬೇತಿ ಕೇಂದ್ರವನ್ನು ತೆರೆದು ಮೂಡಲಪಾಯ ಯಕ್ಷಗಾನದ ಸಮರ್ಥ ಭಾಗವತರುಗಳಲ್ಲಿ ಒಬ್ಬರಾದ ತಿಪಟೂರು ತಾಲ್ಲೂಕು ಅರಳಗುಪ್ಪೆಯ ಶ್ರೀ ಚನ್ನಬಸವಯ್ಯ ಅವರಿಗೆ ತರಬೇತಿ ಹೊಣೆ ಹೊರಿಸಿತು. ಫಲವಾಗಿ ಮೂಡಲಪಾಯ ಯಕ್ಷಗಾನದ ಇತಿಹಾಸದಲ್ಲೇ ಮೊತ್ತ ಮೊದಲ ಬಾರಿಗೆ ಸಂಪೂರ್ಣ ಮಹಿಳೆಯರೇ ಅಭಿನಯಿಸಿರುವ 'ರತಿಕಲ್ಯಾಣ' ಎಂಬ ಮೂಡಲಪಾಯ ಯಕ್ಷಗಾನ ಪ್ರಸಂಗವನ್ನು ಮಹಿಳೆಯರಿಗೆ ತರಬೇತಿ ನೀಡಿ ಸಿದ್ಧಪಡಿಸಿದ ಚನ್ನಬಸವಯ್ಯನವರು, ರಂಗ ನಿರ್ದೇಶಕರ ಬೈರ್ನಳ್ಳಿ ಶಿವರಾಂ ಅವರ ಸಹಕಾರದೊಂದಿಗೆ ತಾ: 07.02.2004ರಂದು ಜಾನಪದ ಸಿರಿಭುವನದಲ್ಲಿ ಸಾದರಪಡಿಸಿದರು.

3. ಜಾನಪದ ಚಿಂತನ; ಮಂಥನ

3.1 1997ರ ಏಪ್ರಿಲ್ 12ರಿಂದ 14ರ ವರೆಗೆ ಮೂರುದಿನಗಳ ಕಾಲ ಜಾನಪದ ಲೋಕದಲ್ಲಿ ಜಾನಪದ ಅಭಿರುಚಿ ಶಿಬಿರವನ್ನು ನಡೆಸಲಾಯಿತು. ಶ್ರೀ ಎಚ್.ಎಲ್.ನಾಗೇಗೌಡರು ಡೊಳ್ಳು ಬಾರಿಸುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಗುಲ್ಬರ್ಗಾ, ರಾಯಚೂರು, ಚಿತ್ರದುರ್ಗ, ತುಮಕೂರು ಮುಂತಾದ ಕಡೆಗಳಿಂದ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ವಿವಿಧ ವಿದ್ವಾಂಸರುಗಳು ಶಿಬಿರದಲ್ಲಿ ಉಪನ್ಯಾಸಗಳನ್ನು ನಡೆಸಿಕೊಟ್ಟರು. ಡಾ. ಚಕ್ಕೆರೆ ಶಿವಶಂಕರ್ ಶಿಬಿರದ ನಿರ್ದೇಶಕರಾಗಿ ಉಸ್ತುವಾರಿ ವಹಿಸಿದ್ದರು.

3.2 1997ರ ಜುಲೈ 18ರಿಂದ 20ರ ವರೆಗೆ 3 ದಿನಗಳ ಕಾಲ ಜನಪದ ಕೂಟ ಮೇಳಕ್ಕಾಗಿ ಕಥಾಧಾರೆ ಮತ್ತು ರೂಪಕ ರಚನಾ ಶಿಬಿರವು ಜರುಗಿತು. ನಾಗೇಗೌಡರು ಮಾತನಾಡಿ ಜನಪದ ಗೀತೆ, ಕಥೆ, ಕಥನಗೀತೆಗಳನ್ನು ರೂಪಕಗಳನ್ನಾಗಿ ಮಾರ್ಪಡಿಸಿ ಪ್ರದರ್ಶನಕ್ಕಿಳಿಸುವ ಸಾಧ್ಯತೆಗಳತ್ತ ಶಿಬಿರಾರ್ಥಿಗಳ ಗಮನ ಸೆಳೆದರು. ಡಾ. ಕಾಳೇಗೌಡ ನಾಗವಾರ, ರಂಗಾಯಣದ ನಿರ್ದೇಶಕರಾದ ಶ್ರೀ ಬಸವಲಿಂಗಯ್ಯ ಮತ್ತು ಶ್ರೀ ಗಂಗಾಧರಸ್ವಾಮಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಬರಹಗಾರರು ಮತ್ತು ಕಲಾವಿದರು ಭಾಗವಹಿಸಿದ್ದ ಶಿಬಿರದ ನಿರ್ದೇಶಕರಾಗಿ ಡಾ. ಚಕ್ಕೆರೆ ಶಿವಶಂಕರ್ ಉಸ್ತುವಾರಿ ವಹಿಸಿದ್ದರು.

3.3 1998ರ ನವೆಂಬರ್ 20ರಿಂದ 22ರ ವರೆಗೆ 3 ದಿನಗಳ ಕಾಲ

ಅಖಿಲ ಕರ್ನಾಟಕ ಜಾನಪದ ಸಂಶೋಧನಾ ಕಮ್ಮಟವು ಜಾನಪದ ಲೋಕದಲ್ಲಿ ಜರುಗಿತು. ಕಮ್ಮಟವನ್ನು ಉದ್ಘಾಟಿಸಿ ಮಾತನಾಡಿದ ಎಚ್.ಎಲ್.ನಾಗೇಗೌಡರು 'ಫಲವತ್ತಾದ ಗದ್ದೆಯಲ್ಲಿ ಬತ್ತ ಬೆಳೆದು ಮೆದೆ ಹಾಕಿದ್ದೇನೆ. ಅದರಲ್ಲಿ ಒಂದೊಂದು ಕಂತೆಯನ್ನು ತೆಗೆದು ಬಡಿದು ಬತ್ತ ಮಾಡಿ, ಅಕ್ಕಿ ಮಾಡಿ ಅದರ ಪ್ರಯೋಜನ ಪಡೆಯಿರಿ. ಜಾನಪದ ಕ್ಷೇತ್ರದಲ್ಲಿ ಸಂಶೋಧನೆಗೆ ಬೇಕಾದ ಭೂಮಿಕೆಯನ್ನು ಸಿದ್ಧಪಡಿಸಿದ್ದೇನೆ. ಅದರ ಸದುಪಯೋಗವನ್ನು ಪಡೆಯಬೇಕಿದೆ' ಎಂದು ಅಭಿಪ್ರಾಯಪಟ್ಟರು. ನಾಡಿನ ವಿವಿಧ ವಿಶ್ವವಿದ್ಯಾಲಯಗಳಿಂದ ಆಗಮಿಸಿದ್ದ ಜಾನಪದ ಪ್ರಾಧ್ಯಾಪಕರುಗಳು, ಜಾನಪದದ ರೂಪ, ಅರ್ಥ, ಸಂದರ್ಭ, ಬುಡಕಟ್ಟು ಅಧ್ಯಯನ, ಜಾನಪದ ಸಂಸ್ಕೃತಿ, ಜನಪದ ಕಥೆ, ಅಭಿವ್ಯಕ್ತಿ, ಆಚರಣೆಗಳು, ಕ್ಷೇತ್ರಕಾರ್ಯ, ಜಾನಪದದ ಇತ್ತೀಚಿನ ಒಲವುಗಳು, ಜನಪದ ಕಲಾವಿದರ ಸಾಹಚರ್ಯ ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸ ನೀಡಿದರು. ಶಿಬಿರದ ನಿರ್ದೇಶಕರಾಗಿ ಡಾ. ಚಕ್ಕರೆ ಶಿವಶಂಕರ್ ಉಸ್ತುವಾರಿ ವಹಿಸಿದ್ದರು.

3.4 ಜನಪದ ಭಾಷೆ–ಛಂದಸ್ಸಿನಲ್ಲಿ ಅಕ್ಷರ ಕಲಿತವರು ಬರೆದು ಸೇರಿಸಿ ಹಾಡಿರುವ ಜನಪದ ಗೀತೆಗಳ ಕ್ಯಾಸೆಟ್‌ಗಳಲ್ಲಿನ ಹಾಡುಗಳನ್ನೇ ನಿಜವಾದ ಮೂಲ ಜನಪದ ಗೀತೆಗಳೆಂದು ಕುರಿತು ವಿದ್ಯಾರ್ಥಿಗಳು, ತರುಣ ತರುಣಿಯರು ಶಾಲಾ ಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಹಾಡುತ್ತಿದ್ದರೆ. ಮೂಲ ಜನಪದ ಗೀತೆ ಯಾವುದೆಂಬುದು ತಿಳಿಯದೆ ಹೊಸದಾಗಿ ಹಾಡು ಕಲಿಯುತ್ತಿರುವವರು ಗೊಂದಲಕ್ಕೆ ಗುರಿಯಾಗಿದ್ದಾರೆ. ಗೊಂದಲವನ್ನು ನಿವಾರಿಸಿ, ಮೂಲ ಜನಪದ ಗೀತಗಾಯನ ಕಲೆಯನ್ನು ಪ್ರೋತ್ಸಾಹಿಸಿ ಬೆಳೆಸುವ ದೃಷ್ಟಿಯಿಂದ ಕರ್ನಾಟಕ ಜಾನಪದ ಪರಿಷತ್ತು ಅಖಿಲ ಕರ್ನಾಟಕ ಮಟ್ಟದಲ್ಲಿ ಮೊದಲ ಬಾರಿಗೆ 2001ರ ಜನವರಿ 19ರಿಂದ 21ರ ವರೆಗೆ ಮೂರು ದಿನಗಳ ಕಾಲ ಜಾನಪದ ಸಂಗೀತ ಕಲಿಕೆ ಶಿಬಿರವನ್ನು ಹಮ್ಮಿಕೊಂಡು, ಶಿಬಿರಾರ್ಥಿಗಳಿಗೆ ಸೋಬಾನೆ ಪದಗಳು, ಬೀಸುವ ಪದಗಳು, ದೇವರ ಪದಗಳು, ತತ್ವಪದಗಳು, ಕಂಸಾಳೆ ಪದಗಳು, ಚೌಡಿಕೆ ಪದಗಳನ್ನು ಕಲಿಸಲಾಯಿತು.

ಗ್ರಾಮೀಣ ಪ್ರದೇಶಗಳಿಂದ ಮೂಲ ಹಾಡುಗಾರರನ್ನು ಕರೆಸಿ ಕಲಿಸಿದ ಮೂಲ ಜನಪದ ಗೀತೆಗಳ ಮಟ್ಟು, ದನಿ ಧಾಟಿಗಳು, ರಾಗದ ಸೊಗಸು, ಸಾಹಿತ್ಯದ ಸೊಗಡು ಶಿಬಿರಾರ್ಥಿಗಳನ್ನು ರೋಮಾಂಚನಗೊಳಿಸಿದವು. ಸೋಬಾನೆ

ರಾಮಯ್ಯ, ಮುದಿಗೆರೆ ಚಿಕ್ಕಮ್ಮ, ತಲಕಾಡು ಮರಿನಂಜಮ್ಮ, ಬನ್ನೂರು ಕೆಂಪಮ್ಮ, ಭಜಗೂರು ಎಲ್ಲಯ್ಯ, ಡಾ. ಪಿ.ಕೆ. ರಾಜಶೇಖರ್ ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಡಾ. ಚಕ್ಕೆರೆ ಶಿವಶಂಕರ್ ಶಿಬಿರದ ಸಾರಥ್ಯ ವಹಿಸಿದ್ದರು. ಮೂರು ದಿನಗಳ ಕಾಲವೂ ನಾಗೇಗೌಡರು ಶಿಬಿರದಲ್ಲಿ ಪಾಲ್ಗೊಂಡು ಶಿಬಿರಾರ್ಥಿಗಳಿಗೆ ಜನಪದ ಸಂಗೀತದ ಬಗ್ಗೆ ತಿಳುವಳಿಕೆ ನೀಡಿದರು.

3.5 ರಸಋಷಿ ಕುವೆಂಪು ಅವರ 98ನೆಯ ಹುಟ್ಟುಹಬ್ಬದ ಅಂಗವಾಗಿ ತಾ: 29.12.2001ರಂದು ಜಾನಪದ ಲೋಕದಲ್ಲಿ ಕುವೆಂಪು ಸಾಹಿತ್ಯ ಚಿಂತನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಾಗೇಗೌಡರು ಮಾತನಾಡಿ 'ಕುವೆಂಪು ನನಗೆ ಆದರ್ಶ ಮತ್ತು ನನ್ನ ಬರವಣಿಗೆಗೆ ಪ್ರೇರಕ ಶಕ್ತಿಯಾಗಿದ್ದರು. ಜಾನಪದ ಲೋಕದಲ್ಲಿ ಅವರ ಸಾಹಿತ್ಯ ಚಿಂತನೆ ನಡೆಯುತ್ತಿರುವುದು ನನಗೆ ವೈಯಕ್ತಿಕವಾಗಿ ಬಹಳ ಸಂತೋಷವನ್ನುಂಟು ಮಾಡಿದೆ ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಎಚ್.ಎಲ್.ನಾಗೇಗೌಡರು ರಚಿಸಿದ 'ಮಲೆನಾಡ ವಾಲ್ಮೀಕಿ' ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರು ಅವರು ಬಿಡುಗಡೆ ಮಾಡಿದರು. ವಿಶ್ರಾಂತ ನ್ಯಾಯಮೂರ್ತಿಗಳಾದ ಶ್ರೀ ಎ.ಜೆ. ಸದಾಶಿವ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ನಾಡಿನ ಸಂಸ್ಕೃತಿ ಚಿಂತಕರಾದ ಪ್ರೊ. ಬಸವರಾಜ ಕಲ್ಗುಡಿ ವಹಿಸಿದ್ದರು. 'ಕುವೆಂಪು ಸಾಹಿತ್ಯ : ಆಧುನೀಕರಣ ಪ್ರಕ್ರಿಯೆ' ಕುರಿತು ಪ್ರೊ. ಎಂ.ಜಿ.ಚಂದ್ರಶೇಖರಯ್ಯ, 'ವಸಾಹತುಶಾಹಿ ಪ್ರಭಾವ ಮತ್ತು ಕುವೆಂಪು ಸಾಹಿತ್ಯ' ಕುರಿತು ಡಾ. ರಂಗಾರೆಡ್ಡಿ ಕೋಡಿರಾಂಪುರ 'ಕುವೆಂಪು ವಿಚಾರಗಳು: ಕನ್ನಡತ್ವದ ನೆಲೆ' ಕುರಿತು ಪ್ರೊ. ಬೈರಮಂಗಲ ರಾಮೇಗೌಡ ಮಾತನಾಡಿದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ. ಜಯಪ್ರಕಾಶಗೌಡ ವಹಿಸಿದ್ದರು. ಕುವೆಂಪು ಸಾಹಿತ್ಯ ಚಿಂತನೆ ಕಾರ್ಯಕ್ರಮದ ಅಂಗವಾಗಿ ಸಂಜೆ ಬೆಂಗಳೂರಿನ ನಂದನ ಕಲಾ ತಂಡದವರು ಸಾದರಪಡಿಸಿದ ಕುವೆಂಪು ವಿರಚಿತ 'ರಕ್ತಾಕ್ಷಿ' ಹಾಗೂ ಬೈರ್‍ನಳ್ಳಿ ಶಿವರಾಂ ನಿರ್ದೇಶನದ 'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ನಾಟಕಗಳು ಪ್ರೇಕ್ಷಕರ ಮನಸೂರೆಗೊಂಡವು. ಕಾರ್ಯಕ್ರಮದ ಬೌದ್ಧಿಕ ಜವಾಬ್ದಾರಿಯನ್ನು ಚಕ್ಕೆರೆ ಶಿವಶಂಕರ್ ನಿರ್ವಹಿಸಿದರು.

ಕರ್ನಾಟಕ ಜಾನಪದ ಪರಿಷತ್ತಿನ ಸಾಂಸ್ಥಿಕ ಚಟುವಟಿಕೆಗಳು ಮತ್ತು

ಕ್ರಿಯಾಶೀಲ ಜಾನಪದೀಯ ಚಟುವಟಿಕೆಗಳು ದಿನೇ ದಿನೇ ಬಿರುಸು ಪಡೆದುಕೊಳ್ಳುತ್ತಾ ಬಂದಂತೆ, ವಿನಾಕಾರಣ ಅಡ್ಡಿ ಆತಂಕಗಳು ಸಹ ಎದುರಾದವು. ದೀರ್ಘ ಕಾಲದ ಸಂಸ್ಥೆಗಳುತಮ್ಮ ಖರ್ಚು-ವೆಚ್ಚಗಳಿಗಾಗಿ ಸ್ವಾವಲಂಬಿಗಳಾಗಬೇಕು. ತಮ್ಮದೇ ಆದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕೆಂಬ ಸರ್ಕಾರದ ನೀತಿಗೆ ಅನುಗುಣವಾಗಿ ಕರ್ನಾಟಕ ಜಾನಪದ ಪರಿಷತ್ತಿಗೆ ಸರ್ಕಾರವು ನೀಡುತ್ತಿದ್ದ ವಾರ್ಷಿಕ ಅನುದಾನದ ಮೊತ್ತವನ್ನು ಮೊಟಕುಗೊಳಿಸುತ್ತಾ ಬಂದಿತು. ಫಲವಾಗಿ ಪರಿಷತ್ತಿನ ಚಟುವಟಿಕೆಗಳನ್ನು ನಡೆಸುವುದಿರಲಿ, ಪರಿಷತ್ತಿನ 30 ಮಂದಿ ಸಿಬ್ಬಂದಿಗೆ ಮಾಸಿಕ ವೇತನ ನೀಡಲು ಸಹ ಕಷ್ಟವಾಗುತ್ತಾ ಬಂದಿತು. ಆದಿಚುಂಚನಗಿರಿ ಶ್ರೀಮಠದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ಈ ಕಷ್ಟಕಾಲದಲ್ಲಿ ನೆರವಿಗೆ ಬಂದರಾದರೂ, ಅದು 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಯಂತಾಯಿತು. ತನ್ನ ಎಲ್ಲಾ ಖರ್ಚು ವೆಚ್ಚಗಳಿಗೂ ಸರ್ಕಾರದ ಅನುದಾನವನ್ನೇ ಅವಲಂಬಿಸಿದ್ದ ಪರಿಷತ್ತಿಗೆ ಕೈಕಟ್ಟಿ ಹೋಯಿತು. ನಾಗೇಗೌಡರು ಇದರಿಂದಾಗಿ ಮುಂದುಗಾಣದೆ ಧೃತಿಗೆಟ್ಟರು. ಪರಿಷತ್ತಿಗೆ ಒದಗಿದ ಪರಿಸ್ಥಿತಿಯಿಂದ ತೀವ್ರ ಮಾನಸಿಕ ಯಾತನೆಗೆ ಒಳಗಾದರು. ಇದು ಅವರ ಆರೋಗ್ಯದ ಮೇಲೂ ಪರಿಣಾಮ ಬೀರಿತು. 90ರ ಹರೆಯದ ಗೌಡರು, ತಾವು ಶ್ರಮವಹಿಸಿ ಕಟ್ಟಿದ ಜಾನಪದ ಲೋಕ ಆರ್ಥಿಕ ನೆರವಿನ ಕೊರತೆಯಿಂದ ನರಳಬೇಕಾಗಿ ಬಂದ ಸನ್ನಿವೇಶವನ್ನು ಕಂಡು ಕುಸಿದುಹೋದರು. 2005ರ ಮಾರ್ಚ್ ಒಂದರಂದು ಜಾನಪದ ಲೋಕವನ್ನು ಮುಚ್ಚಿಬಿಡುವ ತೀರ್ಮಾನವನ್ನು ತೆಗೆದುಕೊಂಡರು. ಇದು ಕನ್ನಡ ನಾಡಿನ ಸಾಂಸ್ಕೃತಿಕ ವಲಯದಲ್ಲಿ ತೀವ್ರ ದಿಗ್ಭ್ರಮೆಯನ್ನುಂಟು ಮಾಡಿದ ಸುದ್ದಿಯಾಗಿ ಪರಿಣಮಿಸಿತು. ಸಮೂಹ ಮಾಧ್ಯಮಗಳು ಜಾನಪದ ಲೋಕದ ನೆರವಿಗೆ ಬಂದವಾದರೂ, ಏನೂ ಪ್ರಯೋಜನವಾಗಲಿಲ್ಲ. ಆಘಾತವನ್ನು ತಡೆದುಕೊಳ್ಳಲಾರದೆ ಜಾನಪದ ಲೋಕವನ್ನು ಕಟ್ಟಿ ಬೆಳೆಸಿದ ಶ್ರದ್ಧಾವಂತ ಜಾನಪದ ಚೇತನವಾದ ಎಚ್.ಎಲ್. ನಾಗೇಗೌಡರು 2005ರ ಸೆಪ್ಟೆಂಬರ್ 22ರಂದು ಹೃದಯಾಘಾತದಿಂದ ದೈವಾಧೀನರಾದರು. ನಾಡಿನ ಎಲ್ಲೆಡೆ ಶೋಕ ಮಡುಗಟ್ಟಿತು. ಸಮೂಹ ಮಾಧ್ಯಮಗಳು ಗೌಡರ ಸಾರ್ಥಕ ಬದುಕನ್ನು ಕುರಿತು ಹಾಡಿ ಹರಸಿದವು. ದೂರದರ್ಶನದ ಚಾನೆಲ್ಲುಗಳು ಗೌಡರ ಕಾಯಕವನ್ನು ಸ್ಮರಿಸಿ ಗೌರವಿಸಿದವು.

ಶ್ರೀ ಎಚ್.ಎಲ್.ನಾಗೇಗೌಡರ ನಿಧನದಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಕರ್ನಾಟಕ ಜಾನಪದ ಪರಿಷತ್ತಿನ ಸಂಸ್ಥಾಪಕ ಸದಸ್ಯರು, ಹಿರಿಯ

ಗಾಂಧಿವಾದಿಗಳು, ಜನಾನುರಾಗಿಗಳು ಆದ ಶ್ರೀ ಜಿ.ನಾರಾಯಣ ಅವರನ್ನು ಪರಿಷತ್ತಿನ ಆಡಳಿತ ಮಂಡಳಿಯು ಸರ್ವಾನುಮತದಿಂದ ಆಯ್ಕೆಮಾಡಿತು. ವಿಶ್ರಾಂತ ಐ.ಎ.ಎಸ್. ಅಧಿಕಾರಿಗಳಾದ ಶ್ರೀ ಟಿ. ತಿಮ್ಮೇಗೌಡ ಅವರನ್ನು ಕಾರ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ನಾಗೇಗೌಡರ ಜತೆಯಲ್ಲಿ ಮೇನೇಜಿಂಗ್ ಟ್ರಸ್ಟಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ನಾಗೇಗೌಡರ ಸುಪುತ್ರಿಯಾದ ಶ್ರೀಮತಿ ಇಂದಿರಾ ಬಾಲಕೃಷ್ಣ ಅವರು ನಾಗೇಗೌಡರ ಆಶಯಕ್ಕನುಗುಣವಾಗಿ ಕಳೆದ 10 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ ಮತ್ತು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ ಡಾ. ಚಕ್ಕೆರೆ ಶಿವಶಂಕರ್ ಅದೇ ಹುದ್ದೆಗಳಲ್ಲಿ ಮುಂದುವರಿದರು.

ನಾಡೋಜ ಡಾ. ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ, ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಕರ್ನಾಟಕ ಪತ್ರಿಕಾ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು ಅಪಾರವಾದ ಆಡಳಿತಾನುಭವವುಳ್ಳವರಾಗಿದ್ದರು. ಯೋಜನಾ ಪಟುಗಳಾಗಿದ್ದರು. ಯಾವುದೇ ಸರ್ಕಾರವಿರಲಿ, ಅದಕ್ಕೆ ತಕ್ಕ ಯೋಜನೆಗಳನ್ನು ರೂಪಿಸಿ ಸರ್ಕಾರದಿಂದ ಹಣ ತಂದು ಅದು ಪೋಲಾಗದಂತೆ ಸಮರ್ಪಕವಾಗಿ ಖರ್ಚು ಮಾಡುವಂತಹ ಕಾರ್ಯನೈಪುಣ್ಯತೆ ಅವರಿಗೆ ಸಿದ್ಧಿಸಿದ್ದಿತು. ಶ್ರೀ ನಾರಾಯಣ ಅವರು ಅಧ್ಯಕ್ಷರಾದ ಕೂಡಲೇ ಮೊದಲು ಮಾಡಿದ್ದು ಜಾನಪದ ತ್ರೈವಾರ್ಷಿಕ ಯೋಜನೆಯ ರೂಪುರೇಷೆಗಳ ಸಿದ್ಧತೆ. ಶ್ರೀ ಜಿ.ನಾರಾಯಣ ಅವರ ಕಾರ್ಯವೈಖರಿಯನ್ನು ಅರಿತಿದ್ದ ಪರಿಷತ್ತಿನ ಕಾರ್ಯದರ್ಶಿ ಡಾ. ಚಕ್ಕೆರೆ ಶಿವಶಂಕರ್ ಅವರು ನಾರಾಯಣ ಅವರ ಆಶಯಗಳಿಗೆ ಅನುಗುಣವಾಗಿ ಜಾನಪದ ತ್ರೈವಾರ್ಷಿಕ ಯೋಜನೆಯನ್ನು ಸಿದ್ಧಪಡಿಸಿಕೊಟ್ಟರು. ಈ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿದ ನೂತನ ಅಧ್ಯಕ್ಷರು ವಾರ್ಷಿಕ 1 ಕೋಟಿ ರೂ.ಗಳ ಅನುದಾನ ಪರಿಷತ್ತಿಗೆ ಬರುವಂತೆ ಆಗುಮಾಡಿದರು. ನಾಗೇಗೌಡರ ಬದುಕಿನ ಕೊನೆಯ ದಿನಗಳಲ್ಲಿ ಪರಿಷತ್ತಿಗೆ ಎದುರಾಗಿದ್ದ ವಿಪತ್ತು ಇದರಿಂದ ನಿವಾರಣೆಯಾಗಿ ಸಿಬ್ಬಂದಿ ಸಂಬಳಕ್ಕೆ ಮತ್ತು ಪರಿಷತ್ತಿನ ಚಟುವಟಿಕೆ ಗಳಿಗೆ ಆರ್ಥಿಕ ನೆರವು ದೊರೆಯುವಂತಾಯಿತು. ಪರಿಷತ್ತಿನ ಜಾನಪದ ತೇರು ಸುಗಮವಾಗಿ ಚಲಿಸುವಂತಾಯಿತು.

ಕರ್ನಾಟಕ ಜಾನಪದ ಪರಿಷತ್ತಿನ ನಿರಂತರ ಚಟುವಟಿಕೆಗಳು, ಮಾಸಿಕ ಪ್ರದರ್ಶನಗಳು ಮತ್ತು ವಾರ್ಷಿಕ ಉತ್ಸವಗಳ ಜತೆಗೆ ಶ್ರೀ ಜಿ. ನಾರಾಯಣ ಅವರು ಜನಪದ ಕಲೆಗಳ ತರಬೇತಿಗೆ ಹೆಚ್ಚು ಒತ್ತು ನೀಡಿದರು. ನಶಿಸಿ ಹೋಗುತ್ತಿರುವ ಜನಪದ ಕಲೆಗಳನ್ನು ಉಳಿಸಿ ಬೆಳೆಸಬೇಕಾದರೆ, ಸರಿಯಾದ ಮಾರ್ಗ ಅವುಗಳನ್ನು ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳ ತರುಣ ತರುಣಿಯರಿಗೆ ಕಲಿಸುವುದರ ಮೂಲಕ ವರ್ಗಾವಣೆ ನಡೆಸಬೇಕು. ಇಲ್ಲವಾದಲ್ಲಿ ಅವುಗಳ ಉಳಿವು ಅಸಾಧ್ಯ ಎಂಬುದನ್ನು ಚೆನ್ನಾಗಿ ಅರಿತಿದ್ದ ಶ್ರೀ ನಾರಾಯಣ ಅವರು ನಾಡಿನಾದ್ಯಂತ ಜನಪದ ಕಲೆಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡರು.

ಕರ್ನಾಟಕದ ಪ್ರಾತಿನಿಧಿಕ ಕಲೆಗಳನ್ನು ಸಂಕಲಿಸಿ 'ಕರ್ನಾಟಕ ಜನಪದ ಕಲೆಗಳು' ಎಂಬ ಸಾಕ್ಷ್ಯಚಿತ್ರವನ್ನು ಸಿದ್ಧಪಡಿಸಿ ಶಾಲಾ ಕಾಲೇಜುಗಳು, ಸಂಘ ಸಂಸ್ಥೆಗಳಲ್ಲಿ ಪ್ರದರ್ಶಿಸುವುದರ ಮೂಲಕ ಹೊಸ ಅರಿವನ್ನು ಉಂಟುಮಾಡಿದರು. ಕರ್ನಾಟಕ ಜಾನಪದ ಪರಿಷತ್ತಿನ ವೆಬ್‌ಸೈಟ್ ಸಿದ್ಧಪಡಿಸಿ ಅಂತರ್ಜಾಲದಲ್ಲಿ ಅಳವಡಿಸಲು ಕಾರಣರಾದರು. ತ್ರೈವಾರ್ಷಿಕ ಜಾನಪದ ಪುಸ್ತಕಮಾಲೆ ಮತ್ತು ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದರು. ಇದೀಗ 2010ರ ಮೇ 24, 25 ಮತ್ತು 26 ಮೂರು ದಿನಗಳ ಕಾಲ ರಾಷ್ಟ್ರಮಟ್ಟದಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಬೆಳ್ಳಿಹಬ್ಬದ ಆಚರಣೆಯನ್ನು ಹಮ್ಮಿಕೊಂಡಿರುತ್ತಾರೆ.

ಸಾವಿರಾರು ವರ್ಷಗಳಿಂದ ನಮ್ಮ ಜನರ ಬದುಕಿಗೆ ಸ್ಫೂರ್ತಿ ನೀಡಿ ನಡೆಸಿಕೊಂಡು ಬರುತ್ತಿರುವ ಜಾನಪದದ ಅಂಶಗಳನ್ನು ಸಾಧ್ಯವಾದಷ್ಟು ಉಳಿಸಿಕೊಂಡು, ಹೊಸ ವಾತಾವರಣಕ್ಕೆ ಹೊಂದುವಂತೆ ಬಳಸಿಕೊಂಡು ಬರಲು ಸಂಘಟಿತ ಪ್ರಯತ್ನ ನಡೆಯಬೇಕಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಗ್ರಾಮಾಂತರ ಯುವಕರು ಜಾನಪದಕ್ಕಾಗಿಯೇ ಮೀಸಲಾದ ಸಂಘಟನೆಗಳನ್ನು ರಚಿಸಿಕೊಂಡು ದುಡಿಯುವುದು ಅಗತ್ಯವಿದೆ. ಜಾನಪದ ವಾತಾವರಣವು ಜೀವಂತವಾಗಿರುವಂತೆ ನೋಡಿಕೊಳ್ಳುವುದರಲ್ಲಿ ಯುವ ಜನಾಂಗದ ಪಾತ್ರ ದೊಡ್ಡದು. ಈ ದಿಸೆಯಲ್ಲಿ ಇನ್ನು ಮುಂದೆ ಕರ್ನಾಟಕ ಜಾನಪದ ಪರಿಷತ್ತು ಕಾರ್ಯನಿರ್ವಹಿಸಬೇಕಾದ ಅಗತ್ಯ ಇದೆ.

ಕರ್ನಾಟಕ ಜಾನಪದ ಪರಿಷತ್ತು ಕಳೆದ 25 ವರ್ಷಗಳಿಂದ ಕನ್ನಡ ಜಾನಪದ

ಕ್ಷೇತ್ರದಲ್ಲಿ ಗಣನೀಯ ಸಾಧನೆಗೈದಿದೆ. ಪ್ರಸ್ತುತ ನಾಡೋಜ ಡಾ ಜಿ.ನಾರಾಯಣ ಅವರು ನಾಡೋಜ ಎಚ್.ಎಲ್. ನಾಗೇಗೌಡರ ಸ್ಮರಣೆ ಹಾಗೂ ಸ್ಫೂರ್ತಿಯಲ್ಲಿ ತ್ರೈವಾರ್ಷಿಕ ಜಾನಪದ ಯೋಜನೆಯನ್ನು ಹಮ್ಮಿಕೊಂಡು ಮುನ್ನಡೆಸುತ್ತಾ ಬಂದಿದ್ದಾರೆ. ಜಾಗತೀಕರಣವು ದೇಶೀ ಸಂಸ್ಕೃತಿಯ ಮೇಲೆ ನಡೆಸುವ ದಾಳಿಯನ್ನು ತಡೆಗಟ್ಟಬೇಕಾದರೆ ನಮ್ಮ ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆ ಬದುಕಿನ ವಿಧಾನಗಳು ಎಲ್ಲವೂ ಪುನರುಜ್ಜೀವನಗೊಳ್ಳಲೇಬೇಕು. ಈ ನಿಟ್ಟಿನಲ್ಲಿ ಪರಿಷತ್ತು ಈ ಬೃಹತ್ ಯೋಜನೆಯನ್ನು ರೂಪಿಸಿರುತ್ತದೆ. ಸಂಘ ಸಂಸ್ಥೆಗಳಿಗೆ ಸರ್ಕಾರದ ನೆರವು ಅತ್ಯವಶ್ಯಕ. ಜತೆಗೆ ಸಾರ್ವಜನಿಕರ, ಸಂಘ ಸಂಸ್ಥೆಗಳ, ಕೈಗಾರಿಕೋದ್ಯಮಿಗಳ, ವಾಣಿಜ್ಯೋದ್ಯಮಿಗಳ, ದಾನಿಗಳ ಸಹಕಾರವೂ ಅತ್ಯಾವಶ್ಯಕ. ಸಮಸ್ತರೂ ಕೈಗೂಡಿಸಿದರೆ ಮಾತ್ರವೇ ಜಾನಪದ ತೇರು ಮುಂದುರುಳಲು ಸಾಧ್ಯ.*

❐

---

* ಈ ಕಿರುಪುಸ್ತಿಕೆಯನ್ನು ಸಿದ್ಧಪಡಿಸುವಲ್ಲಿ ಶ್ರೀ ಎಚ್.ಎಲ್. ನಾಗೇಗೌಡರ 'ಜೀವನಯಾತ್ರೆ' ಮತ್ತು 'ಜಾನಪದಯಾತ್ರೆ' ಸಂಪುಟಗಳಿಗೆ ಋಣಿಯಾಗಿರುತ್ತೇನೆ.



ವಿಶಿಷ್ಟ ಸಾಧಕನಿಗೆ ಜೀವನ ಚರಿತ್ರೆ ಇರುವಂತೆ, ವಿಶೇಷ ಸಾಂಸ್ಕೃತಿಕ ಸಂಸ್ಥೆಗೆ ಸಾಂಸ್ಥಿಕ ಚರಿತ್ರೆ ಇರುತ್ತದೆ. ಕನ್ನಡದ ಸಂದರ್ಭದಲ್ಲಿ ಕರ್ನಾಟಕ ಜಾನಪದ ಪರಿಷತ್ತು ಗಮನಾರ್ಹವಾದ ಸಾಂಸ್ಕೃತಿಕ ಸಂಸ್ಥೆಯಾಗಿದೆ. ಜಾನಪದದ ಮಹಾನ್ ಕನಸುಗಾರ ದಿವಂಗತ ನಾಡೋಜ ಎಚ್.ಎಲ್. ನಾಗೇಗೌಡರ ದೂರದೃಷ್ಟಿಯ ಫಲವಾಗಿ ೧೯೭೯ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ಜಾನಪದ ಪರಿಷತ್ತು ಮೂಡಿಸಿರುವ ಹೆಜ್ಜೆ ಗುರುತುಗಳು ಮೌಲಿಕವಾಗಿವೆ. ಅವುಗಳ ವಿಹಂಗಮ ನೋಟ ಪ್ರಸ್ತುತ ಪುಸ್ತಕದ ಆಶಯವಾಗಿದೆ. ಮಹಾನ್ ಸಂಸ್ಥೆ ಮತ್ತು ಸಂಸ್ಥಾಪಕರನ್ನು ಹತ್ತಿರದಿಂದ ಬಲ್ಲಂತಹ ಡಾ. ಚಕ್ಕೆರೆ ಶಿವಶಂಕರ್ ಈ ಪುಸ್ತಕವನ್ನು ಬರೆದಿದ್ದಾರೆ.

■ ಪ್ರೊ. ಡಿ. ಲಿಂಗಯ್ಯ





ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು –560 054